ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 16 | ಏಪ್ರಿಲ್ 12–18, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಲೇಬರ್ ಕೋಡ್‌ಗಳ ಕಾಲದಲ್ಲಿ ಡಾ. ಅಂಬೇಡ್ಕರ್ ನೆನಪು



ಪಶ್ಚಿಮ ಬಂಗಾಲ ಸಂಯುಕ್ತ ಮೋರ್ಚಾ: ಹೊಸ ಹುರುಪು-ಆತ್ಮವಿಶ್ವಾಸ



ಮುಖಮಂತ್ರಿ ಕುರ್ಚಿ ಮತ್ತೆ ಅಲುಗಾಡುತ್ತಿದೆ

ಇದು ವ್ಯಾಕ್ಸಿನ್ ರಾಷ್ಟ್ರವಾದವಲ್ಲ ವ್ಯಾಕ್ಸಿನ್ ವರ್ಣಬೇಧ!!



ಜನತಾ ಪ್ರಣಾಳಿಕೆಯಾದ ಎಡರಂಗದ ಚುನಾವಣಾ ಪ್ರಣಾಳಿಕೆ



ಎರಡನೇ ಕೋವಿಡ್ ಅಲೆ ಮತ್ತು ಮೋದಿ ಸರ್ಕಾರದ ನಡೆ



ಇಡೀ ರಫೆಲ್ ವ್ಯವಹಾರದ ತನಿಖೆ ಅತ್ಯಗತ್ಯ

ಒಂದು ಫ್ರೆಂಚ್ ಮಾಧ್ಯಮ ತಾಣದಲ್ಲಿ, 36 ರಫೇಲ್ ಜೆಟ್ ಗಳನ್ನು ಖರೀದಿಸುವ ವ್ಯವಹಾರದಲ್ಲಿ ಒಬ್ಬ 'ಮಧ್ಯವರ್ತಿ'ಗೆ ಒಂದು ಮಿಲಿಯ ಯುರೋಗಳನ್ನು ಪಾವತಿ ಮಾಡಲಾಗಿದೆ ಎಂದು ಬಹಿರಂಗಗೊಂಡಿರುವುದು ರಫೆಲ್ ವ್ಯವಹಾರದಲ್ಲಿ ಲಂಚಗಳು ಮತ್ತು ಇತರ ಕಾನೂನುಬಾಹಿರ ಪಾವತಿಗಳ ಪ್ರಶ್ನೆಯನ್ನು ಮತ್ತೆ ಎತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಟಿಪ್ಪಣಿ ಮಾಡಿದೆ. ಈ ವರದಿ ದಸಾಲ್ಟ್ ಕಂಪನಿಯ 2017ರ ಲೆಕ್ಕಪತ್ರಗಳ ಒಂದು ವಿಶ್ಲೇಷಣೆಯನ್ನು ಆಧರಿಸಿದೆ ಎಂದು ಅದು ಹೇಳಿದೆ.

ರಫೆಲ್ ವ್ಯವಹಾರದ ಬಗ್ಗೆ ಒಂದು ತನಿಖೆಗೆ ಆದೇಶ ನೀಡಲು ಮೋದಿ ಸರ್ಕಾರ ಪಟ್ಟು ಹಿಡಿದು ನಿರಾಕರಿಸುತ್ತಿರುವುದು ಈ ವಿಷಯದಲ್ಲಿ ಅದು ಏನನ್ನೋ ಮರೆಮಾಚುತ್ತಿದೆ ಎಂಬ ಸಂದೇಹ ಮೂಡಿಸುತ್ತದೆ.

ಸಿಎಜಿ ವರದಿ ಕಾನೂನುಬಾಹಿರ ಪಾವತಿಗಳ ಪ್ರಶ್ನೆಯನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ ಎಂಬುದು ಸ್ವಯಂವೇದ್ಯ ಎಂದಿರುವ ಸಿಪಿಐ(ಎಂ) ಹಿಂದಿನ ಆರ್ಡರನ್ನು ರದ್ದು ಮಾಡುವ ಮತ್ತು 36 ವಿಮಾನಗಳಿಗೆ ಹೆಚ್ಚಿನ ವೆಚ್ಚದಲ್ಲಿ ಹೊಸ ಆರ್ಡರ್ ಕೊಟ್ಟಿರುವ ಈ ಇಡೀ ವ್ಯವಹಾರದ ಬಗ್ಗೆ ಒಂದು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ.

ಈಗ ರಸಗೊಬ್ಬರ ಬೆಲೆಗಳಲ್ಲಿ ವಿಪರೀತ ಏರಿಕೆ

ಮೋದಿ ಸರಕಾರ ರೈತರ ಆದಾಯಗಳನ್ನು ದ್ವಿಗುಣಗೊಳಿಸುವ ಬದಲು ಸಂಕಟಗಳನ್ನು ದ್ವಿಗುಣಗೊಳಿಸುತ್ತಿದೆ

– ಅಖಿಲ ಭಾರತ ಕಿಸಾನ್ ಸಭಾ

ಪುಟ 12 ನೋಡಿ

'ಆಹಾರ ನಿಗಮ ಉಳಿಸಿ, ಪಡಿತರ ವ್ಯವಸ್ಥೆ ಉಳಿಸಿ'

ದೇಶಾದ್ಯಂತ ರೈತರ ಆಗ್ರಹ



ಮೂರು ಕೃಷಿ ಕಾಯ್ದೆಗಳ ವಿರುದ್ಧ ತಮ್ಮ ಹೋರಾಟವನ್ನು ತೀವ್ರಗೊಳಿಸುತ್ತೆಪ್ರಿಲ್ 5 ರಂದು ದೇಶಾದ್ಯಂತ ರೈತರು "ಎಫ್‌ಸಿಐ ಬಚಾವೋ" ದಿನಾಚರಣೆ ನಡೆಸಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ ದೇಶಾದ್ಯಂತ ಎಫ್‌ಸಿಐ(ಭಾರತ ಆಹಾರ ನಿಗಮ) ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಿದರು. ಮಹಿಳೆಯರು, ಹಿರಿಯ ರೈತರು ಮತ್ತು ಯುವ ರೈತರು ಇದರಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದರು ಎಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಹೇಳಿದೆ. ಆಂಧ್ರಪ್ರದೇಶ, ಉತ್ತರಪ್ರದೇಶ, ಬಿಹಾರ, ಪಂಜಾಬ್, ಹರ್‍ಯಾಣ ಮತ್ತು ರಾಜಸ್ತಾನದಲ್ಲಿ ದೊಡ್ಡ ಧರಣಿಗಳು ನಡೆದವು.

ಕೃಷಿ ಉತ್ಪನ್ನಗಳ ಸಂಗ್ರಹಣೆ/ಖರೀದಿಗೆ ಸಂಬಂಧಪಟ್ಟಂತೆ ಸರಕಾರದ ಇತ್ತೀಚಿನ ಆದೇಶ ಎಫ್‌ಸಿಐನ್ನು ಕಳಚಿಹಾಕುವ ಗುರಿಸಾಧನೆಗಾಗಿ ಎಂದು ರೈತ ಮುಖಂಡರು ಹೇಳಿದ್ದಾರೆ. ಇದು ಎಂಎಸ್‌ಪಿ ಯಂತಹ ಪಾವತಿ ವಯವಸ್ಥೆಗೆ ನಬಾಧಕಾವಾಗುತ್ತದೆ, ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೂ ಬಾಧಿಸಿ ಬಡ ವಿಭಾಗಳಿಗೆ ಭಾರೀ ಏಟು ನೀಡುತ್ತದೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿಗಳಿಗೆ ಎಐಕೆಎಸ್ ಪತ್ರ–ಬಡಜನಗಳು ಉಪವಾಸ ಬೀಳದಂತೆ ನೋಡಿಕೊಳ್ಳಬೇಕು

ಈ ಸಂದರ್ಭದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಕೇಂದ್ರ ಸರಕಾರ ಎಫ್‌ಸಿಐಗೆ ಕೊಬೇಕಾದ ಬಾಕಿ ಹಣವನ್ನು ತೆರುತ್ತಿಲ್ಲ, ತನ್ನ ಆಹಾರ ಬಜೆಟನ್ನು ಪ್ರತಿ ವರ್ಷ ಇಳಿಸುತ್ತ ಬರುತ್ತಿದೆ ಎಂದು ನೆನಪಿಸಿದೆ.

"ಆಹಾರ ದಾಸ್ತಾನಿನ ನಿರ್ವಹಣೆ ವೆಚ್ಚ ಅಪಾರವಾಗಿದೆ, ಅಕ್ಕಿಗೆ ಕೆಜಿಗೆ 37ರೂ., ಗೋಧಿಗೆ 27ರೂ. ವೆಚ್ಚವಾಗುತ್ತದೆ ಎಂದು ಸರಕಾರವೇ ಹೇಳುತ್ತಿದೆ. ಆದರೆ ಕಳೆದ ಕೆಲವು ವರ್ಷಗಳಿಂದ ಎಫ್‌ಸಿಐ ಈ ಬಗ್ಗೆ ಮಾಡುತ್ತಿರುವ ವೆಚ್ಚಗಳನ್ನು ಭರಿಸದೆ ಬಾಕಿ ಇಟ್ಟುಕೊಂಡು ಎಫ್‌ಸಿಐ ಮೇಲೆ ಇಂದು 3.81 ಲಕ್ಷ ಕೋಟಿ ರೂ.ಗಳ ಸಾಲದ ಹೊರೆಯನ್ನು ಹಾಕಿದೆ ಎಂದು ಈ ಪತ್ರದಲ್ಲಿ ಎಐಕೆಎಸ್ ಅಧ್ಯಕ್ಷ ಡಾ. ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಹೇಳಿದ್ದಾರೆ.

ಈ ಸಾಲಕ್ಕೆ ಎಫ್‌ಸಿಐ 8ಶೇ.ದಷ್ಟು ಬಡ್ಡಿ ತೆರಬೇಕಾಗಿ ಬಂದಿದೆ. ಇನ್ನೊಂದೆಡೆಯಲ್ಲಿ ಕಳದೆ ಕೆಲವು ವರ್ಷಗಳಿಮದ ಎಫ್‌ಸಿಐನ ಬಜೆಟಿನಲ್ಲಿ ಕಡಿತವನ್ನು ಉಂಟುಮಾಡಲಾಗುತ್ತಿದೆ.

ಎಫ್‌ಸಿಐ ಖರೀದಿ ಕೇಂದ್ರಗಳಲ್ಲಿ ಕಡಿತ ಮಾಡಲಾಗಿದೆ. ಅಲ್ಲದೆ ಇತ್ತೀಚೆಗೆ ಎಫ್‌ಸಿಐ ತನ್ನ ಧಾನ್ಯಸಂಗ್ರಹಣೆ/ಖರೀದಿ ನಿಯಮಗಳನ್ನು ಬದಲಿಸಿರುವುದು ಭಾಗ ಬೆಳೆಗಾರರ ಸಮಸ್ಯೆಗಳನ್ನು ಹೆಚ್ಚಿಸಿದೆ ಎಂಬ ಸಂಗತಿಯತ್ತ ಎಐಕೆಎಸ್ ಈ ಪತ್ರದ ಮೂಲಕ ಸರಕಾರದ ಮತ್ತು ಸಾರ್ವಜನಿಕರ ಗಮನ ಸೆಳೆದಿದೆ.

"ಭಾರತ ಸರಕಾರದ ಮೇಲೆ ನಮ್ಮ ದೇಶದ ಆಹಾರ ಭದ್ರತೆಯ ಹೊಣೆಯಿದೆ. ಇದಕ್ಕೆ ಅದು ಆಹಾರಧಾನ್ಯಗಳನ್ನು ಖರೀದಿ ಮಾಡಿ ಸಂಗ್ರಹಿಸಿಡಬೇಕಾಗುತ್ತದೆ. ಸಂಕಷ್ಟಗಳ ಸಮಯದಲ್ಲಿ ಇವನ್ನು ಬಡಜನಗಳಿಗೆ ಹಂಚಿ ಅವರು ಉಪವಾಸ ಬೀಳದಂತೆ ನೋಡಿಕೊಳ್ಳಬೇಕಾಗಿದೆ. ಆಹಾರ ಸಬ್ಸಿಡಿಗೆ ಬಜೆಟ್ ನೀಡಿಕೆ ಹಲವು ವರ್ಷಗಳಿಂದ ಸುಮಾರು ರೂ.1.15,000 ಕೋಟಿಯಲ್ಲೇ ನಿಂತಿದೆ. ಈ ಗಹಣವನ್ನು ಕೂಡ ಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ಇಂದು 81.35 ಕೋಟಿ ಪಡಿತರ ಫಲಾನುಭವಿಗಳಿಗೆ ತಿಂಗಳಿಗೆ 5 ಕೆಜಿ ಆಹಾರಧಾನ್ಯಗಳನ್ನು ಒದಗಿಸಬೇಕು. ಪಡಿತರ ವ್ಯವಸ್ಥೆಯನ್ನು ಮುಚ್ಚಿದರೆ ಅವರೆಲ್ಲ ಮಾರುಕಟ್ಟೆಯಿಂದ ಖರೀದಿಸಬೇಕಾಗುತ್ತದೆ. ಈಗಾಗಲೇ ನೀತಿ ಆಯೋಗ ನಗರಪ್ರದೇಶಗಳಲ್ಲಿ 60% ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 40% ರೇಷನ್ ಕಾರ್ಡ್‌ಗಳ ಸಂಖ್ಯೆಯನ್ನು ಇಳಿಸಬೇಕು ಎಂದು ಶಿಫಾರಸು ಮಾಡಿದೆ. ಬಡವರು ಬಹಿರಂಗ ಮಾರುಕಟ್ಟೆಯಿಂದ ಖರೀದಿಸಬೇಕಾದರೆ ಅವರು ಉಪವಾಸವಿರಬೇಕಾಗುತ್ತದೆ, ಹಸಿವಿನಿಂದ ಸಾವುಗಳು ಹೆಚ್ಚುತ್ತವೆ." ಎಂದು ಎಐಕೆಎಸ್ ತನ್ನ ಪತ್ರದಲ್ಲಿ ಪ್ರಧಾನ ಮಂತ್ರಿಗಳನ್ನು ಎಚ್ಚರಿಸಿದೆ.

ಅದು ಪ್ರಧಾನ ಮಂತ್ರಿಗಳ ಮುಂದೆ ಈ ಕೆಳಗಿನ 6 ಬೇಡಿಕೆಗಳನ್ನು ಇಟ್ಟಿದೆ:

1.ಎಫ್‌ಸಿಐ ಬಜೆಟನ್ನು ಗಮನಾರ್ಹವಾಗಿ ಹೆಚ್ಚಿಸಿ, ಅದನ್ನು ಸಂಪೂರ್ಣವಾಗಿ ಬಳಸಿ ಅದನ್ನು ಬಲಪಡಿಸಬೇಕು. ಎಫ್‌ಸಿಐನ ಸಾಲ ಮತ್ತು ಬಡ್ಡಿಯನ್ನು ಸರಕಾರ ಸಂಪೂರ್ಣವಾಗಿ ತೆರಬೇಕು. ದೇಶಾದ್ಯಂತ ಎಫ್‌ಸಿಐನ ಸಂಗ್ರಹಣಾ ಕೇಂದ್ರಗಳನ್ನು ದೊಡ್ಡಪ್ರಮಾಣದಲ್ಲಿ ಹೆಚ್ಚಿಸಿ ರೈತರಿಗೆ ಕನಿಷ್ಟ ಬೆಂಬಲ ಬೆಲೆಗಳು ಸಿಗುವಂತೆ ಖಾತ್ರಿಪಡಿಸಬೇಕು.

2.ಎಲ್ಲ ಖರೀದಿಗಳನ್ನು ಎಂಎಸ್‌ಪಿ ದರಗಳಲ್ಲೇ ಮಾಡಬೇಕು, ಅದಕ್ಕಿಂತ ಕಡಿಮೆ ಬೆಲೆಗಳಲ್ಲಿ ಖರೀದಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಖರೀದಿ ಪ್ರಕ್ರಿಯೆಯನ್ನು ಕನಿಷ್ಟ ಸಮಯದಲ್ಲಿ ಮುಗಿಸಬೇಕು. ಚೀಲಗಳಿಲ್ಲ ಎಂಬಿತ್ಯಾದಿ ಕಾರಣಗಳಿಂದ ರೈತರಿಗೆ ಏನೂ ತೊಂದರೆಯಾಗದಂತೆ ಖಾತ್ರಿಪಡಿಸಬೇಕು.

3.ಕೋಟ್ಯಂತರ ಜನಗಳಿಗೆ ಆಹಾರ ಭದ್ರತೆಯ ಮೂಲವೆಂದರೆ ಎಫ್‌ಸಿಐ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆ. ಸರಕಾರ ದಾಸ್ತಾನನ್ನು ಮುಂದುವರೆಸಬೇಕು ಮತ್ತು ಸುಗಮವಾಗಿ ನಡೆಸಬೇಕು, ಈ ಮೂಲಕ ಜನಗಳು ಹಸಿವಿನಿಂದ ನರಳದಂತೆ ಮಾಡಬೇಕು. ರೇಷನ್ ಕಾರ್ಡ್‌ಗಳನ್ನು ಕಡಿತ ಮಾಡುವ ಎಲ್ಲ ಪ್ರಯತ್ನಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.

4.ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕು. ಅದನ್ನು ಸಾರ್ವತ್ರೀಕರಣಗೊಳಿಸುವತ್ತ ಸಾಗಬೇಕು. ಅದುವರೆಗೆ 81.35 ಕೋಟಿ ಪಡಿತರ ಫಲಾನುಭವಿಗಳು ತಿಂಗಳಿಗೆ ತಲಾ 15 ಕೆಜಿ ಧಾನ್ಯಗಳು, 1 ಕೆಜಿ ಬೇಳೆ, ಸಕ್ಕರೆ ಮತ್ತು ಅಡುಗೆ ತೈಲ ಪಡೆಯುವಂತೆ ಖಾತ್ರಿಪಡಿಸಬೇಕು.

5.ಸರಕಾರ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಪಾವತಿಯನ್ನು ಹಿಂದಕ್ಕೆ ಪಡೆಯಬೇಕು. ಅದನ್ನು ಅವಸರದಿಂದ ಜಾರಿಗೆ ತಂದರೆ ಹಲವು ಕ್ಲಿಷ್ಟ ಸಮಸ್ಯೆಗಳು ಉಂಟಾಗುತ್ತವೆ. ಇದು ರೈತರಿಗೆ ತಮ್ಮ ಬೆಳೆಗಳ ಬೆಲೆಗಳು ಸಿಗದಂತೆ ತಡೆಯುತ್ತದೆ. ಗೋದಿ ಖರೀದಿಗೆ 'ಜಮಾಬಂಧಿ' ಯನ್ನು ಸಲ್ಲಿಸಬೇಕೆಂಬ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕು.

6.ಕಾಂಟ್ರಾಕ್ಟ್ ಮೇಲಿರುವ ಎಫ್‌ಸಿಐ ನೌಕರರು ಮತ್ತು ಕಾರ್ಮಿಕರಿಗೆ ಖಾಯಂ ಕೆಲಸಗಳನ್ನು ಕೊಡಬೇಕು ಮತ್ತು ಎಲ್ಲ ಖಾಲಿ ಹುದ್ದೆಗಳನ್ನು ತಕ್ಷಣವೇ ತುಂಬಬೇಕು.

ಕರಾಳ ಕೃಷಿ ಕಾಯ್ದೆಗಳ ಜಾರಿಯ ಮುಂದೂಡಿಕೆಯ ನಂತರ ಈಗ ಕಾರ್ಮಿಕ ಸಂಹಿತೆಗಳ ಜಾರಿಯೂ ಮುಂದಕ್ಕೆ?

ಇದ್ದಕಿದ್ದಂತೆ ಮೋದಿ ಸರಕಾರ ಮಾರ್ಚ್ 31, 2021 ರಂದು ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿಯನ್ನು ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ ಎಂದು ಪ್ರಕಟಿಸಿದೆ. ಸಂಸತ್ತಿನಲ್ಲಿ ಆತುರದಿಂದ ಪಾಸು ಮಾಡಿಸಿಕೊಂಡ ಈ ಸಂಹಿತೆಗಳನ್ನು ಎಪ್ರಿಲ್ 1ರಿಂದ ಜಾರಿಗೊಳಿಸಲಾಗುವುದು ಎಂದು ಹೇಳಲಾಗಿತ್ತು.

ವಿಧಾನ ಸಭಾ ಚುನಾವಣೆಗಳು ನಡೆಯುತ್ತಿರುವುದರಿಂದ, ಮತ್ತು ರಾಜ್ಯ ಸರಕಾರಗಳು ಈ ಸಂಹಿತೆಗಳ ಅಡಿಯಲ್ಲಿ ನಿಯಮಗಳನ್ನು ರೂಪಿಸಿಲ್ಲವಾದ್ದರಿಂದ ಹೀಗೆ ಮಾಡಲಾಗಿದೆ ಎಂದು ಸರಕಾರ ಕಾರಣ ಕೊಟ್ಟಿರುವುದಾಗಿ ಕಾರ್ಪೊರೇಟ್ ಮಾಧ್ಯಮಗಳು ಹೇಳುತ್ತಿವೆ.

ಕಾರ್ಮಿಕ ಕಾನೂನುಗಳ ಪ್ರಶ್ನೆ ಸಂವಿಧಾನದ 'ಸಮವರ್ತಿ ಪಟ್ಟಿ' ಯಲ್ಲಿದೆ. ಕಾರ್ಮಿಕ ಕಾನೂನುಗಳ ಜಾರಿಗೆ ಸಂಬಂಧಪಟ್ಟಂತೆ ಕೈಗಾರಿಕೆಗಳು ಸೇವಾ ಕ್ಷೇತ್ರದ ವಿಭಿನ್ನ 'ಕೇಂದ್ರ ವಲಯ' ಹಾಗೂ 'ರಾಜ್ಯ ವಲಯ'ಗಳಿವೆ. 'ಕಾರ್ಮಿಕ ಸಂಹಿತೆ'ಗಳು ಎಂದು ಹೊಸದಾಗಿ ತಂದಿರುವ ಶಾಸನಗಳ ಅಡಿಯಲ್ಲಿ ನಿರ್ದಿಷ್ಟ ನಿಯಮಾವಳಿಗಳನ್ನು ರಾಜ್ಯ ಸರಕಾರಗಳು ರೂಪಿಸಬೇಕಾಗಿದೆ. ಇದನ್ನು ಮಾಡದಿದ್ದರೆ, ರಾಜ್ಯ ವಲಯಕ್ಕೆ ಸೇರುವ ಅಂತಹ ಸಂಸ್ಥೆಗಳಲ್ಲಿ ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡುವಂತಿಲ್ಲ. ಹೆಚ್ಚಿನ ರಾಜ್ಯಗಳು ಈ ಪ್ರಕ್ರಿಯೆಯನ್ನು ಆರಂಭಿಸಿಲ್ಲ.

ಆದರೆ, ಕಾರ್ಮಿಕ ಸಂಘಟನೆಗಳ ವಿರೋಧವೂ ಈ ಮುಂದೂಡಿಕೆಗೆ ಇನ್ನೊಂದು ಕಾರಣ ಎಂಬುದನ್ನು ಬಹಳಷ್ಟು ಮಾಧ್ಯಮಗಳು ಎತ್ತಿ ತೋರಿಸುತ್ತಿಲ್ಲ. ನಿಜ, ಇದರಲ್ಲಿ ಆಶ್ಚರ್ಯವೇನೂ ಇಲ್ಲ.

ಪುಟ 14 ನೋಡಿ

ದಿಲ್ಲಿ ಗಡಿ ತಲುಪಿದ 'ಮಿಟ್ಟಿ ಸತ್ಯಾಗ್ರಹ ಯಾತ್ರಾ'

ದೇಶದ 23 ರಾಜ್ಯಗಳಿಂದ ಮಣ್ಣನ್ನು ಹೊತ್ತ ಮಡಿಕೆಗಳೊಂದಿಗೆ 'ಮಿಟ್ಟಿ ಸತ್ಯಾಗ್ರಹ ಯಾತ್ರಾ' ದಿಲ್ಲಿ ಗಡಿಗಳಲ್ಲಿ ರೈತರ ಪ್ರತಿಭಟನಾ ಸ್ಥಳಗಳನ್ನು ತಲುಪಿವೆ. ಮಾರ್ಚ್ 12 ರಂದು ಈ ಯಾತ್ರೆಗಳು ಆರಂಭವಗಿ ಎಪ್ರಿಲ್ 5–6ರಂದು ಶಾಹಜಹಾಂಪುರ್ ಮತ್ತಿತರ ಗಡಿ ಸ್ಥಳಗಳನ್ನು ತಲುಪಿವೆ.

ಸಾವಿರಾರು ಹಳ್ಳಿಗಳು ಮತ್ತು ಚಾರಿತ್ರಿಕ ಸ್ಥಳಗಳನ್ನು ಹಾದು ಬಂದಿರುವ ಈ ಯಾತ್ರೆಗಳು ಅಲ್ಲಿಂದ ತಂದಿರುವ ಮಣ್ಣಿಂದ ಈ ರೈತ ಹೋರಾಟದಲ್ಲಿ ಮಡಿದಿರುವ ಹುತಾತ್ಮರಿಗೆ ಈ ಗಡಿ ಸ್ಥಳಗಳಲ್ಲಿ ಸ್ಮಾರಕಗಳನ್ನು ಕಟ್ಟಲು ಪ್ರತಿಭಟನಾನನಿರತ ರೈತರು ನಿರ್ಧರಿಸಿದ್ದಾರೆ.



ಸಂಪಾದಕೀಯ

ಕೃಷಿ ಕಾರ್ಮಿಕರ ಮತ್ತು ನರೇಗಾ ಕೆಲಸಗಾರರ ಕನಿಷ್ಠ ವೇತನದಲ್ಲಿ ಯಾಕೆ ಈ ವ್ಯತ್ಯಾಸ?

ಕೃಷಿ ಸಂಬಂಧಿತ ಕೆಲಸಗಳಲ್ಲಿ ತೊಡಗುವ ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಪರಿಷ್ಕರಿಸಿ ಒಂದು ವರ್ಷದ ಹಿಂದೆಯೇ ಅಂದರೆ 01–04–2020 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ನೋಟಿಫಿಕೇಷನ್ ನಂ.ಕೆಎಇ228ಎಲ್‌ಡಬ್ಲೂಎ 2018 ದಿನಾಂಕ 11–12–2019. ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ಪ್ರಕಟಿಸಿದ ಈ ಪರಿಷ್ಕೃತ ಕನಿಷ್ಠ ವೇತನದಿಂದಾಗಿ ಹೊಲ, ಗದ್ದೆ, ತೋಟಗಳಲ್ಲಿ ಭೂಮಿಯನ್ನು ಉಳುವ, ಸಮ ಮಾಡುವ, ಮಡಿಗಳನ್ನು ನಿರ್ಮಾಣ ಮಾಡುವ, ಬಿತ್ತುವ, ನಾಟಿ ಮಾಡುವ, ಕಳೆ ಕೀಳುವ, ಗೊಬ್ಬರ ಹಾಕುವ, ಕ್ರಿಮಿನಾಶಕ ಸಿಂಪಡಿಸುವ, ಕಟಾವ್ ಮಾಡುವ, ಕಾಳು ಬೇರ್ಪಡಿಸುವುದು, ಹತ್ತಿ, ತೆಂಗು, ಅಡಿಕೆ ಮೊದಲಾದವುಗಳನ್ನು ಕೀಳುವುದು, ಸಾಗಾಟ ಮಾಡುವುದು ಮುಂತಾದ ಕೃಷಿ ಸಂಬಂಧಿತ ಕೆಲಸಗಳಿಗೆ 8 ಗಂಟೆಗಳ ಕೆಲಸಕ್ಕೆ 01–04–2020 ರಿಂದ ತುಟ್ಟಿಭತ್ತೆ ಒಳಗೊಂಡ ರೂ.424.80 ಕನಿಷ್ಠ ದಿನಗೂಲಿ ಸಿಗಲಿದೆ. ಈ ಪರಿಷ್ಕೃತ ಕನಿಷ್ಠ ವೇತನ 01–04–2020 ರಿಂದಲೇ ಜಾರಿಯಾಗಿದ್ದು 01–04–2021 ರಿಂದ ಇನ್ನೊಂದು ಸುತ್ತಿನ ಪರಿಷ್ಕೃತ ತುಟ್ಟಿಭತ್ತೆ ಜಾರಿಗೆ ಬರಲಿದೆ.

ಇದೇ ಸಮಯದಲ್ಲಿ ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ನರೇಗಾ ಕೆಲಸಗಾರರ ಕನಿಷ್ಠ ವೇತನವನ್ನು ಪರಿಷ್ಕರಿಸಿದೆ. 15–03–2021 ರಂದು ಗ್ರಾಮೀಣಾಭಿವೃದ್ಧಿ ಕೇಂದ್ರ ಮಂತ್ರಾಲಯವು ಹೊರಡಿಸಿರುವ ಈ ಆದೇಶದ ಪ್ರಕಾರ 01–04–2021 ರಿಂದ ನರೇಗಾ ಕೆಲಸಗಾರರ ಕನಿಷ್ಠ ದಿನಗೂಲಿ ಕರ್ನಾಟಕದಲ್ಲಿ ಕೇವಲ ರೂ.289 ಆಗಲಿದೆ.

ಕರ್ನಾಟಕ ಸರ್ಕಾರ ಕೃಷಿ ಕಾರ್ಮಿಕರಿಗೆ ಪರಿಷ್ಕರಿಸಿದ ರೂ.424.80 ಕನಿಷ್ಠ ದಿನಗೂಲಿಗೂ ಕೇಂದ್ರ ಸರ್ಕಾರ ನರೇಗಾ ಕಾರ್ಮಿಕರಿಗೆ ಪರಿಷ್ಕರಿಸಿದ ರೂ. 289 ಕನಿಷ್ಠ ದಿನಗೂಲಿಗೂ ಗಣನೀಯ ವ್ಯತ್ಯಾಸವಿದೆ. ಇದರಿಂದ ನರೇಗಾ ಕಾರ್ಮಿಕರಿಗೆ ಸರ್ಕಾರ ಅನ್ಯಾಯ ಮಾಡಿದಂತಾಗಿದೆ. ಅಕುಶಲ ಕೆಲಸದಲ್ಲಿ ಕಾರ್ಮಿಕ ಎರಡು ಗುಂಪುಗಳ ಕೂಲಿಯ ವಿಷಯದಲ್ಲಿ ತಾರತಮ್ಯ ಮಾಡುವುದು ಕಾನೂನು ಬಾಹಿರವಾಗಿದೆ.

ನರೇಗಾ ಪ್ರಾರಂಭವಾದಾಗ ಈ ತಾರತಮ್ಯ ನೀತಿ ಇರಲಿಲ್ಲ. ಈ ಎರಡು ಕೂಲಿ ದರಗಳಲ್ಲಿ ಯಾವುದು ಹೆಚ್ಚೋ ಅದನ್ನೇ ಕೊಡಬೇಕೆಂದು ನಿಯಮವಿತ್ತು. ಈ ನಿಯಮವನ್ನು ಸದ್ದಿಲ್ಲದೆ ಬದಲಾಯಿಸಲಾಗಿದೆ. ರಾಜ್ಯ ಸರಕಾರ ಕೃಷಿ ಕಾರ್ಮಿಕರಿಗೆ ನಿಗಧಿಪಡಿಸುವ ಕನಿಷ್ಠ ವೇತನಕ್ಕೂ ಕೇಂದ್ರ ಸರ್ಕಾರ ಜಾರಿಗೆ ತರುವ ಕನಿಷ್ಠ ವೇತನಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಹೇಳಲಾಗುತ್ತದೆ.

ಕೇಂದ್ರ ಸರ್ಕಾರದ ಈ ಅನ್ಯಾಯದ ವಿರುದ್ಧ ಗ್ರಾಮೀಣ ಕೆಲಸಗಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದೇ ಏಪ್ರಿಲ್ 9 ರಂದು ರಾಜ್ಯಾದಂತ ಪ್ರತಿಭಟನೆ ಮಾಡಿದ್ದಾರೆ. ನರೇಗಾ ದಿನಗೂಲಿ ಕನಿಷ್ಠ ರೂ.600 ಆಗಬೇಕು. ಎಂಬುದು ಅವರ ನ್ಯಾಯ ಸಮ್ಮತ ಬೇಡಿಕೆಯಾಗಿದೆ. ಅಲ್ಲಿಯವರೆಗೆ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ರೂ.425 ಕನಿಷ್ಠ ವೇತನವಾಗಿ ನೀಡಬೇಕು.

ಕೋವಿಡ್ ಸಂಕ್ರಾಮಿಕದ ಎರಡನೇ ಸುತ್ತಿನ ಅಲೆ ಜನರಲ್ಲಿ ಆತಂಕವನ್ನು ಉಂಟು ಮಾಡಿದೆ. ವಲಸೆ ಹೋದ ಕಾರ್ಮಿಕರು ಕುಟುಂಬ ಸಮೇತರಾಗಿ ವಾಪಸ್ ಬರುತ್ತಿದ್ದಾರೆ. ಅವರಿಗೆ ಉದ್ಯೋಗವನ್ನು ಹಾಗೂ ಜೀವನ ನಿರ್ವಹಣೆಗೆ ಆರ್ಥಿಕ ನೆರವು ನೀಡಲು ಸರ್ಕಾರ ಸಜ್ಜಾಗಿಲ್ಲ. ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ. ಅಗತ್ಯ ಔಷಧಿಗಳಿಲ್ಲ. ಲಸಿಕೆ ಹಾಕಿಸಿಕೊಳ್ಳುವುದರಲ್ಲಿ ಸರ್ಕಾರದ ಮೇಲೆ ಜನರಲ್ಲಿ ವಿಶ್ವಾಸ ಮೂಡಿಲ್ಲ. ಮನೆಬಿಟ್ಟು ಹೊರಗೆ ಬರಬೇಡಿ ಎಂದು ಉಚಿತ ಉಪದೇಶ ಮಾತ್ರ ಮಾಡಲಾಗುತ್ತದೆ. ಸರ್ಕಾರ ತಜ್ಞರಿಂದ ಸಲಹೆ ಪಡೆಯುತ್ತಿಲ್ಲ. ಹಿಂದಿನ ಅನುಭವದಿಂದ ಪಾಠ ಕಲಿತ್ತಿಲ್ಲ.

ನರೇಗಾ ಕೆಲಸವನ್ನು ಎಲ್ಲ ಗ್ರಾಮಗಳಿಗೂ ವಿಸ್ತರಿಸಬೇಕು. ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು. ಬಡ ಕುಟುಂಬಗಳಿಗೆ ಒಳ್ಳೆಯ ಗುಣಮಟ್ಟದ ಆಹಾರ ಒದಗಿಸಬೇಕು. 100 ದಿನಕ್ಕಿಂತ ಹೆಚ್ಚು ದಿನಗಳ ಕೆಲಸ ನೀಡಬೇಕು.

ವಿದ್ಯುತ್ ಖಾಸಗೀಕರಣದಿಂದ ರೈತರಿಗೆ ದೊಡ್ಡ ಸಂಕಷ್ಟ–ಯು. ಬಸವರಾಜು

ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಗಿದೆ. ಕೈಗಾರಿಕೆಗಳು ಮುಚ್ಚಿ ಹೋಗುತ್ತಿವೆ. ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ರೈತರು ಸಾಲಗಾರರಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಈ ನಡುವೆ ಪ್ರಾಕೃತಿಕ ವಿಕೋಪ, ಕೋವಿಡ್–19ದ ನಡುವೆ ಜನರಿಗೆ ರಕ್ಷಣೆ ನೀಡಬೇಕಾದ ಕೇಂದ್ರ, ರಾಜ್ಯ ಸರ್ಕಾರಗಳು ಹೊಸ ಸಂಕಷ್ಟಗಳನ್ನು ಜನರ ಮೇಲೆ ಹೇರುವ ಕೆಲಸ ಮಾಡುತ್ತಿವೆ.

ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ ದೇಶ ಹಾಗೂ ರಾಜ್ಯವನ್ನು ತೆರೆದು ಲೂಟಿಗೊಳಪಡಿಸುವ ದುರುದ್ದೇಶದಿಂದಲೇ ಜಾರಿಗೊಳಪಡಿಸುವ, ರೈತ ವಿರೋಧಿಯಾದ, ಒಪ್ಪಂದ ಕೃಷಿ ಕಾಯ್ದೆ, ವಿದ್ಯುತ್ ರಂಗವನ್ನು ಖಾಸಗೀಕರಣ ಮಾಡುವ ವಿದ್ಯುತ್ ತಿದ್ದುಪಡಿ ಮಸೂದೆ, ಏಪಿಎಂಸಿ ತಿದ್ದುಪಡಿ ಕಾಯ್ದೆ, ಭೂಸುಧಾರಣಾ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ, ಒಟ್ಟು ಐದು ಕೃಷಿ ಕಾಯ್ದೆಗಳನ್ನು ಮತ್ತು ಕಾರ್ಮಿಕ ವಿರೋಧಿಯಾದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಾಗೂ ದೇಶದ ಗ್ರಾಹಕರನ್ನು ಲೂಟಿಗೊಳಪಡಿಸುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಗಳನ್ನು ತಕ್ಷಣವೇ ವಾಪಾಸು ಪಡೆಯಬೇಕೆಂದು ಮತ್ತು ಸಾರ್ವಜನಿಕ ರಂಗದ ಉದ್ದಿಮೆಗಳಾದ ಬ್ಯಾಂಕ್, ವಿಮೆ, ಬಿಎಸ್‌ಎನ್‌ಎಲ್, ವಿಮಾನ, ರೈಲ್ವೇ, ಸಮುದ್ರ ಸಾರಿಗೆ, ಮುಂತಾದವುಗಳ ಮಾರಾಟವನ್ನು ಕೂಡಲೇ ನಿಲ್ಲಿಸಬೇಕು, ಇದು ದೇಶದ ಸ್ವಾತಂತ್ರ್ಯವನ್ನು ಮರಳಿ ಕಾರ್ಪೋರೇಟ್ ಕಂಪನಿಗಳಿಗೆ ಒತ್ತೆ ಇಡುವ ದುಷ್ಕೃತನವಾಗಿದೆಯೆಂದು ಸಿಪಿಐಎಂ ರಾಜ್ಯ ಕಾರ್ಯದರ್ಶಿ ಯು. ಬಸವರಾಜು ರವರು ಖಂಡಿಸಿದರು.



ಕಳೆದ ಐದಾರು ತಿಂಗಳಿಂದ ಈ ಕುರಿತಂತೆ ರೈತರು, ಕಾರ್ಮಿಕರು ತೀವ್ರ ರೀತಿಯ ಚಳುವಳಿಯನ್ನು ನಡೆಸುತ್ತಿದ್ದಾರೆ. ದೆಹಲಿ ಸುತ್ತ – ಮುತ್ತ ಲಕ್ಷಾಂತರ ರೈತ ಕುಟುಂಬಗಳು ಕಳೆದ 110 ಕ್ಕೂ ಹೆಚ್ಚು ದಿನಗಳಿಂದ ಅನಿರ್ಧಿಷ್ಠ ಸಾಮೂಹಿಕ ಪ್ರತಿಭಟನಾ ಧರಣಿಯಲ್ಲಿ ತೊಡಗಿದ್ದಾರೆ. ಆದಾಗಲೂ ಕೇಂದ್ರ ಸರಕಾರ ರೈತರನ್ನು ಓಡಿಸುವ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆಯೇ ಹೊರತು ಅವರ ಕೋರಿಕೆಯನ್ನು ಪರಿಗಣಿಸುತ್ತಿಲ್ಲ. ಅದೇ ರೀತಿ, ರಾಜ್ಯದ ರೈತ– ಕಾರ್ಮಿಕರ ತೀವ್ರ ತರದ ಚಳುವಳಿಗೆ ಯಾವುದೇ ಬೆಲೆಯನ್ನು ನೀಡುತ್ತಿಲ್ಲವೆಂದು ಸರಕಾರಗಳ ನಿರ್ಲಕ್ಷ್ಯವನ್ನು ಸಿಐಟಿಯು ರಾಜ್ಯ ಮುಖಂಡ ಪರಮೇಶ್ವರ ಖಂಡಿಸಿದರು.

ರೈತರ ಕುರಿತು ಅನುಸರಿಸುವ ಗೋಸುಂಬೆ ನೀತಿಯನ್ನು ಕೈಬಿಟ್ಟು, ಬೆಲೆಗಳ ಏರಿಳಿತ ಮಾಡಿ ಕೃಷಿಕರನ್ನು ಉತ್ಪನ್ನಗಳನ್ನು ಲೂಟಿಗೊಳಪಡಿಸುವ ಕಾರ್ಪೋರೇಟ್ ಹಾಗೂ ಸಗಟು ವ್ಯಾಪಾರವನ್ನು ನಿಯಂತ್ರಿಸಲು ಕೃಷಿ ಆಯೋಗದ ಅಧ್ಯಕ್ಷರಾಗಿದ್ದ ಡಾ.ಎಂ.ಎಸ್ ಸ್ವಾಮಿನಾಥನ್ ಸಲಹೆಯಂತೆ ವೈಜ್ಞಾನಿಕವಾಗಿ ಕನಿಷ್ಠ ಬೆಂಬಲ ಬೆಲೆ ನಿಗದಿಸಿ ಅದು ರೈತರಿಗೆ ಖಾತರಿಯಾಗಿ ದೊರೆಯುವಂತೆ ಕನಿಷ್ಟ ಬೆಂಬಲ ಬೆಲೆ ಖಾತರಿ ಕಾಯ್ದೆಯನ್ನು ಜಾರಿಗೊಳಿಸುವಂತೆ ಮತ್ತು ಸಾರ್ವಜನಿಕ ರಂಗದ ಸಾಲ ಅಗತ್ಯದಷ್ಟು ದೊರೆಯುವಂತೆ ಮಾಡುವ ಮತ್ತು ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಫಸಲಿಗೆ ಹಾಗೂ ಉದ್ಯೋಗಕ್ಕೆ ನಷ್ಟ ಉಂಟಾದಾಗ ಸಾಲಮನ್ನಾ ಮಾಡುವಂತಹ ಕೇರಳ ಮಾದರಿಯಲ್ಲಿ ಋಣ ಮುಕ್ತ ಕಾಯ್ದೆಯನ್ನು ಜಾರಿಗೊಳಿಸುವಂತೆ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣಶೆಟ್ಟಿ ಹೇಳಿದರು.

ಮುಖ್ಯಮಂತ್ರಿ ಯಡೆಯೂರಪ್ಪನವರು ಅಕ್ರಮವಾಗಿ ಜಾರಿಗೊಳಿಸುತ್ತಿರುವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗೆ ಜಾನುವಾರು ಹಿತ ರಕ್ಷಣೆಯ ಯಾವುದೇ ಉದ್ದೇಶವಿರುವುದಿಲ್ಲ, ಬದಲಿಗೆ ಕೃಷಿಕರ ಉಪಕಸುಬನ್ನು ಅಪಹರಿಸಿ, ಹೈನುಗಾರಿಕೆ ಮತ್ತು ಜಾನುವಾರು ಆಧಾರಿತ ಹೈನು, ಮಾಂಸ, ಚರ್ಮ ಹಾಗೂ ಔಷಧಿ ಉದ್ಯಮಗಳನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆಯುವ ಮತ್ತು ಜನತೆಯನ್ನು ಒಡೆದಾಳುವ ಹಾಗೂ ಜನತೆಯ ಆಹಾರದ ಉದ್ಯೋಗದ ಮತ್ತು ಬದುಕುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುವ ದುರುದ್ದೇಶವಿದೆಯೆಂದು ಸಿಪಿಐ(ಎಂ) ಮುಖಂಡರಾದ ಕೆ. ಶಂಕರ್ ಕಟುವಾಗಿ ಟೀಕಿಸಿದರು.

ಕೋವಿಡ್ – 19 ರ ಸಂಕಷ್ಠದಿಂದ ಜನರ ರಕ್ಷಣೆಗೆ ಕ್ರಮವಹಿಸಲು ಸಿಪಿಐ(ಎಂ) ಒತ್ತಾಯ

ರಾಜ್ಯದಲ್ಲಿ ಮಾರ್ಪಾಟುಗೊಳ್ಳುತ್ತಿರುವ ಕೋವಿಡ್ – 19 ರ ವೈರಾಣುವಿನಿಂದ ರಕ್ಷಿಸಲು ನಿಜ ಕಾಳಜಿಯನ್ನು ತೋರಿಸುವಂತೆ ಮುಖ್ಯಮಂತ್ರಿಗಳನ್ನು ಸಿಪಿಐ(ಎಂ) ಬಲವಾಗಿ ಒತ್ತಾಯಿಸಿದೆ.

ಬರೀ ಮಾರ್ಗ ಸೂಚಿಗಳಿಂದ ಬಾಯಿಪ್ರಚಾರದ ಮಾತುಗಳಿಂದ ಅದನ್ನು ತಡೆಯಲು ಮತ್ತು ಜನತೆಯನ್ನು ಹಾಗೂ ರಾಜ್ಯವನ್ನು ಆರ್ಥಿಕ ಸಂಕಷ್ಠದಿಂದ ರಕ್ಷಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅಗತ್ಯ ನೆರವನ್ನು ಘೋಷಿಸಬೇಕೆಂದು ಒತ್ತಾಯಿಸುತ್ತದೆ.

ತಾವು ಖಾಸಗೀ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಒದಗಿಸಲು ನಿರ್ಧರಿಸುವ ವೇಳೆಗೆ ಹಲವಾರು ವೈರಾಣು ಬಾಧಿತರು ಸರಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು, ವೆಂಟಿಲೇಟರ್‌ಗಳು ಇಲ್ಲದೇ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ ಮತ್ತು ಖಾಸಗೀ ಆಸ್ಪತ್ರೆಗಳ ಲಕ್ಷಾಂತರ ರೂಗಳ ಲೂಟಿಗೆ ಒಳಗಾಗಿದ್ದಾರೆ.

ದೈಹಿಕ ಅಂತರ ಕಾಯ್ದುಕೊಳ್ಳಲು ಹೇಳುತ್ತಾರೆ, ಸಾರಿಗೆ ವಾಹನಗಳಲ್ಲಿ ಕುರಿಗಳಂತೆ ತುಂಬುತ್ತಾರೆ.

ಜನತೆ ದುಡಿಯುವ ಪ್ರದೇಶಗಳಲ್ಲಿ ಸುರಕ್ಷತೆಯ ಕುರಿತಂತೆ ಆತಂಕಿತರಾಗಿದ್ದಾರೆ. ಮಕ್ಕಳಿಗೆ ಶಿಕ್ಷಣದ ಮೂಲಕ ಸಿಗುತ್ತಿದ್ದ ನೆರವು ಸಿಗುತ್ತಿಲ್ಲ.

ಸಿಪಿಐ(ಎಂ) ಕಳೆದ ವರ್ಷದಿಂದಲೇ ಅದಾಯ ತೆರಿಗೆ ವ್ಯಾಪ್ತಿಗೆ ಬಾರದ, ಪ್ರತಿ ಕುಟುಂಬದ ತಲಾ ವ್ಯಕ್ತಿಗೆ 10 ಕೇಜಿ ಆಹಾರ ಧಾನ್ಯ ಮತ್ತು ಮಾಸಿಕ 7,500 ರೂ ನೆರವು ನೀಡಬೇಕೆಂಬ ಒತ್ತಾಯವನ್ನು ಪರಿಗಣಿಸದೇ ಜನತೆಯನ್ನು ಸಂಕಷ್ಠಕ್ಕೆ ದೂಡಿದೆ. ಈಗಲಾದರೂ, ಕಾರ್ಪೋರೇಟ್ ಕಂಪನಿಗಳ ಲೂಟಿಗೆ ನೆರವಾಗುವುದನ್ನು ನಿಲ್ಲಿಸಿ, ಜನತೆಗೆ ನೆರವಾಗುವಂತೆ ಸಿಪಿಐ(ಎಂ) ಒತ್ತಾಯಿಸುತ್ತದೆ.

ಮುಖ್ಯಮಂತ್ರಿ ಖುರ್ಚಿ ಮತ್ತೆ ಅಲುಗಾಡುತ್ತಿದೆ



ರಾಜ್ಯ ರಾಜಕಾರಣದಲ್ಲಿ ಮತ್ತೆ ರಾಜೀನಾಮೆ ವಿಚಾರ ಸದ್ದು ಮಾಡುತ್ತಿದೆ, ಈ ಬಾರಿ ರಾಜೀನಾಮೆ ನೀಡಲು ಮುಂದಾಗಿರುವುದು ಯಾರು? ಬಣ ಜಗಳದ ಮೂಲಕ ಸರಕಾರದ ಮಾನವನ್ನು ಬೀದಿಗೆ ತಂದು ನಿಲ್ಲಿಸಿದ್ದು ಯಾಕೆ? ಸಿಎಂ ಖುರ್ಚಿ ಮತ್ತೆ ಅಲುಗಾಡುತ್ತಿದೆಯಾ?

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿರುವ ಕೆ.ಎಸ್.ಈಶ್ವರಪ್ಪ ಅವರು, ತಮ್ಮ ಇಲಾಖೆಯ ಕೆಲಸಗಳಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕಾನೂನು ಮೀರಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಈ ಘಟನೆ ಈಗ ಸಾಕಷ್ಟು ಚರ್ಚೆಯನ್ನು ಮಾಡಿದೆ, ಆಡಳಿತ ಪಕ್ಷದ ಕೆಲ ಶಾಸಕರನ್ನು, ಸಚಿವರು ಸಮರ್ಥನೆಯನ್ನು ಮಾಡಿಕೊಳ್ಳುತ್ತಿದ್ದರೆ, ಇತ್ತ ಕಾಂಗ್ರೆಸ್ ಯಡಿಯೂರಪ್ಪ ರಾಜಿಮಾಗೆ ಒತ್ತಾಯಿಸುತ್ತಿದೆ. ಉಪಮುಖುಮಂತ್ರಿ ಗೋವಿಂದ ಕಾರಜೋಳ ಪ್ರತಿಕ್ರೀಯೆ ನೀಡಿದ್ದು, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಯ ನಿರ್ದೇಶನದಂತೆ ಇಡೀ ಸಚಿವ ಸಂಪುಟ ಒಮ್ಮತದಿಂದ ಕೆಲಸ ಮಾಡಬೇಕು. ಅವರ ಪರಮಾಧಿಕಾರವನ್ನು ಪ್ರಶ್ನಿಸುವುದು ಸರಿಯಲ್ಲ ಎಂದು ಗೋವಿಂದ ಕಾರಜೋಳ ಪ್ರತಿಕ್ರಿಯೇ ನೀಡಿದ್ದರೆ, ಇತ್ತ ಡಿಕೆ ಶಿವಕುಮಾರ್ ಪ್ರತಿಕ್ರೀಯೆ ನೀಡಿದ್ದಾರೆ, ಸಚಿವ ಕೆ.ಎಸ್. ಈಶ್ವರಪ್ಪನವರು ಮುಖ್ಯಮಂತ್ರಿಗಳ ವಿರುದ್ಧ ಪತ್ರ ಬರೆದಿರುವುದನ್ನು ಸಮರ್ಥಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಈಶ್ವರಪ್ಪನವರನ್ನು ಯಡಿಯೂರಪ್ಪ ಇಂದು ಸಾಯಂಕಾಲದ ಒಳಗೆ ಸಚಿವ ಸ್ಥಾನದಿಂದ ಉಚ್ಚಾಟಿಸಲಿ ಅಥವಾ ತಾವೇ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಸಚಿವ ಈಶ್ವರಪ್ಪನವರ ನಡೆ ಹಲವು ಆಯಾಮಗಳನ್ನು ಬಿಚ್ಚಿಡುತ್ತಿದೆ, ಕೆ.ಎಸ್.ಈಶ್ವರಪ್ಪ ತಮ್ಮ ಸ್ಥಾನಕ್ಕೆ ಯಾವುದೇ ಸಂದರ್ಭದಲ್ಲೂ ರಾಜೀನಾಮೆ ನೀಡುವ ಸಾಧ್ಯತೆ ದಟ್ಟವಾಗಿದೆ. ಜೊತೆಗೆ ಇನ್ನು ಇಬ್ಬರು ಹಿರಿಯ ಸಚಿವರು ಕೂಡ ಅದೇ ತಂತ್ರವನ್ನು ಅನುಸರಿಸಲಿದ್ದು, ಆ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪದಚ್ಯುತಿಗೆ ಪಕ್ಷದ ವಲಯದಲ್ಲೇ ವೇದಿಕೆ ಸಿದ್ದವಾಗುತ್ತಿದೆ.. ಪರೋಕ್ಷವಾಗಿ ಬಿಎಸ್‌ವೈ ಹಠಾವೋ, ಬಿಜೆಪಿ ಬಚಾವೊ ಅಭಿಯಾನಕ್ಕೆ ಕಮಲ ಪಡೆಯ ಒಂದು ಬಣ ಚಾಲನೆ ಕೊಟ್ಟಂತಾಗಿದೆ.

ಸಿಎಂ ವಿರುದ್ಧ ರಾಜ್ಯಪಾಲರಿಗೆ ದೂರು ಸಲ್ಲಿಸಿರುವ ಸಚಿವ ಕೆಎಸ್ ಈಶ್ವರಪ್ಪ ರಾಜೀನಾಮೆ ಸಲ್ಲಿಸಬಹುದು ಎಂಬ ವದಂತಿ ನಾಲ್ಕಾರು ದಿನದಿಂದ ಹರಿದಾಡುತ್ತಿದೆ. ಇದರ ಅಪಾಯವನ್ನು ಅರಿತಿರುವ ಅರುಣ್ ಸಿಂಗ್ ಈಶ್ವರಪ್ಪನವರಿಗೆ ದೂರವಾಣೆ ಕರೆ ಮಾಡಿ ಈ ರೀತಿ ನಿರ್ಧಾರ ಕೈಗೊಳ್ಳಬಾರದು ಈ ಪ್ರಕರಣ ಬೆಳೆಸುವ ಅಗತ್ಯವಿಲ್ಲ. ಉಪ ಚುನಾವಣೆ ಗೆಲುವಿಗೆ ಗಮನ ಹರಿಸಬೇಕು ಎಂಬ ನಿರ್ದೇಶನ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಈಶ್ವರಪ್ಪನವರು ರಾಜಿನಾಮೆ ನೀಡುವ ಕುರಿತು ಯೋಚಿಸಲು ಹಲವು ಆಯಾಮಗಳಿವೆ ಅವುಗಳನ್ನು ತೆರೆದು ನೋಡುವುದಾದರೆ, ತಮ್ಮ ಇಲಾಖೆಯಲ್ಲಿ ಸಿಎಂ ಹಸ್ತಕ್ಷೇಪ ಮಾಡಿದ್ದಾರೆ ಎಂಬುದು ಕೇವಲ ಒಂದು ಕುಂಟು ನೆಪವಷ್ಟೇ. ಯಡಿಯೂರಪ್ಪನವರನ್ನು ಸಿಎಂ ಖುರ್ಚಿಯಿಂದ ಇಳಿಸುವ ಪ್ರಯತ್ನವೂ ಇದರ ಹಿಂದಿದೆ. ಉಪಚುನಾವಣೆಯಲ್ಲಿ ಬಿಜೆಪಿಗೆ ಸೋಲುಂಟಾದರೆ ಯಡಿಯೂರಪ್ಪನವರ ಖುರ್ಚಿ ಅಲಗಾಡುವುದು ಗ್ಯಾರಂಟಿ ಎನ್ನಲಾಗುತ್ತಿದೆ. ಇದನ್ನು ಮನಗಂಡಿರುವ ಯಡಿಯೂರಪ್ಪನವರ ವಿರೋಧಿ ಬಣ, ಈಶ್ವರಪ್ಪ ಹಾಗೂ ಸಂಘ ಪರಿವಾರಕ್ಕೆ ನಿಷ್ಠರಾಗಿರುವ ಇಬ್ಬರು ಸಚಿವರಿಂದ ರಾಜೀನಾಮೆ ಕೊಡಿಸಿ ಯಡಿಯೂರಪ್ಪನವರನ್ನು ಅಧಿಕಾರದಿಂದ ಕೆಳಗಿಳಿಸಲು ಪಕ್ಷದಲ್ಲಿ ವೇದಿಕೆಯನ್ನು ಸಿದ್ದಪಡಿಸಲಾಗುತ್ತಿದೆ ಎಂದು ಬಿಜೆಪಿ ಪಡಸಾಲೆಯಲ್ಲಿ ಕೇಳಿ ಬರುತ್ತಿದೆ.

ಆ ರೀತಿಯ ಸುದ್ದಿ ಓಡಾಡಲಿಕ್ಕೂ ಕಾರಣವಿದೆ ಅದು ಏನು ಅಂದ್ರೆ, ಮೇ ತಿಂಗಳಲ್ಲಿ ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಬಸವನಗೌಡ ಪಾಟೀಲ್ ಯತ್ನಾಳ್ ನಿರಂತರವಾಗಿ ಹೇಳಿಕೆಯನ್ನು ನೀಡುತ್ತಾ ಇರುವಂತದ್ದು ಕಾರಣವಾಗಿದೆ. ನಿನ್ನೆ ವಿಜಯಪುರದಲ್ಲೂ ಒಂದು ಹೇಳಿಕೆಯನ್ನು ನೀಡಿದ್ದಾರೆ, ಆ ಹೇಳಿಕೆ ಏನು ಅಂದ್ರೆ, ಮೇ 2 ರೊಳಗೆ ಮುಖ್ಯಮಂತ್ರಿ ಬದಲಾವಣೆಯಾಗದಿದ್ದರೆ ಬಿಜೆಪಿಯಲ್ಲಿ ಭಾರಿ ಸ್ಫೋಟವಾಗಲಿದೆ ಎಂದು ಹೇಳಿದ್ದಾರೆ. ಸಚಿವ ಈಶ್ವರಪ್ಪ ಪಕ್ಷದ ಹಿರಿಯ ನಾಯಕರು. ರಾಜ್ಯಾಧ್ಯಕ್ಷರಾಗಿ ಅನುಭವ ಹೊಂದಿದವರು. ರಾಜ್ಯದಲ್ಲಿ ಬಿಜೆಪಿ ಕಟ್ಟುವಲ್ಲಿ ಈಶ್ವರಪ್ಪನವರ ಶ್ರಮ ಇದೆ. ಅಂಥವರು ಬೇಸತ್ತು ರಾಜ್ಯಪಾಲರಿಗೆ ದೂರು ನೀಡಿರುವುದು ತಪ್ಪಲ್ಲ. ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರು ಮುಖ್ಯಮಂತ್ರಿಗೆ ಬುದ್ಧಿವಾದ ಹೇಳಬೇಕಿತ್ತು. ಅದನ್ನು ಬಿಟ್ಟು ಈಶ್ವರಪ್ಪನವರ ಬಗ್ಗೆ ಮಾತನಾಡಿರುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಇನ್ನೂ ಯಡಿಯೂರಪ್ಪನವರಿಗೆ ಒಂದರ ಮೇಲೆ ಒಂದರಂತೆ ಟೆನ್ಷನ್ ಆರಂಭವಾಗಿದೆ, ಮೂರು ಕ್ಷೇತ್ರಗಳ ಉಪಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ತಮ್ಮ ಪಕ್ಷದ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಮೇಲೆ ಬಂದಿರುವ ಗಂಭೀರ ಆರೋಪ ಒಂದೆಡೆಯಾದರೆ, ಈಶ್ವರಪ್ಪನವರು ಬರೆದ ಪತ್ರ ಮತ್ತೊಂದು ಕಡೆ, ಇನ್ನೊಂದೆಡೆ ನ್ಯಾಯಾಲಯದಿಂದ ಹಲವು ಪ್ರಕರಣಗಳ ಬಗ್ಗೆ ಮುಖ್ಯಮಂತ್ರಿಗಳ ವಿರುದ್ಧ ತನಿಖೆಗೆ ಆದೇಶ ನೀಡಿರುವುದು ಯಡಿಯೂರಪ್ಪನವರು ಸಂಕಷ್ಟಕ್ಕೆ ತಳ್ಳಿದೆ. ಈ ಘಟನೆಗಳು ಪಕ್ಷಕ್ಕೆ ಮುಜುಗರ ತರುತ್ತಿದ್ದು, ಖುರ್ಚಿ ಅಲಗಾಡಿಸುವಿಕೆಗೆ ಇವನ್ನೆ ಮುಂದೆ ಮಾಡುವ ಸಾಧ್ಯತೆಯೂ ಇದೆ ಹೇಳಲಾಗುತ್ತಿದೆ.

ಬಿಜೆಪಿಯ ಬಣಜಗಳ ಇವತ್ತು ನಿನ್ನೆಯದಲ್ಲ, ಅದರಲ್ಲೂ ಈಶ್ವರಪ್ಪ ಮತ್ತು ಯಡಿಯೂರಪ್ಪನವರ ಜಗಳ ಯಾವಗಲೂ ಇದ್ದೆ ಇರುತ್ತದೆ, ಇಬ್ಬರೂ ರಾಜ್ಯಾದ್ಯಂತ ಓಡಾಡಿ ಪಕ್ಷವನ್ನು ಕಟ್ಟುವಲ್ಲಿ ಸಾಕಷ್ಟು ಶ್ರಮವನ್ನು ಹಾಕಿದವರು., 2008 ರಲ್ಲಿ ಬಿಎಸ್ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದು ಈಶ್ವರಪ್ಪ ಇಂಧನ ಸಚಿವರಾಗಿದ್ದರು. ಕೆಲ ಸಮಯದಲ್ಲಿ ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯ ಬಹಿರಂಗಗೊಂಡಿತು.

ಶಿವಮೊಗ್ಗದಲ್ಲಿ ಲೋಕಸಭಾ ಕ್ಷೇತ್ರಕ್ಕೆ ಪುತ್ರ ರಾಘವೇಂದ್ರನನ್ನು ಕಣಕ್ಕಿಳಿಸಿದ ಯಡಿಯೂರಪ್ಪ ನಡೆಗೆ ಈಶ್ವರಪ್ಪ ವಿರೋಧ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಈಶ್ವರಪ್ಪ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ರಾಜ್ಯಾಧ್ಯಕ್ಷರಾಗುತ್ತಾರೆ, ಪಕ್ಷದಲ್ಲಿ ಆಂತರಿಕ ಸಂಘರ್ಷ ತಾರಕಕ್ಕೇರಿ ಯಡಿಯೂರಪ್ಪ ಬಿಜೆಪಿ ತೊರೆದು ಕೆಜೆಪಿ ಕಟ್ಟಿದ್ದರು. ಈ ಸಂದರ್ಭದಲ್ಲಿ ಯಡಿಯೂರಪ್ಪ ವಿರುದ್ಧ ಬಹಿರಂಗವಾಗಿ ಕಿಡಿಕಾಡಿದವರಲ್ಲಿ ಈಶ್ವರಪ್ಪ ಪ್ರಮುಖರಾಗಿದ್ದರು.

ಪಕ್ಷದಲ್ಲಿ ಕುಟುಂಬ ರಾಜಕೀಯಕ್ಕೆ ಅವಕಾಶ ಇಲ್ಲದಿದ್ದರೂ ಯಡಿಯೂರಪ್ಪ ಕುಟುಂಬವೂ ಬಿಜೆಪಿಯಲ್ಲಿ ಸಕ್ರಿಯ ಹಿಡಿತವನ್ನು ಹೊಂದಿರುವುದು ಈಶ್ವರಪ್ಪ ಮುನಿಸಿಗೆ ಒಂದು ಕಾರಣ ಎನ್ನಲಾಗುತ್ತಿದೆ. ಅದರಲ್ಲೂ ಶಿವಮೊಗ್ಗ ಜಿಲ್ಲೆಯಲ್ಲಿ ಯಡಿಯೂರಪ್ಪ ಕುಟುಂಬದ್ದೇ ರಾಜ್ಯಭಾರ. ಈಶ್ವರಪ್ಪ ಈ ಜಿಲ್ಲೆಯವರಾಗಿದ್ದರೂ ಇವರ ಮಾತಿಗಿಂತ ಯಡಿಯೂರಪ್ಪ ಕುಟುಂಬ ಮಾತೇ ಹೆಚ್ಚಾಗಿ ನಡೆಯುತ್ತದೆ. ಇದರಿಂದಾಗಿ ತಾನು ಪ್ರತಿನಿಧಿಸುವ ಜಿಲ್ಲೆಯಲ್ಲೇ ಈಶ್ವರಪ್ಪಗೆ ಅನಾತ ಭಾವ ಕಾಡುತ್ತಿದೆ. ಅಲ್ಲದೆ ಮುಜುಗರ ಉಂಟಾಗುವ ಹಲವು ಸನ್ನಿವೇಶಗಳು ಎದುರಾಗಿವೆ. ಇವೆಲ್ಲವೂ ಈಶ್ವರಪ್ಪ ಅವರ ಮುನಿಸಿಗೆ ಕಾರಣಗಳಾಗಿವೆ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಬಿಜೆಪಿಯಲ್ಲಿ ಈಶ್ವರಪ್ಪ ವರ್ಸಸ್ ಯಡಿಯೂರಪ್ಪ ನಡುವಿನ ಮುನಿಸು ತೀವ್ರಗೊಳ್ಳುತ್ತಿದ್ದಂತೆ ಒಂದಲ್ಲಾ ಒಂದು ರೀತಿಯಲ್ಲಿ ಬಿಎಸ್‌ವೈಗೆ ಈಶ್ವರಪ್ಪ ಟಕ್ಕರ್ ನೀಡುತ್ತಾ ಬಂದಿದ್ದಾರೆ. ಅದು ರಾಯಣ್ಣ ಬ್ರಿಗೇಡ್ ಆರಂಭ ಮಾಡುವ ಮೂಲಕ ಹಾಗೂ ಕುರುಬ ಮೀಸಲಾತಿ ಹೋರಾಟದ ಮೂಲಕ ಟಕ್ಕರ್ ನೀಡಿದ್ದಾರೆ. ಸಂಘದ ಕಟ್ಟಾ ಅನುಯಾಯಿ ಆಗಿರುವ ಈಶ್ವರಪ್ಪ ದಿಢೀರ್ ಆಗಿ ರಾಯಣ್ಣ ಬ್ರಿಗೇಡ್ ಆರಂಭ ಮಾಡಿದರು. ಇದು ಆರಂಭ ಮಾಡಿದ್ದು ಏಕೆ ಹಾಗೂ ಇದ್ದಕ್ಕಿದ್ದಂತೆ ಅದರಿಂದ ದೂರ ಆಗಿದ್ದು ಏಕೆ ಎಂಬುವುದು ಇಂದಿಗೂ ಯಕ್ಷಪ್ರಶ್ನೆಯಾಗಿದೆ.

ಅದರ ಜೊತೆಗೆ ಕುರುಬ ಮೀಸಲಾತಿ ಹೋರಾಟದ ಉದ್ದೇಶವೂ ಯಡಿಯೂರಪ್ಪರಿಗೆ ಟಕ್ಕರ್ ನೀಡುವುದೇ ಆಗಿತ್ತು ಎನ್ನುವುದು ರಾಜಕೀಯ ಮೊಗಸಾಲೆಯಲ್ಲಿ ಕೇಳಿ ಬರುತ್ತಿರುವ ಮಾತು. ಒಟ್ಟಿನಲ್ಲಿ ಒಂದು ಕಾಲದ ಸ್ನೇಹಿತರ ನಡುವೆ ಪದೇ ಪದೇ ಮುನಿಸು ಕಾಣಿಸಿಕೊಳ್ಳುತ್ತಾ ಬರುತ್ತಿದೆ. ಶೀತಲ ಸಮರವಾಗಿ ಕಾಣಿಸಿಕೊಳ್ಳುತ್ತಿದ್ದ ಸಂಘರ್ಷ ಇದೀಗ ಬಹಿರಂಗವಾಗಿ ಸ್ಫೋಟಗೊಂಡಿದೆ. ಇದರಲ್ಲಿ ವೈಯಕ್ತಿಯ ಏನೂ ಇಲ್ಲ ಎಂದು ಸಮರ್ಥನೆ ನೀಡಿದರೂ ಸದ್ಯ ಆಗಿರುವ ಡ್ಯಾಮೇಜ್ ಸರಿಪಡಿಸಲು ಅಸಾಧ್ಯ ಎನ್ನುತ್ತಿವೆ ಬಿಜೆಪಿ ಮೂಲಗಳು.

ರಾಜ್ಯದಲ್ಲಿ ಅನೇಕ ಕೆಲಸಗಳು ಚುರುಕುಕೊಳ್ಳುತ್ತಿಲ್ಲ, ಆಡಳಿತ ಯಂತ್ರ ಜಿಡ್ಡುಗಟ್ಟಿ, ಅಭಿವೃದ್ಧಿ ಕೆಲಸಗಳು ನಿಧಾನಕ್ಕೆ ಸಾಗುತ್ತಿವೆ, ಬಿಜೆಪಿ ಸರಕಾರ ಅವುಗಳ ಕಡೆ ಗಮನ ನೀಡದೆ ಚುನಾವಣೆಗಳಲ್ಲಿ ಗೆಲ್ಲುವುದರ ಕಡೆ ಗಮನ ನೀಡಿ ತನ್ನ ಸರಕಾರವನ್ನು ಭದ್ರಗೊಳಿಸುತ್ತಿರುವುದು ಒಂದು ಕಡೆಯಾದರೆ, ಈ ರೀತಿ ಬೀದಿ ಜಗಳದ ಮೂಲಕ ಸರಕಾರದ ಮೇಲೆ ಜನರು ವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತಿದ್ದಾರೆ. ಇನ್ನೂ ಬಿಜೆಪಿ ಹೈಕಮಾಂಡ್ ಕಿವಿ ಹಿಂಡುವ ಕೆಲಸಕ್ಕೆ ಹೋಗದೆ ಇನ್ನಷ್ಟು ಕಚ್ಚಾಡಿಕೊಂಡರಲಿ ಎಂದು ಬಿಟ್ಟಂತೆ ಕಾಣುತ್ತಿದೆ. ಒಟ್ಟಾರೆ ಈಶ್ವರಪ್ಪನರು ಬರೆದ ಪತ್ರ ಇಲಾಖೆಗಳಲ್ಲಿ ಹಸ್ತಕ್ಷೇಪವನ್ನು ನಿಲ್ಲಿಸುತ್ತಾ, ಅಥವಾ ಮುಖ್ಯಮಂತ್ರಿ ಸ್ಥಾನವನ್ನೆ ಕಳೆಯುತ್ತಾ ಕಾಲವೇ ಉತ್ತರ ಹೇಳಲಿದೆ. ■

ಸಾರಿಗೆ ಮುಷ್ಕರ – ಸೌಹಾರ್ದ ಪರಿಹಾರಕ್ಕೆ ಸಿಪಿಐ(ಎಂ) ಒತ್ತಾಯ

ರಾಜ್ಯ ರಸ್ತೆ ಸಾರಿಗೆ ನಿಗಮಗಳು ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮ ನೌಕರರು ಏಪ್ರಿಲ್ 7 ರಿಂದ ನಡೆಸುತ್ತಿರುವ ಮುಷ್ಕರದ ಬೇಡಿಕೆಗಳ ಈಡೇರಿಕೆಗೆ ಅಗತ್ಯ ಕ್ರಮವಹಿಸಿ ಸೌಹಾರ್ದ ಪರಿಹಾರಕ್ಕೆ ರಾಜ್ಯ ಬಿಜೆಪಿ ಸರ್ಕಾರ ಮುಂದಾಗಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ), ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಸಾರಿಗೆ ನಿಗಮಗಳ ನೌಕರರು ತಮ್ಮ ಬೇಡಿಕೆಗಳ ಕುರಿತು ಈ ಹಿಂದೆ ನಡೆಸಿದ್ದ ಮುಷ್ಕರದ ವೇಳೆ ಅವರ ಬೇಡಿಕೆಗಳ ಪರಿಹಾರಕ್ಕೆ ಕ್ರಮವಹಿಸುವುದಾಗಿ ಭರವಸೆ ನೀಡಿದ್ದ ರಾಜ್ಯ ಬಿಜೆಪಿ ಸರ್ಕಾರವು 4 ತಿಂಗಳಾದರೂ ಬೇಡಿಕೆ ಈಡೇರಿಕೆಗೆ ಸೂಕ್ತ ಕ್ರಮವಹಿಸದಿದ್ದ ಕಾರಣ ನೌಕರರು ಮತ್ತೊಮ್ಮೆ ಮುಷ್ಕರಕ್ಕೆ ಮುಂದಾಗಿದ್ದಾರೆ.

ನೌಕರರ ಬೇಡಿಕೆಗಳ ಕುರಿತು ಸಹಾನುಭೂತಿಯಿಂದ ಮಾತುಕತೆ ಮೂಲಕ ಪರಿಹಾರೋಪಾಯವನ್ನು ಕಂಡುಕೊಳ್ಳಲು ರಾಜ್ಯ ಬಿಜೆಪಿ ಸರ್ಕಾರ ಮುಂದಾಗದಿದ್ದ ಕಾರಣ ರಾಜ್ಯದ ಜನತೆ ಸಾರಿಗೆ ಸಮಸ್ಯೆಯ ಸಂಕಷ್ಟವನ್ನು ಎದುರಿಸಬೇಕಾಗಿ ಬಂದಿದೆ. ಪರಿಹಾರದ ಮಾತುಕತೆಯ ಮಾರ್ಗವನ್ನು ಅನುಸರಿಸುವ ಬದಲು ರಾಜ್ಯ ಬಿಜೆಪಿ ಸರ್ಕಾರವು ನೌಕರರನ್ನು ಬೆದರಿಸುವ, ಅವರನ್ನು ಕ್ವಾಟ್ರಸ್ ಗಳಿಂದ ಖಾಲಿ ಮಾಡಿಸುವ ಮತ್ತು ಎಸ್ಮಾ ಜಾರಿಗೊಳಿಸುವ ಎಚ್ಚರಿಕೆ ನೀಡುತ್ತಿರುವುದು ರಾಜ್ಯ ಬಿಜೆಪಿ ಸರ್ಕಾರದ ನೌಕರ ವಿರೋಧಿ ಮನೋಭಾವನೆಯನ್ನು ತೋರುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.



ಸಾರಿಗೆ ನೌಕರರ ಮುಷ್ಕರದ ನೆಪದಲ್ಲಿ ಖಾಸಗಿ ಬಸ್ ಗಳಿಗೆ ಸಾರಿಗೆ ನಿಗಮಗಳ ನಿಲ್ದಾಣದಿಂದಲೇ ಕಾರ್ಯಾಚರಣೆಗೆ ಅನುಮತಿಸುವ ಪರ್ಯಾಯದ ಮೂಲಕ ಸಾರಿಗೆ ನಿಗಮಗಳ ಖಾಸಗೀಕರಣಕ್ಕೆ ರಾಜ್ಯ ಬಿಜೆಪಿ ಸರ್ಕಾರವು ತಾಲೀಮು ನಡೆಸಿದೆ. ಬಿಜೆಪಿಯು ಮೂಲತಃ ಸಾರ್ವಜನಿಕ ಉದ್ದಿಮೆಗಳ ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ವಿರುದ್ಧದ ತಾತ್ವಿಕ ನಿಲುಮೆಯನ್ನು ಹೊಂದಿದೆ. ಈಗಾಗಲೇ ಅದರ ಹಿರಿ, ಕಿರಿ ನಾಯಕರೆಲ್ಲಾ ಸಾರಿಗೆ ಸಂಸ್ಥೆಗಳ ಖಾಸಗೀಕರಣ ಪರ ವಕಾಲತ್ತು ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಷ್ಕರ ನಿರತ ನೌಕರರಿಗೆ ಬೆಂಬಲ ನೀಡಿರುವ ಸಿಪಿಐ(ಎಂ) ನೌಕರರು ತಮ್ಮ ಬೇಡಿಕೆಗಳ ಜೊತೆಯಲ್ಲೇ ಸಾರಿಗೆ ಸಂಸ್ಥೆಗಳ ಖಾಸಗೀಕರಣವನ್ನು ವಿರೋಧಿಸಿ ಹಿಮ್ಮೆಟ್ಟಿಸಬೇಕೆಂದು ಕೋರಿದೆ.

ರಾಜ್ಯ ಬಿಜೆಪಿ ಸರ್ಕಾರವು ತನ್ನ ಹಠಮಾರಿ ಧೋರಣೆಯನ್ನು ಕೈಬಿಟ್ಟು ನೌಕರರ ಬೇಡಿಕೆ ಈಡೇರಿಕೆಗೆ ಅಗತ್ಯ ಕ್ರಮವಹಿಸದಿದ್ದಲ್ಲಿ ಮತ್ತು ಖಾಸಗೀ ಬಸ್ ಮಾಲೀಕರಿಗೆ ಅನುವುಗೊಳಿಸುವ ಪರ್ಯಾಯವನ್ನು ಕೈಬಿಡದಿದ್ದಲ್ಲಿ ಹಾಗೂ ನೌಕರರ ಮೇಲೆ ದಬ್ಬಾಳಿಕೆ ನಡೆಸುವ, ಎಸ್ಮಾ ಜಾರಿಗೊಳಿಸುವ ಕ್ರಮಕ್ಕೆ ಮುಂದಾದಲ್ಲಿ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ಸಿಪಿಐ(ಎಂ) ಪಕ್ಷವು ರಾಜ್ಯ ಬಿಜೆಪಿ ಸರ್ಕಾರವನ್ನು ಎಚ್ಚರಿಸಿದೆ. ■

ಉಪಚುನಾವಣೆ – ಲೆಕ್ಕಾಚಾರ ಹೇಗಿದೆ?
‘ಸಿಡಿ’ಯುತ್ತಾ ಅಸ್ತ್ರ, ಜಾತಿ, ಹಣದ್ದೆ ಕಾರ್ಬಾರು



ರಾಜ್ಯದಲ್ಲಿ ಉಪ ಚುನಾವಣೆಯ ಕಣ ಸಜ್ಜಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಗೆಲುವಿನ ಪ್ರತಿಷ್ಠೆಯಾದ್ರೆ? ಜೆಡಿಎಸ್‌ಗೆ ಅಸ್ತಿತ್ವ ಸಾಬೀತುಪಡಿಸುವ ಸವಾಲಿನ ಪ್ರಶ್ನೆಯಾಗಿದೆ. ಮೂರು ಕ್ಷೇತ್ರಗಳನ್ನು ಗೆಲ್ಲಲು ಹೆಣದಿರುವ ತಂತ್ರಗಳೇನು? ಉಪಚುನಾವಣೆಯ ವಾತವರಣ ಹೇಗಿದೆ?

ಉಪ ಚುನಾವಣೆ ಫಲಿತಾಂಶದಿಂದ ದೊಡ್ಡ ಮಟ್ಟದ ರಾಜಕೀಯ ಬದಲಾವಣೆ ಆಗೋದಿಲ್ಲ. ಆದರೆ ಸಿ.ಡಿ. ಪ್ರಕರಣ ಎಬ್ಬಿಸಿರುವ ರಾಡಿಯ ಹಿನ್ನೆಲೆಯಲ್ಲಿ ಮತದಾರನ ನಾಡಿ ಮಿಡಿತ ಯಾರ ಕಡೆ ವಾಲಬಹುದು ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿವೆ. ಮೂರೂ ಕ್ಷೇತ್ರಗಳಲ್ಲಿ ಫಲಿತಾಂಶದ ಮೇಲೆ ಜಾತಿ ರಾಜಕಾರಣ, ಸಿ.ಡಿ. ಪ್ರಕರಣ ಪ್ರಭಾವ ಬೀರುವ ಸಾಧ್ಯತೆಗಳಿವೆ. ಜತೆಗೆ ಪಕ್ಷ ಮತ್ತು ವೈಯಕ್ತಿಕ ವರ್ಚಸ್ಸು ಪರಿಣಾಮ ಬೀರಲಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ದಂಡು ಮೂರೂ ಕ್ಷೇತ್ರಗಳಿಗೆ ಈಗಾಗಲೆ ಲಗ್ಗೆ ಇರಿಸಿದೆ. ಕೆಲ ನಾಯಕರು ಅಲ್ಲಿಯೇ ಟೆಂಟ್ ಹಾಕಿದ್ದಾರೆ. ಏಪ್ರಿಲ್ 17 ರಂದು ಮೂರು ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದೆ, ಮೇ 02 ರಂದು ಫಲಿತಾಂಶ ಪ್ರಕಟವಾಗಲಿದೆ.

ಮೂರು ಕ್ಷೇತ್ರಗಳಲ್ಲಿ ವಾತಾವರಣ ಹೇಗಿದೆ? ಎನ್ನುದನ್ನು ನೋಡೋಣ. ಮೊದಲಿಗೆ ಮಸ್ಕಿ ಕ್ಷೇತ್ರದತ್ತ ಕಣ್ಣುಹಾಯಿಸೋಣ. ಮಸ್ಕಿ ಉಪಚುನಾವಣೆ ಕಣದಲ್ಲಿ ರಾಜಕೀಯ ಚಟುವಟಿಕೆ ಬಿರುಸಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಹಾಗೂ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಅವರು ಸೋಮವಾರ ಒಂದೇ ದಿನ ಪ್ರತ್ಯೇಕವಾಗಿ ನಾಮಪತ್ರ ಸಲ್ಲಿಸಿದ್ದಾರೆ. 2008ರಲ್ಲಿ ಕ್ಷೇತ್ರ ಮರುವಿಂಗಡಣೆ ವೇಳೆ ಉದಯವಾಗಿದ್ದ ಎಸ್‌ಟಿ ಮೀಸಲು ವಿಧಾನಸಭಾ ಕ್ಷೇತ್ರ ಮಸ್ಕಿಯಲ್ಲಿ ಇದುವರೆಗೂ ಮೂರು ಬಾರಿ ಸಾರ್ವತ್ರಿಕ ಚುನಾವಣೆ ನಡೆದಿವೆ. ಆದರೆ ಇದೇ ಮೊದಲ ಬಾರಿಗೆ ಉಪಚುನಾವಣೆ ನಡೆಯುತ್ತಿದೆ. ಆರೋಪ ಪ್ರತ್ಯಾರೋಪಗಳ ನಡುವೆ ಚುನಾವಣ ಕಣ ರಂಗೇರಿದೆ.

ಮಸ್ಕಿ ವಿಧಾನಸಭೆ ಕ್ಷೇತ್ರ ರಚನೆ ಬಳಿಕ ಮೊದಲ ಬಾರಿ ಬಿಜೆಪಿ, ಮತ್ತೆರಡು ಬಾರಿ ಕಾಂಗ್ರೆಸ್‌ಗೆ ಒಲವು ತೋರಿದ್ದ ಇಲ್ಲಿನ ಮತದಾರ ಈ ಬಾರಿ ಯಾರ ಕೊರಳಿಗೆ ವಿಜಯ ಮಾಲೆ ಹಾಕಲಿದ್ದಾನೆ ಎನ್ನುವ ಕುತೂಹಲ ಉಂಟಾಗಿದೆ. ಪ್ರತಿ ಚುನಾವಣೆಯಲ್ಲೂ ಮೂರು ಪಕ್ಷಗಳ ಅಭ್ಯರ್ಥಿಗಳ ಅಖಾಡದಲ್ಲಿರುತ್ತಿದ್ದರು. ಆದರೆ, ಈ ಬಾರಿ ಇದುವರೆಗೂ ಜೆಡಿಎಸ್‌ನಿಂದ ಅಭ್ಯರ್ಥಿ ಘೋಷಣೆಯಾಗಿಲ್ಲ. ಬಿಜೆಪಿ ಮತ್ತು ಕಾಂಗ್ರೆಸ್ ಇಬ್ಬರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಇವರಿಬ್ಬರ ನಡುವೆ ನೇರಾ ನೇರಾ ಫೈಟ್ ನಡೆಯಲಿದೆ. ಮಸ್ಕಿಯಲ್ಲಿ ಹಿಂದೆ ನಡೆದ ಚುನಾವಣೆಗಳು ಹೇಗಿದ್ದವು ಕ್ಷೇತ್ರದ ಇತಿಹಾಸ ಹೇಗಿದೆ ಎಂಬುದನ್ನು ನಾವೀಗ ನೋಡೋಣ.

2008ರ ಪೂರ್ವ, ಸಿಂಧನೂರು, ಲಿಂಗಸುಗೂರು, ಮಾನ್ವಿ ವಿಧಾನಸಭೆ ಕ್ಷೇತ್ರದಲ್ಲಿ ಹಂಚಿ ಹೋಗಿದ್ದ ಹಳ್ಳಿಗಳನ್ನು ಕ್ರೋಡೀಕರಿಸಿ ಹೊಸ ಮಸ್ಕಿ ವಿಧಾನಸಭೆ ಕ್ಷೇತ್ರ ರಚನೆ ಮಾಡಲಾಯಿತು. ಕ್ಷೇತ್ರ ರಚನೆಯಾದ 2008ರ ಮೊದಲ ಚುನಾವಣೆಯಲ್ಲಿ ಆಗಿನ ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರತಾಪಗೌಡ ಪಾಟೀಲ್ ಗೆದ್ದು ವಿಧಾನಸಭೆ ಪ್ರವೇಶಿಸಿದ್ದರು. ಇವರ ಜತೆ ಅಖಾಡಕ್ಕೆ ಇಳಿದಿದ್ದ ಕಾಂಗ್ರೆಸ್‌ನ ತಿಮ್ಮಯ್ಯ ನಾಯಕ, ಜೆಡಿಎಸ್ ನ ಅಯ್ಯನಗೌಡ ಆಯನೂರು ಸೋಲು ಅನುಭವಿಸಿದ್ದರು. ಬಳಿಕ 2013ರ ಸಾರ್ವತ್ರಿಕ ಚುನಾವಣೆ ಘೋಷಣೆ ವೇಳೆ ಬಿಜೆಪಿಯಲ್ಲಿದ್ದ ಪ್ರತಾಪಗೌಡ ಪಾಟೀಲ್ ಕಾಂಗ್ರೆಸ್ ಬಾಗಿಲು ಬಡಿದು ಟಿಕೆಟ್ ಗಿಟ್ಟಿಸಿದರು. ಆಗಿನ ಕೈ ಪಕ್ಷದ ಅಲೆಯಲ್ಲಿ ಮತ್ತೊಮ್ಮೆ ಗೆದ್ದು ಶಾಸಕರಾದರು. ಆಗ ಬಿಜೆಪಿಯಿಂದ ಶಂಕರ್ ಮ್ಯಾದರ್, ಕೆಜೆಪಿಯಿಂದ ಮಹಾದೇವಪ್ಪಗೌಡ, ಬಿಎಸ್ಸಾರ್‌ನಿಂದ ಶೇಖರಪ್ಪ ತಳವಾರ, ಜೆಡಿಎಸ್‌ನಿಂದ ಅಮರೇಶ್ ಕಣಕ್ಕೆ ಇಳಿದು ಸೋಲು ಅನುಭವಿಸಿದ್ದರು. ಇನ್ನು 2018ರ ಸಾರ್ವತ್ರಿಕ ಚುನಾವಣೆ ಎದುರಾದಾಗ ಮತ್ತೊಮ್ಮೆ ಕಾಂಗ್ರೆಸ್ ನಿಂದಲೇ ಪ್ರತಾಪಗೌಡ ಪಾಟೀಲ್ ಕಣಕ್ಕೆ ಇಳಿದು ಬಿಜೆಪಿ ಅಭ್ಯರ್ಥಿಯಾಗಿದ್ದ ಆರ್.ಬಸನಗೌಡ ತುರುವಿಹಾಳ ವಿರುದ್ಧ ಕೇವಲ 213 ಮತಗಳ ಅಂತರದಲ್ಲಿ ಗೆಲುವು ದಾಖಲಿಸಿದ್ದರು. ಒಟ್ಟು ಮೂರು ಚುನಾವಣೆಯಲ್ಲೂ ಮಸ್ಕಿಯ ಮತದಾರರು ಪ್ರತಾಪಗೌಡ ಪಾಟೀಲ್ ಅವರನ್ನು ಬೆಂಬಲಿಸಿ ಹ್ಯಾಟ್ರಿಕ್ ವಿಜಯಕ್ಕೆ ನಾಂದಿ ಹಾಡಿದ್ದರು.

ಸತತ ಮೂರು ಬಾರಿ ಗೆದ್ದ ಪ್ರತಾಪಗೌಡ ಪಾಟೀಲ್ 2018ರಲ್ಲಿ ಗೆದ್ದ ಕೆಲವೇ ದಿನಗಳಲ್ಲಿ ಅಪರೇಷನ್ ಕಮಲಕ್ಕೆ ಬಲಿಯಾದರು. ಕೈ ತೊರೆದು ಬಿಜೆಪಿ ಸೇರುವ ಮೂಲಕ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ನಂತರ ನಡೆದ ಹಲವು ಕಾನೂನು ಹೋರಾಟಗಳನ್ನು ದಾಟಿ ಬಂದಿದ್ದಾರೆ. ಈಗ ಇಷ್ಟು ಘಟನೆಗೆ ಸಾಕ್ಷಿಯಾದ ಮಸ್ಕಿ ಮೊದಲ ಬಾರಿಗೆ ಉಪಚುನಾವಣೆ ಎದುರಿಸುತ್ತಿದೆ. ಈ ಉಪಚುನಾವಣೆಯಲ್ಲೂ ಪ್ರತಾಪಗೌಡ ಪಾಟೀಲ್ ಮತ್ತು ಆರ್.ಬಸನಗೌಡ ತುರುವಿಹಾಳ ಕಣಕ್ಕೆ ಇಳಿದಿದ್ದು, ಹಳೆಯ ವ್ಯಕ್ತಿಗಳಾಗಿದ್ದರೂ ಪಕ್ಷ ಮತ್ತು ಚಿಹ್ನೆಗಳು ಅದಲು-ಬದಲಾಗಿವೆ.

ಎರಡು ಚುನಾವಣೆಯ ಮತಗಳಿಕೆಯನ್ನು ನೋಡುವುದಾದರೆ,

	2013	2018
ಬಿಜೆಪಿ	4.03% ಕೆಜಿಪಿ ಸ್ಪರ್ಧೆ ಮಾಡಿತ್ತು 24.97%	44.01%
ಕಾಂಗ್ರೆಸ್	43.08	44.17%
ಜೆಡಿಎಸ್	3.3	8.33%

ಮಸ್ಕಿ ಕ್ಷೇತ್ರದಲ್ಲಿ ಅಭ್ಯರ್ಥಿಗಳು ಅದಲು ಬದಲಾಗಿದ್ದು, ಪಕ್ಷವೂ ಬದಲಾಗಿದೆ. ಕಾಂಗ್ರೆಸ್‌ನಿಂದ ಗೆದ್ದಿದ್ದ ಪ್ರತಾಪ ಗೌಡ ಪಾಟೀಲ್ ಬಿಜೆಪಿಯಿಂದ ಟಿಕೆಟ್ ಪಡೆದಿದ್ದರೆ, ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಬಸವನಗೌಡ ತುರವಿಹಾಳ್ ಕಾಂಗ್ರೆಸ್ ಟಿಕೆಟ್ ಪಡೆದಿದ್ದಾರೆ. ಈ ಕ್ಷೇತ್ರವನ್ನು ಮತ್ತೆ ವಶಕ್ಕೆ ಪಡೆಯಲು ಕಾಂಗ್ರೆಸ್, ಬಿಜೆಪಿಯಲ್ಲಿದ್ದ ತುರವಿಹಾಳ್ ಅವರನ್ನು ಕರೆತಂದಿದ್ದರೆ ಆಪರೇಷನ್ ಕಮಲ ಮೂಲಕ ಬಂದಿರುವ ಪ್ರತಾಪಗೌಡ ಪಾಟೀಲ್ ಅವರನ್ನು ಗೆಲ್ಲಿಸಲು ಬಿಜೆಪಿ ಪಣ ತೊಟ್ಟಿದೆ.

ಜಾತಿ ಲೆಕ್ಕಾಚಾರ ಹೇಗಿದೆ? ಎನ್ನುವದನ್ನು ನೋಡುವುದಾದರೆ, ಮಸ್ಕಿ ಕ್ಷೇತ್ರದಲ್ಲಿ ಲಿಂಗಾಯತ ಮತ್ತು ಎಸ್ಟಿ ಸಮುದಾಯದ ಮತಗಳೇ ಇಲ್ಲಿ ಅಧಿಕ. ಈ ಎರಡು ಸಮುದಾಯದವರ ವೋಟ್‌ಗಳು ಅಭ್ಯರ್ಥಿಗಳ ಗೆಲುವು-ಸೋಲಿನ ಹಿಂದೆ ನಿರ್ಣಾಯಕವಾಗಿವೆ. ಮಸ್ಕಿಯಲ್ಲಿ ಒಟ್ಟು 2,06,988 ಮತದಾರರಿದ್ದು, ಇದರಲ್ಲಿ 1,01,234 ಪುರುಷ, ಮಹಿಳೆಯರು-1,04,941 ಇದ್ದು, ಇತರೆ-28 ಮತಗಳಿವೆ. ಜಾತಿ ಆಧಾರಿತ ಅಂದಾಜು ಮತಗಳು ಹೀಗಿವೆ. ಲಿಂಗಾಯತ-52 ಸಾವಿರ, ಪರಿಶಿಷ್ಟ ಜಾತಿ-45 ಸಾವಿರ, ಪರಿಶಿಷ್ಠ ಪಂಗಡ-49 ಸಾವಿರ, ಕುರುಬರು-20 ಸಾವಿರ, ಅಲ್ಪಸಂಖ್ಯಾತರು-14 ಸಾವಿರ, 26 ಸಾವಿರ ಇತರೆ ಮತಗಳಿವೆ. ಈ ಎಲ್ಲ ಮತಗಳ ಸಮೀಕರಣದ ಆಧಾರದ ಮೇಲೆ ಚುನಾವಣೆ ನಡೆಯಲಿದೆ. ಜೊತೆಗೆ ಹಣದ ಆರ್ಬಟವೂ ಜೋರಿದೆ.

ಇನ್ನೂ ಬಸವ ಕಲ್ಯಾಣದಲ್ಲಿ ಚುನಾವಣಾ ಕಾವು ಜೋರಾಗಿದೆ. ಜೆಡಿಎಸ್ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿ ಕಣಕ್ಕೆ ಇಳಿಸಿರುವುದರಿಂದ ಯಾರಿಗೆ ನಷ್ಟ ಎಂಬ ಚರ್ಚೆ ಆರಂಭವಾಗಿವೆ. ಕಾಂಗ್ರೆಸ್ ಅನುಕಂಪದ ಅಲೆ ನಂಬಿ ನಾರಾಯಣ್ ರಾವ್ ಅವರ ಪತ್ನಿ ಮಲ್ಲಮ್ಮ ಅವರಿಗೆ ಟಿಕೆಟ್ ನೀಡಿದೆ. ಬಿಜೆಪಿ ಬಸವರಾಜ್ ಸಲಗರ ಅವರಿಗೆ ಟಿಕೆಟ್ ಕೊಟ್ಟಿದ್ದರೆ ಜೆಡಿಎಸ್ ಸೈಯದ್ ಹೆಸ್ರಲ್ ಅಲಿ ಖಾದ್ರಿ ಅವರನ್ನು ಕಣಕ್ಕಿಳಿಸಿದೆ.

ಬೀದರ ಕ್ಷೇತ್ರದ ಹಿನ್ನಲೆಯನ್ನು ತಿಳಿಯುವುದಾದರೆ. 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ನಡೆದ ಪಟ್ಟಣವಿದು. ಜಿಲ್ಲಾಕೇಂದ್ರ ಬೀದರ್‌ನಿಂದ ಸುಮಾರು 80 ಕಿ.ಮೀ. ದೂರದಲ್ಲಿದೆ. ಪ್ರವಾಸಿಗರನ್ನು ಕೈ ಬೀಸಿ ಕರೆಯುವ ಪ್ರವಾಸಿ ತಾಣವಾಗಿದೆ. ಬಸವ ಕಲ್ಯಾಣದ ಕೋಟೆ ಪ್ರಮುಖ ಆಕರ್ಷಣೆಯ ವಸ್ತುವಾಗಿದೆ. ಬಸವಕಲ್ಯಾಣದಲ್ಲಿ ಲಾರಿಗಳು ಈ ಪಟ್ಟಣದ ಆರ್ಥಿಕತೆ ನಿರ್ಧರಿಸುತ್ತವೆ. ಒಂದು ಅಂದಾಜಿನ ಪ್ರಕಾರ 10 ಸಾವಿರಕ್ಕೂ ಅಧಿಕ ಲಾರಿಗಳು ಇಲ್ಲಿವೆ. ಹೈದರಾಬಾದ್-ಪುಣೆ ರಾಷ್ಟ್ರೀಯ ಹೆದ್ದಾರಿ ಪಟ್ಟಣಕ್ಕೆ ಹತ್ತಿರದಲ್ಲಿದೆ. ವಾಹನಗಳ ಬಿಡಿಭಾಗಗಳ ಉದ್ಯಮವೂ ಇಲ್ಲಿ ಜೋರಾಗಿದೆ. ಆದ್ದರಿಂದ, ಇಲ್ಲಿನ ಬಹುತೇಕ ಜನರು ಲಾರಿಗಳನ್ನು ಬಾಡಿಗೆಗೆ ನೀಡಿದ್ದಾರೆ. ಆದ್ದರಿಂದ, ಇಲ್ಲಿನ ಆರ್ಥಿಕತೆ ಲಾರಿಗಳ ಚಕ್ರದ ಸುತ್ತಲೇ ಗಿರಿಕಿ ಹೊಡೆಯುತ್ತದೆ.

ಬಸವ ಕಲ್ಯಾಣ 1983 ರಿಂದ 2004ರ ತನಕ ಜನತಾ ಪರಿವಾರದ ಭದ್ರ ಕೋಟೆಯಾಗಿತ್ತು. 2008ರಲ್ಲಿ ಕ್ಷೇತ್ರ ಬಿಜೆಪಿ ತಕ್ಕೆಗೆ ಸೇರಿತು. 2013ರಲ್ಲಿ ಕ್ಷೇತ್ರ ಜೆಡಿಎಸ್ ಪಾಲಾಯಿತು. ಹಾಗಾಗಿ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಮೂರು ಪಕ್ಷಗಳ ಹಿಡಿತದಲ್ಲಿರುವ ಕ್ಷೇತ್ರವಿದು. 2013ರ ಚುನಾವಣೆಯಲ್ಲಿ ಜೆಡಿಎಸ್ ಮಲ್ಲಿಕಾರ್ಜುನ ಖೂಬಾ ಅವರು 37,494 ಮತಗಳನ್ನು ಪಡೆದಿದ್ದರು. ಕಾಂಗ್ರೆಸ್‌ನ ಬಿ.ನಾರಾಯಣ ರಾವ್ 21,601 ಮತ, ಬಿಜೆಪಿಯ ಸಂಜಯ್ 17,431 ಮತಗಳನ್ನು ಪಡೆದಿದ್ದಾರೆ. 2018 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಬಿ. ನಾರಾಯಣರಾವ್ 61,425 ಮತಗಳನ್ನು ಪಡೆದು ಗೆಲುವು ಸಾಧಿಸಿದರು, ಜೆಡಿಎಸ್ ನಲ್ಲಿದ್ದ ಮಲ್ಲಿಕಾರ್ಜುನ್ ಖೂಬಾ ಪಕ್ಷವನ್ನು ಬದಲಿಸಿ ಬಿಜೆಪಿಯಿಂದ ಸ್ಪರ್ಧಿಸಿ 44,153 ಮತಗಳನ್ನು ಪಡೆದರೆ, ಜೆಡಿಎಸ್ ನ ಪಿಜಿ ಆರ್ ಸಿಂದ್ಯಾ 33, 414 ಮತಗಳನ್ನು ಪಡೆದರು.

ಎರಡು ಚುನಾವಣೆಯ ಮತಗಳಿಕೆಯನ್ನು ನೋಡುವುದಾದರೆ,

ಪಕ್ಷ	2013	2018
ಕಾಂಗ್ರೆಸ್	17.12%	42%
ಬಿಜೆಪಿ	13.82	30%
ಜೆಡಿಎಸ್	29.72	22%

ಮಲ್ಲಮ್ಮ ರವರನ್ನು ಗೆಲ್ಲಿಸಲು ಕಾಂಗ್ರೆಸ್ ನ ರಾಜ್ಯದ ನಾಯಕರ ದಂಡು ಸತತ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಜೆಡಿಎಸ್ ಗೆ ಇಲ್ಲಿ ನೆಲೆ ಇರುವ ಪ್ರದೇಶವಾಗಿದೆ. ಬಂಡೆಪ್ಪ ಕಾಶಂಪುರ್ ಮತ್ತು ಕುಮಾರಸ್ವಾಮಿಯವರ ನೇತೃತ್ವದಲ್ಲಿ ಚುನಾವಣಾ ಅಖಾಡಕ್ಕೆ ಧುಮಿಕಿದೆ. ಇಲ್ಲಿಯೂ ಬಿಜೆಪಿಯಲ್ಲಿ ಅಸಮಾಧಾನದ ಹೊಗೆ ಎದ್ದು ಕಾಣುತ್ತಿದೆ. ಟಿಕೇಟ್ ಹಂಚಿಕೆಯಲ್ಲಿ ಡೀಲ್ ಆಗಿದೆ, ಸ್ಥಳೀಯರನ್ನು ಬಿಟ್ಟು ಹೊರಗಿನವರಿಗೆ ಟಿಕೇಟ್ ನೀಡುರುವುದರಿಂದ ಟಿಕೆಟ್ ಹಣಕ್ಕೆ ಮಾರಾಟ ಆಗಿದೆ ಎಂದು ಟಿಕೇಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ್ ಖೂಬಾ ಬಹಿರಂಗ ಹೇಳಿಕೆ ನೀಡಿದ್ದಾರೆ. ಬಿಜೆಪಿ ಕಾರ್ಯಕರ್ತರು ನಾವು ಹೊರಗಿನವರಿಗೆ ಮತಹಾಕುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದರ ಲಾಭವನ್ನು ಪಡೆಯಲು ಕಾಂಗ್ರೆಸ್, ಜೆಡಿಎಸ್ ಪ್ರಯತ್ನಿಯನ್ನು ನಡೆಸಿವೆ. ಇಲ್ಲಿಯೂ ಕಾಂಚಣದ ಸದ್ದು ಜೋರಾಗಿಯೇ ಇದೆ.

ಬೆಳಗಾವಿ ಲೋಕಸಭೆ ಕ್ಷೇತ್ರ ಹೈವೋಲ್ಟೇಜ್‌ನದ್ದಾಗಿದೆ. ಕಾಂಗ್ರೆಸ್‌ನಿಂದ ಸತೀಶ್ ಜಾರಕಿಹೊಳಿ ನಾಮಪತ್ರ ಸಲ್ಲಿಸಿದ್ದರಿಂದ ಚಿತ್ರಣವೇ ಬದಲಾಗಿದೆ. ಅವರು ಇದಕ್ಕೆ ಪ್ರತ್ಯಸ್ತ್ರವಾಗಿ ಮಂಗಳಾ ಅಂಗಡಿ ಅವರಿಗೆ ಟಿಕೆಟ್ ನೀಡುವ ಮೂಲಕ ಬಿಜೆಪಿ ಅನುಕಂಪದ ಅಲೆಗೆ ಶರಣಾಗಿದೆ. ಕಮಲ ಪಾಳಯದ ಭದ್ರಕೋಟೆ ಎನಿಸಿರುವ ಬೆಳಗಾವಿ ಸತತವಾಗಿ 1998, 2004, 2009, 2013, 2018ರಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗಳು ಸತತವಾಗಿ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಈ ಪೈಕಿ ಸುರೇಶ ಅಂಗಡಿ ನಾಲ್ಕು ಸಲ ಗೆದ್ದರೆ, ಮಾಜಿ ಕೇಂದ್ರ ಸಚಿವ ಬಾಬಾಗೌಡ ಪಾಟೀಲ್ ಒಮ್ಮೆ ಲೋಕಸಭೆಗೆ ಆಯ್ಕೆಯಾಗಿದ್ದರು.

1951 ರಿಂದ 1991 ರ ವರೆಗೆ ಕಾಂಗ್ರೆಸ್ ಸತತವಾಗಿ ಗೆದ್ದಿರುವ ಕ್ಷೇತ್ರ ಇದಾಗಿದೆ. 1996 ರಲ್ಲಿ ಜನತಾದಳದಿಂದ ಶಿವಾನಂದ ಕೌಜಲಗಿಯವರು ಗೆಲುವು ಸಾಧಿಸಿದ್ದರು. 1998 ರಿಂದ 2019 ರ ವರೆಗೆ ಬಿಜೆಪಿ ಸತತವಾಗಿ ಗೆಲುವು ಸಾಧಿಸುತ್ತಿದೆ. ಎರಡು ಚುನಾವಣೆಯ ಮತಗಳಿಕೆಯನ್ನು ನೋಡುವುದಾದರೆ,

	2014 ರಲ್ಲಿ ಶೇ	2019 ರಲ್ಲಿ
ಬಿಜೆಪಿ	51.53%	63,22
ಕಾಂಗ್ರೆಸ್	44.48%	30,76%

8 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಲೋಕಸಭಾ ಕ್ಷೇತ್ರದಲ್ಲಿ ಬೆಳಗಾವಿ ತಾಲೂಕಿನ ಮೂರು ಕ್ಷೇತ್ರಗಳಲ್ಲಿ ಮರಾಠಿ ಮತಗಳೇ ಹೆಚ್ಚಿವೆ. ಮರಾಠಿಗರಿಗೆ ಬಿಜೆಪಿ ಕಡೆಗೆ ಒಲವು ಜಾಸ್ತಿ ಇದೆ. ಲಿಂಗಾಯತ ಮತಗಳು ಹೆಚ್ಚಾಗಿರುವುದರಿಂದ ಅವರೇ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. 4.42 ಲಕ್ಷದಷ್ಟು ಲಿಂಗಾಯತ ಸಮುದಾಯವಿದ್ದರೆ, ಮರಾಠ ಸಮಯುದಾಯ 2.26 ಲಕ್ಷ., ಮುಸ್ಲಿಂ-1.84 ಲಕ್ಷ. ಕುರುಬ ಸಮುದಾಯ-1.50 ಲಕ್ಷ. ಎಸ್ಸಿ-1.62 ಲಕ್ಷ. ಎಸ್ಟಿ-96 ಸಾವಿರ. ನೇಕಾರ- 70 ಸಾವಿರ, ಉಪ್ಪಾರ- 60 ಸಾವಿರ. ಇತರೆ ಸಮುದಾಯಗಳು 3 ಲಕ್ಷದಷ್ಟು ಇದ್ದಾರೆ.

ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಜಾರಕಿಹೊಳಿ ಕುಟುಂಬದ ಎಲ್ಲರೂ ಒಟ್ಟಾಗಿ ಸತೀಶ್ ಪರ ಪ್ರಚಾರಕ್ಕೆ ಇಳಿಯಬಹುದಾ ಎಂಬ ಪ್ರಶ್ನೆಗಳಿವೆ. ಇವರೆಲ್ಲ ಒಗ್ಗಾಟ್ಟಾಗಿ ಚುನಾವಣೆ ಎದುರಿಸಿದರೆ ಫಲಿತಾಂಶದ ಚಿತ್ರಣವೇ ಬೇರೆ ಆಗಲಿದೆ. ಆದರೆ ಸತೀಶ್ ಜಾರಕಿಹೊಳಿ ಪ್ರತಿನಿಧಿಸುವ ಯಮಕನಮರಡಿ ಕ್ಷೇತ್ರ ಬೆಳಗಾವಿ ಕ್ಷೇತ್ರದ ವ್ಯಾಪ್ತಿಗೆ ಬರುವುದಿಲ್ಲ. ಇದು ಸತೀಶ್ ರವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗುವ ಸಾಧ್ಯತೆಯೂ ಇದೆ ಎಂದು ಹೇಳಲಾಗುತ್ತಿದೆ. ಆದರೆ ಸಹೋದರ ಬಾಲಚಂದ್ರ ಅವರ ಅರಭಾವಿ, ರಮೇಶ್ ಅವರ ಗೋಕಾಕ್ ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಬರಲಿವೆ ಹೀಗಾಗಿ ಸಹೋದರರ ತೀರ್ಮಾನ ಕುತೂಹಲ ಮೂಡಿಸಿದೆ.

ಬಿಜೆಪಿಯಲ್ಲಿ ಅಸಮಾಧಾನ ಹೆಚ್ಚಾಗಿದ್ದು ಜಗದೀಶ್ ಶೆಟ್ಟರ ಅವರು ತಮ್ಮ ಸೊಸೆಗೆ ಟಿಕೇಟ್ ನೀಡುವಂತೆ ಹೂಕಮಾಂಡ್ ವರೆಗೆ ಪ್ರಯತ್ನ ನಡೆಸಿದ್ದರು. ಸಚಿವ ಉಮೇಶ್ ಕತ್ತಿ ತಮ್ಮ ಸಹೋದರ ರಮೇಶ್ ಕತ್ತಿಯವರಿಗೆ ಟಿಕೆಟ್ ನೀಡುವಂತೆ ತೆರೆಮರೆ ಪ್ರಯತ್ನ ನಡೆಸಿದ್ದರು. ಆದರೆ ವರಿಷ್ಠರು ಅಳೆದು ತೂಗಿ ಅಂತಿಮವಾಗಿ ದಿ. ಸುರೇಶ್ ಅಂಗಡಿಯವರ ಹೆಂಡತಿ ಮಂಗಳಾರವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಈ ಮೂರು ಕ್ಷೇತ್ರಗಳಲ್ಲಿ ಪಕ್ಷದ ಜೊತೆಗೆ ವೈಯಕ್ತಿಕ ವರ್ಚಸ್ಸು ಹೆಚ್ಚಾಗಿರುವುದು ಕಂಡು ಬರುತ್ತಿದೆ. ಪ್ರತಿ ಚುನಾವಣೆಯಂತೆ ಜಾತಿರಾಜಕರಣ ಈ ಬಾರಿಯೂ ನಡೆಯಲಿದೆ. ಹಣ, ಹೆಂಡ, ಸೀರೆ ಹಂಚುವುದು ಆಗಲೇ ಆರಂಭವಾಗಿದೆ. ರಾಜ್ಯ ರಾಜಕಾರಣದಲ್ಲಿ ಯಾವುದೇ ಪರಿಣಾಮ ಬೀರದಿದ್ದರು ಬಿಜೆಪಿ ಮತ್ತು ಕಾಂಗ್ರೆಸ್ ಗೆಲುವಿಗಾಗಿ ತಂತ್ರ ಪ್ರತಿತಂತ್ರಗಳನ್ನು ಹೆಣೆಯುತ್ತಿವೆ. ಆದರೆ ಮತದಾರನ ಮನಸ್ಸು ಯಾರ ಮೇಲಿದೆಯೋ ಚುನಾವಣಾ ಫಲಿತಾಂಶದ ವರೆಗೆ ಕಾಯ್ದು ನೋಡಬೇಕಿದೆ. ■

ಅತಿಥಿ ಅಂಕಣ




ಪ್ರೊ. ರಾಜೇಂದ್ರ ಚೆನ್ನಿ

ಡಾ. ಅಂಬೇಡ್ಕರ್ ಮುಷ್ಕರದ ಹಕ್ಕು ಕುರಿತ 1938 ಭಾಷಣ

ಮುಷ್ಕರ-ಪ್ರತಿಭಟನೆ ಮಾಡುವವರನ್ನು ಜೈಲಿಗೆ ಹಾಕುವವರಿಗೆ, ಬೇಲ್ ನಿರಾಕರಿಸುವವರಿಗೆ ಪಾಠವಾಗಲಿ

ಈ ನಾಲ್ಕು ಕೋಡ್‌ಗಳು ಯಾಕೆ ಕಾರ್ಮಿಕ ವಿರೋಧಿಯಾಗಿವೆಯೆಂದು ಅರಿಯಲು 15 ಸೆಪ್ಟೆಂಬರ್ 1938 ರಂದು ಅಂಬೇಡ್ಕರ್‌ರು ಮಾಡಿದ ಈ ಅದ್ಭುತ ಭಾಷಣವನ್ನು ಓದಿದರೆ ಸಾಕು. 1934ರಂದು ವ್ಯಾಪಾರ ವಿವಾದ ಸಂಧಾನಕ್ಕಾಗಿ ತಂದಿದ್ದ ಮಸೂದೆಯ ಬದಲಾಗಿ 1938ರಲ್ಲಿ ಔದ್ಯಮಿಕ ವಿವಾದ ಮಸೂದೆಯನ್ನು ತರಲು ಸರಕಾರವು ಹೊರಟಿದ್ದಾಗ ಬಾಂಬೆ ವಿಧಾನಸಭೆಯಲ್ಲಿ ನಡೆದ ಚರ್ಚೆಯ ಭಾಗವಾಗಿ ಅಂಬೇಡ್ಕರ್ ಈ ವಾದಗಳನ್ನು ಮಂಡಿಸಿದರು. ಈ ಚರ್ಚೆಯಲ್ಲಿ ಅಂಬೇಡ್ಕರ್ ಒಂದು ಪ್ರಧಾನ ಕಾನೂನಿನ ಪ್ರಶ್ನೆ ಮತ್ತು ಇನ್ನೊಂದು ಮುಖ್ಯವಾದ ತಾತ್ವಿಕ ಪ್ರಶ್ನೆಯನ್ನು ಎತ್ತುತ್ತಾರೆ.
ನಮ್ಮ ಸರ್ವೋಚ್ಚ ನ್ಯಾಯಾಲಯದ ಘನತೆವೆತ್ತ ನ್ಯಾಯಾಧೀಶರು ಈ ವಾಕ್ಯಗಳನ್ನು ಮತ್ತೆ ಮತ್ತೆ ಓದಲಿ. ಓದಿದರೆ ಸಾವಿರಾರು ಪ್ರತಿಭಟನಾಕಾರರನ್ನು ವಿಚಾರಣೆ ಇಲ್ಲದೆ ಜೈಲಿಗೆ ಹಾಕುವ ಪ್ರಕ್ರಿಯೆಯನ್ನು ಅವರ ಬೇಲ್ ನಿರಾಕರಣೆಯ ಮೂಲಕ ಸಮರ್ಥಿಸುವ ಘನತೆವೆತ್ತ ನ್ಯಾಯಾಧೀಶರು ಜಗತ್ತಿನ ಮಹಾನ್ ಚಿಂತಕನೊಬ್ಬನಿಂದ ಪ್ರಜಾಪ್ರಭುತ್ವದ ಮೊದಲ ಪಾಠವನ್ನು ಕಲಿತಂತಾಗುತ್ತದೆ. ಅಂಬೇಡ್ಕರ್ ಅವರ ಉಜ್ವಲವಾದ ಈ ಮಾತುಗಳನ್ನು ದೆಹಲಿಯ ಗಡಿಯಲ್ಲಿ ಪ್ರತಿಭಟನೆ ಮಾಡುತ್ತಿರುವ ರೈತರು ಮತ್ತು ಈಗ ಮತ್ತೊಮ್ಮೆ ನಾಲ್ಕು ಕೋಡ್‌ಗಳನ್ನು ವಿರೋಧಿಸಲು ತಯಾರಾಗುತ್ತಿರುವ ಕಾರ್ಮಿಕರು ತಮ್ಮ ಲಾಂಛನವನ್ನಾಗಿಸಿಕೊಳ್ಳಲಿ ಎಂದು ನನ್ನ ಆಸೆ ಮತ್ತು ಕನಸು.





"ಇತಿಹಾಸದಿಂದ ನಾವು ಕಲಿಯುವ ಪಾಠವೆಂದರೆ ಇತಿಹಾಸದಿಂದ ನಾವು ಯಾವ ಪಾಠವನ್ನು ಕಲಿಯುವುದಿಲ್ಲ". ಈ ಸತ್ಯವಚನವನ್ನು ಜರ್ಮನ್ ತತ್ವಜ್ಞಾನಿ ಹೆಗಲ್ ಹೇಳಿದ್ದಾನೆ ಎನ್ನಲಾಗಿದೆ. ನನಗೆ ಈ ಮಾತು ನೆನಪಾದದ್ದು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬಾಂಬೆ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಔದ್ಯಮಿಕ ವಿವಾದ ಮಸೂದೆಯನ್ನು ಕುರಿತು ಮಂಡಿಸಿದ ಅದ್ಭುತವಾದ ವಾದಮಂಡನೆಯನ್ನು ಮತ್ತೆ ಓದಿದಾಗ. ಏಪ್ರಿಲ್ 1 ರಿಂದ ಕೇಂದ್ರ ಸರಕಾರವು ತನ್ನ ಆಪದ್ಬಾಂಧವ, ಹಾಗೂ ದೇವರು ಕೊಟ್ಟ ವರವಾದ ಕೊರೋನಾ ಪಿಡುಗಿನ ಸಂದರ್ಭದಲ್ಲಿ ಸಂಸತ್ತಿನಲ್ಲಿ ಪಾಸುಮಾಡಿದ ಕಾರ್ಮಿಕ ಸಂಹಿತೆ (ಲೇಬರ್ ಕೋಡ್)ಗಳನ್ನು ಜಾರಿಮಾಡುವುದನ್ನು ಇತ್ತೀಚೆಗೆ ಮುಂದೂಡಲಾಯಿತು. ಕೆಲವರು ಸದ್ಯ ಸರಕಾರಕ್ಕೆ ಸ್ವಲ್ಪ ವಿವೇಚನೆ ಬಂದಿರಬಹುದು ಎಂದು ಸಮಾಧಾನಪಟ್ಟರು. ಆದರೆ ವಾಸ್ತವವೆಂದರೆ ಈ ಕೋಡ್‌ಗಳು ಜಾರಿಗೆ ಬರುವ ಮೊದಲು ತಮ್ಮ ಅನುಕೂಲಕ್ಕೆ ಕೆಲವು ತಯಾರಿಗಳನ್ನು ಮಾಡಿಕೊಳ್ಳಲು ಶ್ರೀ ಮೋದಿ ಮತ್ತು ಅವರ ಗುಲಾಮರು ಬಂಡವಾಳಶಾಹಿಗಳಿಗೆ ಮಾಡಿಕೊಟ್ಟ ಅನುಕೂಲವಿದಾಗಿದೆ. ಆದ್ದರಿಂದಲೇ ಈ ಬಗ್ಗೆ ಬಂಡವಾಳಶಾಹಿ ಪರವಾದ ಭಾರತದ ಕೆಲವು ಇಂಗ್ಲಿಷ್ ಪತ್ರಿಕೆಗಳು ವರದಿಯನ್ನು "India Inc. heaves a sigh of relief" ಎನ್ನುವ ಶೀರ್ಷಿಕೆಯೊಂದಿಗೆ ಪ್ರಕಟಿಸಿದವು. ಇರಲಿ.

ಈ ನಾಲ್ಕು ಕೋಡ್‌ಗಳು ಯಾಕೆ ಕಾರ್ಮಿಕ ವಿರೋಧಿಯಾಗಿವೆಯೆಂದು ಅರಿಯಲು 15 ಸೆಪ್ಟೆಂಬರ್ 1938 ರಂದು ಅಂಬೇಡ್ಕರ್‌ರು ಮಾಡಿದ ಈ ಅದ್ಭುತ ಭಾಷಣವನ್ನು ಓದಿದರೆ ಸಾಕು. 1934ರಂದು ವ್ಯಾಪಾರ ವಿವಾದ ಸಂಧಾನಕ್ಕಾಗಿ ತಂದಿದ್ದ ಮಸೂದೆಯ ಬದಲಾಗಿ 1938ರಲ್ಲಿ ಔದ್ಯಮಿಕ ವಿವಾದ ಮಸೂದೆಯನ್ನು ತರಲು ಸರಕಾರವು ಹೊರಟಿದ್ದಾಗ ಬಾಂಬೆ ವಿಧಾನಸಭೆಯಲ್ಲಿ ನಡೆದ ಚರ್ಚೆಯ ಭಾಗವಾಗಿ ಅಂಬೇಡ್ಕರ್ ಈ ವಾದಗಳನ್ನು ಮಂಡಿಸಿದರು. ವಿಶೇಷವೆಂದರೆ ಶ್ರೀ ಮೋದಿ ಮತ್ತು ಇಂದಿನ ಬಿ.ಜೆ.ಪಿ. ರೈತರು, ಕಾರ್ಮಿಕರು ಮತ್ತು ಚಳುವಳಿಗಾರರ ವಿರುದ್ಧ ತರುತ್ತಿರುವ ಕಾಯ್ದೆಗಳು, ತಿದ್ದುಪಡಿಗಳು ವಸಾಹತುಶಾಹಿ ಕಾಲದ ಕ್ರೂರ ಕಾನೂನುಗಳ ಥೇಟು ಅನುಕರಣೆಗಳಾಗಿವೆ. ಅಲ್ಲಲ್ಲಿ ಇನ್ನೂ ಹೆಚ್ಚು ಕ್ರೂರವಾಗಿಸುವ ಪ್ರಯತ್ನವನ್ನು ಇಂದಿನ ಸರಕಾರವು ಮಾಡುತ್ತಿದೆ.

ಈ ಚರ್ಚೆಯಲ್ಲಿ ಅಂಬೇಡ್ಕರ್ ಒಂದು ಪ್ರಧಾನ ಕಾನೂನಿನ ಪ್ರಶ್ನೆ ಮತ್ತು ಇನ್ನೊಂದು ಮುಖ್ಯವಾದ ತಾತ್ವಿಕ ಪ್ರಶ್ನೆಯನ್ನು ಎತ್ತಿ ಅದ್ಯಾವ ಮಟ್ಟಕ್ಕೆ ನಮ್ಮನ್ನೆಲ್ಲ ಕರೆದುಕೊಂಡು ಹೋಗುತ್ತಾರೆ ಎಂದರೆ ಗೌರವ ಹಾಗೂ ಕೃತಜ್ಞತೆಯಿಂದ ನನ್ನ ಮನಸ್ಸು ಆರ್ದ್ರವಾಯಿತು. ಕಾನೂನಿನ ಪ್ರಶ್ನೆಯೆಂದರೆ ಕಾರ್ಮಿಕ ಅಥವಾ ಕಾರ್ಮಿಕರು ಔದ್ಯಮಿಕ ಕರಾರು(ಗಳನ್ನು) ಉಲ್ಲಂಘಿಸಿದರೆ ಅದು ಕೇವಲ ಸೇವಾ ಒಪ್ಪಂದದ ಉಲ್ಲಂಘನೆಯಾಗುತ್ತದೆ ಮತ್ತು ನಾಗರೀಕ ಅಕ್ರಮವಾಗುತ್ತದೆಯೆ ಹೊರತು ಅಪರಾಧವಾಗುವುದಿಲ್ಲ. ಈ ವಾದವನ್ನು ಭಾರತದಲ್ಲಿನ ವಸಾಹತುಶಾಹಿ ಸರಕಾರ ಮತ್ತು ಇಂಗ್ಲೆಂಡ್‌ನ ಸಾಮ್ರಾಜ್ಯಶಾಹಿ ಸರಕಾರಗಳು ಒಪ್ಪಿಕೊಂಡೇ ಬಂದಿದ್ದವು. ಅದನ್ನು ಅಪರಾಧವೆಂದು ಪರಿಗಣಿಸಲಾಗಿರಲಿಲ್ಲ. ಇದು ಸರಿಯೆಂದು ಅಂಬೇಡ್ಕರ್ ವಾದಿಸುತ್ತಾರೆ. ಏಕೆಂದರೆ ಕಾರ್ಮಿಕರ ಉಲ್ಲಂಘನೆಗಳಿಗೆ ಕಾರಣವಾಗುವುದು ಅವರ ವಾಸ್ತವಿಕ ಸಮಸ್ಯೆಗಳೇ. ಹೀಗಾಗಿ ಮುಷ್ಕರವೂ ಕೂಡ ಒಂದು ಪರಿಹಾರ ಹುಡುಕುವ ಮಾರ್ಗ; ಅದು ಎಂದೂ ಅಪರಾಧವಾಗಲಾರದು. ಈ ಹಿಂದೆ ಸಫಲವಾಗಿದ್ದ, ಮಾರ್ಗದರ್ಶಕ ಸೂಚನೆಯ ರೂಪದಲ್ಲಿದ್ದದನ್ನು ಈಗ ಈ ಮಸೂದೆಯ ಮೂಲಕ ಅಪರಾಧಿ ಕಾನೂನು ಮಾಡಲು ಹೊರಟಿರುವ ಸರಕಾರವನ್ನು ಅಂಬೇಡ್ಕರ್ ವಿರೋಧಿಸುತ್ತಾರೆ. ಇಂಥ ಕಾನೂನುಗಳು ಒತ್ತಾಯದ ಗುಲಾಮಗಿರಿಯ ಹೇರಿಕೆಯಾಗುತ್ತವೆಯೆಂದು ಹೇಳುತ್ತಾರೆ. ಅವರ ಪ್ರಕಾರ ಕಾರ್ಮಿಕನು ತನ್ನ ಸ್ವಇಚ್ಛೆಯಿಂದ ತನ್ನ ಶ್ರಮವನ್ನು ನೀಡಬೇಕೆ ಹೊರತು ಹೊಸ ಗುಲಾಮಗಿರಿಗಾಗಿ ಅಲ್ಲವೆಂದು ಪ್ರಬಲವಾಗಿ ವಾದಿಸುತ್ತಾರೆ. ಈ ವಾದಗಳಲ್ಲಿ ಅಂಬೇಡ್ಕರ್ ಮತ್ತು ಅವರ ಸಹಸದಸ್ಯರು ಬಳಸುವ ಭಾಷೆಯ ಸೂಕ್ಷ್ಮತೆ, ವಿಚಾರಗಳ ಹಿಂದಿರುವ ಉದಾರವಾದವು ನಮ್ಮನ್ನು ದಂಗುಗೊಳಿಸುತ್ತವೆ, ನಮ್ರವಾಗಿಸುತ್ತವೆ. ಇಂದಿನ ಸಂಸತ್ತಿನಲ್ಲಿರುವ ಅಶಿಕ್ಷಿತ ಅನಾಗರೀಕ ರಾಜಕೀಯ ಪ್ರತಿನಿಧಿಗಳಿಗೂ ಈ ಉದಾತ್ತ ಮನೋಭೂಮಿಯ ಸದಸ್ಯರುಗಳಿಗೂ ಯಾವ ಹೋಲಿಕೆಯೂ ಇಲ್ಲ. ಅಂಬೇಡ್ಕರ್ ಅವರ ಮಾತುಗಳನ್ನು ಕೇಳಿ:


"ಸೇವಾ ಒಪ್ಪಂದದ ಉಲ್ಲಂಘನೆಯನ್ನು ಭಾರತೀಯ ಕಾನೂನು ಏಕೆ ಅಪರಾಧವಾಗಿಸಿಲ್ಲ? ಎಂಬುದೇ ಆ ಪ್ರಶ್ನೆ.... ಇದಕ್ಕೆ ಸದನದ ಇತರ ಸದಸ್ಯರು ಯಾವ ಉತ್ತರವನ್ನಾದರೂ ಕೊಡಬಯಸಲಿ. ಇದಕ್ಕೆ ನನ್ನ ಉತ್ತರ ತುಂಬಾ ಸರಳವಾಗಿದೆ. ನನ್ನ ಉತ್ತರ ಇದು: ಸೇವಾ ಒಪ್ಪಂದದ ಉಲ್ಲಂಘನೆಯನ್ನು ಭಾರತೀಯ ಶಾಸಕಾಂಗ ಅಪರಾಧವೆಂದು ಪರಿಗಣಿಸದೆ ಇರುವುದಕ್ಕೆ ಕಾರಣವೆಂದರೆ ಅದನ್ನು ಅಪರಾಧವಾಗಿ ಪರಿಗಣಿಸಿದರೆ, ತನ್ನ ಮನಸ್ಸಿಗೆ ವಿರುದ್ಧವಾಗಿ ಸೇವೆ ಸಲ್ಲಿಸುವಂತೆ ವ್ಯಕ್ತಿಯನ್ನು ಒತ್ತಾಯಪಡಿಸಿದಂತಾಗುತ್ತದೆ ಎಂದು ಅದು ಭಾವಿಸಿರುವುದು; ಅವನನ್ನು ಗುಲಾಮನಾಗಿಸಿದಂತಾಗುತ್ತದೆ (ಎಂದು ಭಾವಿಸಿರುವುದು) [ಸದಸ್ಯರು Hear, Hear ಎಂದು ಮೆಚ್ಚುಗೆ ಸೂಚಿಸುತ್ತಾರೆ]. ಹೀಗಾಗಿ ಮುಷ್ಕರವನ್ನು ದಂಡನಾರ್ಹವಾಗಿಸುವುದು ಕಾರ್ಮಿಕನನ್ನು ಗುಲಾಮನನ್ನಾಗಿಸುವುದಕ್ಕಿಂತ ಭಿನ್ನವಾದುದೇನೂ ಅಲ್ಲವೆಂದು ನಾನು ವಾದಿಸುತ್ತೇನೆ....... ಗುಲಾಮತನವೆನ್ನುವುದು ಅನೈಚ್ಛಿಕ ದಾಸ್ಯವಲ್ಲದೆ ಬೇರೇನೂ ಅಲ್ಲ. ಅಂತೆಯೆ ಇದು ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿರುವಂಥದು".

ಇಂದಿನ ಸರಕಾರವು ನಾಲ್ಕು ಕೋಡ್‌ಗಳನ್ನು ತಂದಿರುವುದು ಆಧುನಿಕ ಬಂಡವಾಳಶಾಹಿಯು ಬಯಸುವ ಆಧುನಿಕ ಗುಲಾಮಗಿರಿಯನ್ನು ಕಾನೂನಿನ ಮೂಲಕ ಅನುಷ್ಠಾನಗೊಳಿಸಲು. ಆದ್ದರಿಂದಲೇ ಇವುಗಳಿಗೆ ರಾಷ್ಟ್ರವ್ಯಾಪಿ ವಿರೋಧವು ಕಾರ್ಮಿಕರಿಂದ ಮತ್ತು ಅವರ ಸಂಘಟನೆಗಳಿಂದ ಬಂದಿದೆ. ಸ್ಪಷ್ಟವಾಗಿಯೇ ಈ ಕೋಡ್‌ಗಳು ವಸಾಹತುಶಾಹಿ ಕಾನೂನುಗಳಿಗಿಂತ ಕ್ರೂರವಾಗಿವೆ. ತಮ್ಮ ವಾದಮಂಡನೆಯಲ್ಲಿ ಅಂಬೇಡ್ಕರ್ ಕೊಡುವ ಒಂದು ಉದಾಹರಣೆ ಅತ್ಯಂತ ಕುತೂಹಲಕರವಾಗಿದೆ. 1857ರ ಸಿಪಾಯಿ ದಂಗೆಯ ನಂತರ ಅನೇಕ ಕಾರ್ಮಿಕರು ಪ್ರಕ್ಷುಬ್ಧ ಸ್ಥಿತಿಯಿಂದಾಗಿ ತಮ್ಮ ಉದ್ಯೋಗಗಳನ್ನು ತೊರೆದು ತಮ್ಮ ಊರುಗಳಿಗೆ ಹಿಂದುರಿಗಿದರು. ಇದನ್ನು ಅಪರಾಧವೆಂದು ಪರಿಗಣಿಸಲು ಸಾಧ್ಯವಿತ್ತು. ಆದರೆ ಅತ್ಯಂತ ಖಚಿತವಾದ ವಿದ್ವತ್ತನ್ನು ಗಳಿಸಿದ್ದ ಅಂಬೇಡ್ಕರ್ ಪ್ರಕಾರ ಬಹಳ ಕಡಿಮೆ ಸಂದರ್ಭಗಳಲ್ಲಿ ಹೀಗೆ ಮಾಡಲಾಯಿತು. ಅಂದರೆ ಪ್ರಭುತ್ವದ ವಿರುದ್ಧದ ನೇರ ಸಂಘರ್ಷದ "ರಾಜದ್ರೋಹ"ದ ಸಂದರ್ಭದಲ್ಲಿಯೇ ವಿದೇಶೀಯರ ವಸಾಹತುಶಾಹಿ ಪ್ರಭುತ್ವವು ಕಾರ್ಮಿಕರ ವಿರುದ್ಧ ಅಪರಾಧ ಕಾನೂನನ್ನು ಬಳಸಿಕೊಳ್ಳಲಿಲ್ಲ. ಆದರೆ ಸ್ವಾತಂತ್ರ್ಯದ ನಂತರ 7 ದಶಕಗಳು ಕಳೆದ ಮೇಲೆ ಚುನಾಯಿತ ಪ್ರಜಾಪ್ರಭುತ್ವವಾದಿ ಸರಕಾರವು ರೈತರನ್ನು ಮತ್ತು ಕಾರ್ಮಿಕರನ್ನು ಯಾವುದೇ ಪ್ರತಿಭಟನೆ ಮಾಡಿದರೆ ಅಪರಾಧಿಗಳನ್ನಾಗಿ ಹಾಗೂ ದೇಶದ್ರೋಹಿಗಳನ್ನಾಗಿ ನೋಡುತ್ತಿದೆ. ಅಂಬೇಡ್ಕರ್ ಸರಿಯಾಗಿ ಗುರುತಿಸಿದಂತೆ ಕಾರ್ಮಿಕರು ಅಥವಾ ಅವರ ಸಂಘಟನೆಗಳು ಪಿತೂರಿ, ದೇಶದ್ರೋಹ ಇತ್ಯಾದಿ ಉದ್ದೇಶಗಳನ್ನು ಇಟ್ಟುಕೊಂಡು ಮುಷ್ಕರ, ಪ್ರತಿಭಟನೆ ಮಾಡುವುದು ಅಸಾಧ್ಯ. ಹಾಗೆನ್ನುಕೊಳ್ಳುವುದು ಪ್ರಭುತ್ವದ ದೌರ್ಬಲ್ಯ. ಆದ್ದರಿಂದ ಇದಕ್ಕೆ ಆಸ್ಪದ ಕೊಡುವ ಕಾನೂನುಗಳು ಇರಲೇ ಕೂಡದು. ಈ ವಿಷಯಗಳಲ್ಲಿ ಅವರು ಎಷ್ಟು ಸೂಕ್ಷ್ಮವೆಂದರೆ ಈ ಹಿಂದಿನ ಮಸೂದೆ ಹಾಗೂ ಆದೇಶಗಳಲ್ಲಿ "shall" ಎನ್ನುವ ಪದವು ಕಡ್ಡಾಯವೆನ್ನುವ ಅರ್ಥಕೊಡುವುದರಿಂದ "may" ಅನ್ನುವ ಪದವನ್ನು ಬಳಸಲಾಗಿತ್ತಂತೆ. ಈಗಿನ ಪ್ರಭುತ್ವವು ಇಂಥ ಸೂಕ್ಷ್ಮತೆಯಿರಲಿ ಎಗ್ಗಿಲ್ಲದೆ ಸರ್ವಾಧಿಕಾರಿ ಭಾಷೆಯಲ್ಲಿ ಮಾತನಾಡುತ್ತದೆ.

ಹಾಗೆಂದ ಮಾತ್ರಕ್ಕೆ ಅಂಬೇಡ್ಕರ್ ಅವರು ವಸಾಹತುಶಾಹಿಯ ಬಗ್ಗೆ ಮುಗ್ಧರಾಗಿರಲಿಲ್ಲ. ಅನೇಕ ದಶಕಗಳವರೆಗೆ ನೇರವಾಗಿ ಕಾರ್ಮಿಕ ಚಳುವಳಿಗಳಲ್ಲಿ ಅವರು ಭಾಗಿಯಾಗಿದ್ದರು. ಹೇಗೆ ಗಾಂಧಿ ವಸಾಹತುಶಾಹಿ ಸರಕಾರವನ್ನು, ಇಂಗ್ಲೆಂಡ್‌ನ ಸರಕಾರವನ್ನು ಸಮಾನತೆಯ ಆತ್ಮವಿಶ್ವಾಸದಿಂದ ಸಂಬೋಧಿಸುತ್ತಿದ್ದರೋ ಹಾಗೆಯೆ ಅಂಬೇಡ್ಕರ್ ಕೂಡ ಈ ಭಾಷಣದಲ್ಲಿ ಮಾತನಾಡಿದ್ದಾರೆ. ಈ ಅಪೂರ್ವ ಘನತೆ ಹಾಗೂ ಆತ್ಮವಿಶ್ವಾಸಕ್ಕೆ ತಳಹದಿಯೆಂದರೆ ಸ್ವಾತಂತ್ರ್ಯದ ಬಗ್ಗೆ ಅವರಿಗಿರುವ ತಾತ್ವಿಕ ಶ್ರದ್ಧೆ. ಅವರು ಕಾರ್ಮಿಕರ ಹಕ್ಕಿನ ಪ್ರಶ್ನೆಯನ್ನು ಮಾನವ ಸ್ವಾತಂತ್ರ್ಯದ ವಿಶ್ವಾತ್ಮಕ ಚೌಕಟ್ಟಿನಲ್ಲಿ ನೋಡುತ್ತಾರೆ. ಅವರ ಮಾತುಗಳನ್ನು ಕೇಳಿ:

"'ಮುಷ್ಕರ' ಎಂದರೆ ಒಪ್ಪಂದದ ಉಲ್ಲಂಘನೆಗಿಂತ ಹೆಚ್ಚಿನದೇನೂ ಅಲ್ಲವೆಂಬ ನನ್ನ ಅರ್ಥವನ್ನು ಒಪ್ಪಿಕೊಳ್ಳಲು ಸದಸ್ಯರು ಸಿದ್ಧರಾಗಿದ್ದರೆ, ಸ್ವಾತಂತ್ರ್ಯದ ಹಕ್ಕು ಎಂಬುದಕ್ಕೆ ಮುಷ್ಕರ ಎಂಬುದು ಇನ್ನೊಂದು ಹೆಸರು ಮಾತ್ರವಾಗುತ್ತದೆ ಎಂದು ನಾನು ನಿವೇದಿಸಬಯಸುತ್ತೇನೆ. ವ್ಯಕ್ತಿ ತಾನು ಪಡೆದುಕೊಳ್ಳಬಯಸುವ ಯಾವುದೇ ಷರತ್ತುಗಳ ಮೇಲೆ ತನ್ನ ಸೇವೆಯನ್ನು ಒದಗಿಸುವ ಸ್ವಾತಂತ್ರ್ಯದ ಹಕ್ಕಲ್ಲದೆ ಅದು ಬೇರೇನೂ ಅಲ್ಲ. ಸ್ವಾತಂತ್ರ್ಯದ ಹಕ್ಕನ್ನು ನೀವು ಒಪ್ಪುವುದಾದರೆ ಮುಷ್ಕರ ಹೂಡುವ ಹಕ್ಕನ್ನು ನೀವು ಅಗತ್ಯವಾಗಿ ಒಪ್ಪುತ್ತೀರಿ".

ನಮ್ಮ ಸರ್ವೋಚ್ಚ ನ್ಯಾಯಾಲಯದ ಘನತೆವೆತ್ತ ನ್ಯಾಯಾಧೀಶರು ಈ ವಾಕ್ಯಗಳನ್ನು ಮತ್ತೆ ಮತ್ತೆ ಓದಲಿ. ಓದಿದರೆ ಸಾವಿರಾರು ಪ್ರತಿಭಟನಾಕಾರರನ್ನು ವಿಚಾರಣೆ ಇಲ್ಲದೆ ಜೈಲಿಗೆ ಹಾಕುವ ಪ್ರಕ್ರಿಯೆಯನ್ನು ಅವರ ಬೇಲ್ ನಿರಾಕರಣೆಯ ಮೂಲಕ ಸಮರ್ಥಿಸುವ ಘನತೆವೆತ್ತ ನ್ಯಾಯಾಧೀಶರು ಜಗತ್ತಿನ ಮಹಾನ್ ಚಿಂತಕನೊಬ್ಬನಿಂದ ಪ್ರಜಾಪ್ರಭುತ್ವದ ಮೊದಲ ಪಾಠವನ್ನು ಕಲಿತಂತಾಗುತ್ತದೆ. ಅಂಬೇಡ್ಕರ್ ಅವರ ಉಜ್ವಲವಾದ ಈ ಮಾತುಗಳನ್ನು ದೆಹಲಿಯ ಗಡಿಯಲ್ಲಿ ಪ್ರತಿಭಟನೆ ಮಾಡುತ್ತಿರುವ ರೈತರು ಮತ್ತು ಈಗ ಮತ್ತೊಮ್ಮೆ ನಾಲ್ಕು ಕೋಡ್‌ಗಳನ್ನು ವಿರೋಧಿಸಲು ತಯಾರಾಗುತ್ತಿರುವ ಕಾರ್ಮಿಕರು ತಮ್ಮ ಲಾಂಛನವನ್ನಾಗಿಸಿಕೊಳ್ಳಲಿ ಎಂದು ನನ್ನ ಆಸೆ ಮತ್ತು ಕನಸು.





ಎರಡನೇ ಕೋವಿಡ್ ಅಲೆ: ಜನಗಳ ಆರೋಗ್ಯ ಮತ್ತು ಜೀವನೋಪಾಯ ರಕ್ಷಿಸಬೇಕು



ಎರಡನೇ ಕೋವಿಡ್ ಅಲೆಗೆ ಮೋದಿ ಸರಕಾರ ಸಿದ್ಧವಾಗಿರಲಿಲ್ಲ ಎನ್ನುವುದಕ್ಕಿಂತ, ಪರಿಸ್ಥಿತಿ ಇನ್ನೇನೂ ಕೆಡುವುದಿಲ್ಲ ಎಂದೇ ಅದು ಜನವರಿ ತಿಂಗಳಿಂದ ಭಾವಿಸಿದಂತೆ ಕಾಣುತ್ತದೆ. ಆರೋಗ್ಯ ಕ್ಷೇತ್ರದಲ್ಲೂ, ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ಜನರಿಗೆ ಪರಿಹಾರ ಒದಗಿಸುವಲ್ಲಿಯೂ ಭಾರಿ ನಿರ್ಲಕ್ಷ್ಯದಿಂದಿದ್ದ ಈ ಸರಕಾರ ಅದನ್ನು ಮುಂದುವರೆಸಿರುವುದು 2021-22ನೇ ಸಾಲಿನ ಬಜೆಟ್‌ನಲ್ಲಿಯೂ ಪ್ರತಿಬಿಂಬಿತವಾಗಿತ್ತು. ಅದರ ಲಸಿಕೆ ಅಭಿಯಾನ ನೀತಿ ಕೂಡ ವಿರೋಧಾಭಾಸ ಮತ್ತು ಗೊಂದಲದಿಂದ ಕೂಡಿದೆ. ಇನ್ನಾದರೂ ಮುಂಬರುವ ಬಿಕ್ಕಟ್ಟನ್ನು ಎದುರಿಸಲು ಸರ್ಕಾರ ಮೂರ್ತ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಿಕ್ಕಟ್ಟನ್ನು ನವ-ಉದಾರವಾದಿ ಕ್ರಮಗಳನ್ನು ಮುಂದೊತ್ತಲು ಬಳಸುವ ಮಾರಕ ನಡೆಯನ್ನು ನಿಲ್ಲಿಸಿ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಮತ್ತು ಆರ್ಥಿಕ ಬಿಕ್ಕಟ್ಟಿನಿಂದ ಜನರನ್ನು ರಕ್ಷಿಸಲು ಅಗತ್ಯ ಆರ್ಥಿಕ ಕ್ರಮಗಳನ್ನು ಕೈಗೊಳ್ಳಲು ಗಮನ ಕೇಂದ್ರೀಕರಿಸಬೇಕು.

* ಪ್ರಕಾಶ್ ಕಾರಟ್

ಕೊವಿಡ್-19 ಸೋಂಕಿನ ಎರಡನೇ ಅಲೆ ಅನಾವರಣಗೊಳ್ಳುತ್ತಿದ್ದು ಭಾರತದಲ್ಲಿ ಅನಾಹುತಕಾರಿ ಪರಿಸ್ಥಿತಿ ತಲೆದೋರುತ್ತಿದೆ. ಏಪ್ರಿಲ್ 4 ರಂದು ದಿನದ ಪ್ರಕರಣಗಳು ಒಂದು ಲಕ್ಷದ ಗಡಿ ದಾಟಿದ್ದು(1,03,709) ಎಪ್ರಿಲ್ 7 ರಂದು 1,26,260 ಹೊಸ ಕೇಸ್‌ಗಳು ದಾಖಲಾಗಿವೆ. ಸೋಂಕು ದೇಶದಲ್ಲಿ ದಾಂಗುಡಿ ಇಟ್ಟಾಗಿನಿಂದ ಇದುವರೆಗಿನ ಅತ್ಯಂತ ಹೆಚ್ಚಿನ ನಿತ್ಯದ ಪ್ರಕರಣ ಏಪ್ರಿಲ್ 8ರಂದು ದಾಖಲಾಗಿದೆ. ಅಂದು 1,26,789 ಪ್ರಕರಣ ಪತ್ತೆಯಾಗಿವೆ. ದೇಶದಲ್ಲಿ ಸೋಂಕಿತರ ಒಟ್ಟು ಸಂಖ್ಯೆ 1,29,28,574ಕ್ಕೆ ತಲುಪಿದೆ. ಸಾವಿನ ದರ ಕೂಡ ಕಳವಳಕಾರಿ ರೀತಿಯಲ್ಲಿ ಏರುತ್ತಿದೆ.

ಸೋಂಕಿನ ಈ ರೀತಿಯ ಏರಿಕೆಗೆ ಸರ್ಕಾರ ಸಿದ್ಧವಾಗಿರಲಿಲ್ಲ ಎನ್ನುವುದು ಅಪೂರ್ಣ ಹೇಳಿಕೆಯಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ, ಮೋದಿ ಸರ್ಕಾರ ಜನವರಿಯಲ್ಲೇ ಅತ್ಯಂತ ಕೆಟ್ಟ ಪರಿಸ್ಥಿತಿ ಅಂತ್ಯಗೊಂಡಿದೆ ಎನ್ನುವ ರೀತಿಯಲ್ಲಿ ವರ್ತಿಸತೊಡಗಿತ್ತು. ದೇಶದ ಆರ್ಥಿಕತೆ ಚೇತರಿಕೆ ಹಾದಿಯಲ್ಲಿದೆ ಎಂಬ ವಿಶ್ವಾಸದಲ್ಲಿತ್ತು.

ಆರೋಗ್ಯ ಕ್ಷೇತ್ರದಲ್ಲೂ, ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ಜನರಿಗೆ ಪರಿಹಾರ ಒದಗಿಸುವಲ್ಲಿಯೂ ಮೋದಿ ಸರ್ಕಾರ ಭಾರಿ ನಿರ್ಲಕ್ಷ್ಯದಿಂದಿತ್ತು. 2021-22ನೇ ಸಾಲಿನ ಬಜೆಟ್‌ನಲ್ಲಿ ಇದು ಪ್ರತಿಬಿಂಬಿತವಾಗಿದೆ. ಆರೋಗ್ಯ ಕ್ಷೇತ್ರಕ್ಕೆ ಅಭೂತಪೂರ್ವವಾದ 137 ಶೇಕಡದಷ್ಟು ಹೆಚ್ಚು ಹಣ ಕೊಡಲಾಗಿದೆ ಎಂದು ಅದರ ಬಜೆಟ್ ಬಡಾಯಿ ಕೊಚ್ಚಿತ್ತು. ಆದರೆ, 2021-22ನೇ ಬಜೆಟ್‌ನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒದಗಿಸಿದ ಬಜೆಟ್ ಹಣ 2020-21ರಲ್ಲಿ ಮಾಡಲಾದ ನಿಜವಾದ ವೆಚ್ಚಕ್ಕಿಂತ 9.6 ಶೇಕಡ ಕಡಿಮೆಯಾಗಿದೆ ಎನ್ನುವುದು ವಾಸ್ತವ ಸಂಗತಿ.

ಗೊಂದಲಮಯ ಲಸಿಕೆ ಅಭಿಯಾನ

ಲಸಿಕೆ ಅಭಿಯಾನ ನೀತಿ ರೂಪಿಸಿದ ಸರ್ಕಾರದ ವಿಧಾನ ಕೂಡ ವಿರೋಧಾಭಾಸ ಮತ್ತು ಗೊಂದಲದಿಂದ ಕೂಡಿದೆ. ಇದುವರೆಗೆ ಎರಡು ಲಸಿಕೆಗಳಿಗೆ ತುರ್ತು ಬಳಕೆಗಾಗಿ ಅನುಮೋದನೆ ನೀಡಲಾಗಿದೆ. ಒಂದು ಅಸ್ಟ್ರಾ ಜೆನೆಕಾದ ಕೋವಿಶೀಲ್ಡ್, ಇನ್ನೊಂದು ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್. ಎರಡನೇ ಲಸಿಕೆ ಕೊವ್ಯಾಕ್ಸಿನ್‌ಅನ್ನು ಮೂರನೇ ಹಂತದ ಪರೀಕ್ಷೆಯ ಭಾಗವಾಗಿ ಬಳಕೆಗೆ ನೀಡಿರುವುದು ವಿವಾದಕ್ಕೆ ಕಾರಣವಾಯಿತು. ಅಲ್ಲದೆ ದೇಶದ ಔಷಧ ನಿಯಂತ್ರಣ ಸಂಸ್ಥೆ ರಷ್ಯಾದ ಸ್ಪುಟ್ನಿಕ್-5 ಲಸಿಕೆಗೆ ಇನ್ನೂ ಅನುಮೋದನೆ ನೀಡಿಲ್ಲ. ಇದು 35 ದೇಶಗಳಲ್ಲಿ ಬಳಕೆಯಲ್ಲಿದೆ. ಆದರೆ ಭಾರತದ ಕಂಪೆನಿಯಿಂದ ಅದರ ಉತ್ಪಾದನೆ ಮಾಡಲು ಇನ್ನೂ ಅನುಮತಿಗಾಗಿ ಕಾಯಲಾಗುತ್ತಿದೆ.

ಸೋಂಕು ಏರಿಕೆ ಅತಿ ಹೆಚ್ಚಾಗಿರುವ ರಾಜ್ಯಗಳಲ್ಲಿ ಲಸಿಕೆ ಸರಬರಾಜಿನಲ್ಲಿ ತ್ವರಿತವಾಗಿ ಕೊರತೆ ಕಾಡಲು ಆರಂಭವಾಗಿದೆ. ಏಪ್ರಿಲ್ 1ರಿಂದ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಿಕೆ ಆರಂಭವಾಗಿರುವ ಸಮಯದಲ್ಲಿ ಇದು ಉಂಟಾಗಿದೆ. ದೊಡ್ಡ ಪ್ರಮಾಣದಲ್ಲಿ ಲಸಿಕೆ ಕಾರ್ಯಕ್ರಮ ಯೋಜಿಸುವಲ್ಲಿ ಮತ್ತು ಕಾರ್ಯಗತಗೊಳಿಸುವಲ್ಲಿ ಸರ್ಕಾರದ ವೈಫಲ್ಯ ಇದರಿಂದಾಗಿ ಎದ್ದು ಕಾಣುತ್ತಿದೆ.

ಸರ್ಕಾರ, ಸ್ಪುಟ್ನಿಕ್ 5 ಲಸಿಕೆಯನ್ನು ತಕ್ಷಣವೇ ಬಳಕೆಗೆ ಆರಂಭಿಸಬೇಕು ಹಾಗೂ ಕೇವಲ ಒಂದು ಡೋಸ್ ಸಾಕಾಗುವಂಥ ಜಾನ್ಸನ್ ಅಂಡ್ ಜಾನ್ಸನ್‌ನಂತಹ ಲಸಿಕೆಯ ಉತ್ಪಾದನೆಗೆ ಲೈಸೆನ್ಸ್ ಪಡೆದುಕೊಳ್ಳಬೇಕು. ನೋವಾವ್ಯಾಕ್ಸ್ ನ್ನು ಸೀರಮ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯ (ಎಸ್ಐಐ) ಕೊವೊವ್ಯಾಕ್ಸ್ ಎಂಬ ಹೆಸರಲ್ಲಿ ಉತ್ಪಾದಿಸುವುದನ್ನು ತ್ವರಿತಗೊಳಿಸಬೇಕು. ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಆರೋಗ್ಯ ವ್ಯವಸ್ಥೆಯ ಹಾಗೂ ಇತರ ಸಾರ್ವಜನಿಕ ಆರೋಗ್ಯ ಸೌಲಭ್ಯಗಳ ಸಾಮರ್ಥ್ಯ ಹೆಚ್ಚಳಕ್ಕೆ 'ಆತ್ಮನಿರ್ಭರ್ ಸ್ವಾಸ್ಥ್ಯ ಭಾರತ್ ಯೋಜನಾ' ದಂಥ ಕೇಂದ್ರೀಯ ಪ್ರಾಯೋಜಿತ ಯೋಜನೆಗೆ ಕೇಂದ್ರ ಸರ್ಕಾರ ತಕ್ಷಣವೇ ಹಣ ಒದಗಿಸಬೇಕು. ಈ ಯೋಜನೆಯಡಿ ಆರು ವರ್ಷಗ್ಗಳಲ್ಲಿ 64,180 ಕೋಟಿ ರೂಪಾಯಿ ಖರ್ಚು ಮಾಡುವ ಗುರಿಯಿದ್ದರೂ ಬಜೆಟ್‌ನಲ್ಲಿ ಅದಕ್ಕೆ ಯಾವುದೇ ಹಣ ಒದಗಿಸಿಲ್ಲ. ಈ ಯೋಜನೆಯನ್ನು ಕೂಡಲೇ ಕಾರ್ಯಗತಗೊಳಿಸಬೇಕು. ಏಕೆಂದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಆದ್ಯತೆ ನೀಡಬೇಕಾಗಿದೆ.

V ಆಕಾರದ ಆರ್ಥಿಕ ಚೇತರಿಕೆ ಆಗುತ್ತಿದೆ ಎಂಬ ಸರ್ಕಾರ ಮುಂದಿಟ್ಟ ಸುಂದರ ಚಿತ್ರಣಕ್ಕೆ ತದ್ವಿರುದ್ಧವಾಗಿ ಆರ್ಥಿಕ ಬೆಳವಣಿಗೆಯಲ್ಲಿ ತಡೆಯುಂಟಾಗುತ್ತಿದೆ, ಅದು ನಿಂತು ಬಿಡುವಂತೆಯೂ ಕಾಣುತ್ತಿದೆ. ಎಂಟು ವಲಯಗಳನ್ನು ಒಳಗೊಂಡ ಪ್ರಮುಖ ಕ್ಷೇತ್ರವು (ಕೋರ್ ಸೆಕ್ಟರ್) ಆರು ತಿಂಗಳಲ್ಲಿ ಅತ್ಯಂತ ತೀವ್ರವಾಗಿ ಕುಗ್ಗಿದೆ. ತಯಾರಿಕಾ ಕ್ಷೇತ್ರದ ಉತ್ಪನ್ನದಲ್ಲಿ ಎರಡನೇ ಅಲೆ ಅರಂಭವಾಗುವುದಕ್ಕೂ ಮೊದಲೇ ಏಳು ತಿಂಗಳಲ್ಲೇ ಅತಿ ತೀವ್ರವಾದ ಕುಸಿತ ಕಂಡಿದೆ. ಇದೀಗ ಸೋಂಕು ಹೆಚ್ಚಳದೊಂದಿಗೆ ರಾತ್ರಿ ಕರ್ಫ್ಯೂ, ವಾರಾಂತ್ಯ ಲಾಕ್‌ಡೌನ್ ಮತ್ತು ಓಡಾಟದ ಮೇಲೆ ನಿರ್ಬಂಧ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದರಿಂದ ಆರ್ಥಿಕ ಚಟುವಟಿಕೆಗಳು ಮತ್ತಷ್ಟು ಪೇಲವಗೊಂಡಿವೆ. ಪೂರ್ಣ ಪ್ರಮಾಣದ ಲಾಕ್‌ಡೌನ್ ಹೇರದಿದ್ದರೂ ಹೆಚ್ಚುತ್ತಿರುವ ಪ್ರಕರಣಗಳ ಸಂಖ್ಯೆ ಮತ್ತು ಸೀಮಿತ ನಿಯಂತ್ರಣ ಕ್ರಮಗಳು ಮಹಾರಾಷ್ಟ್ರದಲ್ಲಿ ಚಿಲ್ಲರೆ ವ್ಯಾಪಾರ ವಹಿವಾಟು, ರೆಸ್ಟೋರೆಂಟ್‌ಗಳು ಮತ್ತು ಹೋಟೆಲ್ ವ್ಯವಹಾರಗಳ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಸೇವಾ ವಲಯದಲ್ಲಿ ಕೆಲಸಗಳಿಗೆ ಕತ್ತರಿ ಹಾಕಲಾಗುತ್ತಿದೆ. ಇದರಿಂದಾಗಿ ಉಲ್ಟಾ ವಲಸೆ (ನಗರಗಳಿಂದ ಹಳ್ಳಿಗಳಿಗೆ ವಲಸೆ) ಆರಂಭವಾಗಿದೆ.



ನಮ್ಮ ಪ್ರಯತ್ನಗಳೆಲ್ಲ ವ್ಯರ್ಥ!-ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ದಿವ್ಯ ನಿರ್ಲಕ್ಷ್ಯ ಮತ್ತು ಅಮಾನವೀಯ ಸ್ಪಂದನೆ

ಈ ಮಹಾಸೋಂಕಿನ ಮೊದಲ ಅಲೆಯ ಸಮಯದಲ್ಲಿ ಸಂಕಟದಲ್ಲಿದ್ದ ಜನರ ಅಗತ್ಯಗಳಿಗೆ ಸ್ಪಂದಿಸುವಲ್ಲಿ ಮೋದಿ ಸರ್ಕಾರ ಅತ್ಯಂತ ನಿರ್ಲಕ್ಷ್ಯ ತೋರಿತ್ತು. ಸರ್ಕಾರ ಪ್ರಕಟಿಸಿದ ಆರ್ಥಿಕ ಚೇತರಿಕೆಯ ಪ್ಯಾಕೇಜ್‌ನಲ್ಲಿ, ಹೆಚ್ಚುವರಿ ಖರ್ಚಿನ ವಿಚಾರವಾಗಿ ಹೇಳುವುದಾದರೆ ಜಿಡಿಪಿಯ 1.5 ಶೇಕಡದಷ್ಟೂ ಇರಲಿಲ್ಲ. ತಮ್ಮ ನಾಗರಿಕರಿಗೆ ಗಮನಾರ್ಹ ಪ್ರಮಾಣದಲ್ಲಿ ನದು ಸಬ್ಸಿಡಿಗಳನ್ನು ಕೊಟ್ಟ ಅಮೆರಿಕ, ಬ್ರಿಟನ್ ಮತ್ತು ಐರೋಪ್ಯ ಒಕ್ಕೂಟ ದೇಶಗಳಂತಲ್ಲದೆ ಮೋದಿ ಸರ್ಕಾರ ತೀರಾ ಅಲ್ಪಪ್ರಮಾಣದ ನಗದು ನೆರವು ನೀಡಿದೆ, ಸಣ್ಣ ವ್ಯವಹಾರಸ್ಥರು ಮತ್ತು ಕಿರು ಉತ್ಪಾದಕರಿಗೆ ಬೆಂಬಲ ನೀಡಲು ನಿರಾಕರಿಸಿದೆ.

ಮಕ್ಕಳು, ಮಹಿಳೆಯರು ಮತ್ತು ಪುರುಷರಾದಿಯಾಗಿ ಆಹಾರ ಮತ್ತು ವಸತಿಯಿಲ್ಲದೆ ಹೆದ್ದಾರಿಗಳಲ್ಲಿ ನಡೆದು ಸಾಗಿದ ಲಕ್ಷಾಂತರ ವಲಸೆ ಕಾರ್ಮಿಕರ ದಯನೀಯ ದೃಶ್ಯ ಈ ಸರ್ಕಾರದ ಸ್ಪಂದನೆಯಲ್ಲಿ ದಿವ್ಯ ನಿರ್ಲಕ್ಷ್ಯ ಮತ್ತು ಅಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ.

ಮುಂಬರುವ ಬಿಕ್ಕಟ್ಟನ್ನು ಎದುರಿಸಲು ಸರ್ಕಾರ ಇನ್ನಾದರೂ ಮೂರ್ತ ಕ್ರಮಗಳನ್ನು ಕೈಗೊಳ್ಳಬೇಕು. ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು 35 ಕೆಜಿ ಆಹಾರ ಧಾನ್ಯವನ್ನು ಖಾತರಿಪಡಿಸುವುದು ಮೊದಲ ಹೆಜ್ಜೆ. ಅದರಲ್ಲಿ 10 ಕೆಜಿ ಧಾನ್ಯ ಉಚಿತವಾಗಿ ಒದಗಿಸಬೇಕು. ಅಹಾರ ಭದ್ರತೆ ಕಾನೂನು ವ್ಯಾಪ್ತಿಗೆ ಬರುವ 80 ಕೋಟಿ ಜನರಿಗೆ ಪ್ರತಿ ತಿಂಗಳು 5 ಕೆಜಿ ಅಕ್ಕಿ/ಗೋಧಿ ಮತ್ತು ಒಂದು ಕೆಜಿ ಬೇಳೆಯನ್ನು ಉಚಿತವಾಗಿ ಕೊಡುವುದಾಗಿ ಸರ್ಕಾರ ಘೋಷಿಸಿತ್ತು. ಅದು 2020 ನವೆಂಬರ್ ವರೆಗೆ ಮಾತ್ರ ಮುಂದುವರಿಯಿತು.

2021 ಮಾರ್ಚ್ 1ರ ಹೊತ್ತಿಗೆ ದೇಶದಲ್ಲಿ 9.2 ಕೋಟಿ ಟನ್ ಆಹಾರ ಧಾನ್ಯದ ಕಾಪು ದಾಸ್ತಾನಿದೆ. ಇದು ಕಡ್ಡಾಯ ಕಾಪು ದಾಸ್ತಾನಿಗಿಂತ ಮೂರು ಪಟ್ಟು ಹೆಚ್ಚಾಗಿದೆ. ಹೀಗಾಗಿ ಸರ್ಕಾರ ಕನಿಷ್ಠ ಮುಂದಿನ ಆರು ತಿಂಗಳವರೆಗಾದರೂ ಪ್ರತಿ ಕುಟುಂಬದ ಉಚಿತ ಧಾನ್ಯ ಪ್ರಮಾಣವನ್ನು 10 ಕೆಜಿಗೆ ಏರಿಸಬೇಕು.

ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲ ಕುಟುಂಬಗಳಿಗೆ 7,500 ರೂಪಾಯಿ ನಗದನ್ನು ನೀಡುವಂತೆ ಎಲ್ಲ ಪ್ರತಿಪಕ್ಷಗಳು 2020ರ ಸೆಪ್ಟೆಂಬರ್‌ನಲ್ಲೇ ಆಗ್ರಹಿಸಿದ್ದವು. ಆದರೆ ಸರ್ಕಾರ ಜನಧನ್ ಖಾತೆ ಹೊಂದಿದ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಮೂರು ಮಾಸಿಕ ಕಂತುಗಳಲ್ಲಿ 1,500 ರೂಪಾಯಿ ಜಮಾ ಮಾಡಿ ಕೈತೊಳೆದುಕೊಂಡಿದೆ. ಈ ಮಹಾಸೋಂಕು ಇನ್ನೂ ದೀರ್ಘ ಅವಧಿ ಇರಲಿರುವುದರಿಂದ ಕೇಂದ್ರ ಸರ್ಕಾರ ಎಲ್ಲ ಕುಟುಂಬಗಳಿಗೆ ನಗದು ಸಬ್ಸಿಡಿಯನ್ನು ಒದಗಿಸಬೇಕು.

ಉದ್ಯೋಗ ಕ್ಷೇತ್ರದಲ್ಲಿ ಬಿಕ್ಕಟ್ಟು ಆಳಗೊಳ್ಳುತ್ತಿರುವುದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ವಿಸ್ತರಿಸಬೇಕು. ಹೆಚ್ಚಿನ ಕೂಲಿಯೊಂದಿಗೆ ವರ್ಷಕ್ಕೆ ಕನಿಷ್ಠ 200 ದಿನ ಕೆಲಸ ಒದಗಿಸುವುದನ್ನು ಖಾತರಿಪಡಿಸಲು ಇದು ಅತ್ಯಗತ್ಯ. ಅದುವರೆಗೆ ರಾಜ್ಯಗಳಲ್ಲಿ ಕಾರ್ಯಗತಗೊಳಿಸುತ್ತಿರುವ ಕೆಲಸದ ದಿನಗಳಿಗೆ ಕೂಲಿ ಕೊಡಲು ಸಾಲುವಷ್ಟು ಹಣವನ್ನು ಒದಗಿಸಬೇಕು. ಸರಕಾರ ನಗರ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದನ್ನು ತಕ್ಷಣವೇ ಪ್ರಕಟಿಸಿ ನಗರ ಪ್ರದೇಶಗಳ ನಿರುದ್ಯೋಗಿಗಳ ಸ್ವಲ್ಪ ಪರಿಹಾರ ಒದಗಿಸಬೇಕು.

ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆ (ಎಂಎಸ್ಎಂಇ) ಕ್ಷೇತ್ರ ದೇಶದ 11 ಕೋಟಿ ಜನರಿಗೆ ಉದ್ಯೋಗ ಕಲ್ಪಿಸುತ್ತದೆ. ಈ ಮಹಾಸೋಂಕಿನಿಂದ ಅತಿ ಹೆಚ್ಚು ಹಾನಿ ಅನುಭವಿಸಿದ ಕ್ಷೇತ್ರ ಇದಾಗಿದೆ. ಅದರ ನೆರವಿಗೆ ಈ ವರೆಗೆ ಕೈಗೊಂಡ ಕ್ರಮಗಳು ಏನೇನೂ ಸಾಲದು. ಸಾಲ ಮರುಪಾವತಿ ಕಂತು ಮುಂದೂಡಿಕೆ (ಮಾರಟೋರಿಯಂ), ಉಳಿದ ಬಾಕಿ ಸಾಲಗಳ ಬಡ್ಡಿ ಮನ್ನಾ, ಕಚ್ಚಾ ವಸ್ತುಗಳ ಖರೀದಿಗೆ ಸಬ್ಸಿಡಿ ಮತ್ತಿತರ ಬೆಂಬಲದ ಕ್ರಮಗಳಿಗೆ ಕೇಂದ್ರ ಸರ್ಕಾರ ಮುಂದಾಗಬೇಕಿದೆ.

ಸರ್ಕಾರದ ಮಾರಕ ನಡೆ ನಿಲ್ಲಬೇಕು

ಇವಕ್ಕೆಲ್ಲ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಕ್ಕಿಂತ ಹೆಚ್ಚಿನ ಮಟ್ಟದ ಸಾರ್ವಜನಿಕ ವೆಚ್ಚ ಇರುತ್ತದೆ. ಸರ್ಕಾರ ವಿತ್ತೀಯ ಕೊರತೆ ಮಿತಿಗಳಿಗೆ ಅಂಟಿಕೊಳ್ಳದೆ ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸಲು ಸಾಲ ತರಬಹುದು. ಅಲ್ಲದೆ, ಕಾರ್ಪೊರೇಟ್ ಮತ್ತು ಅತಿ-ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸಬೇಕು, ಒಂದು ಸಂಪತ್ತು ತೆರಿಗೆ ವಿಧಿಸುವುದನ್ನು ಆರಂಭಿಸಬೇಕು. ಆದಾಯ ಸಂಗ್ರಹಕ್ಕಾಗಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಪರೀತ ತೆರಿಗೆಗಳನ್ನು ಅವಲಂಬಿಸುವ ಮಾರಕ ನೀತಿಗೆ ಬದಲು ಈ ಕ್ರಮಕ್ಕೆ ಮುಂದಾಗಬೇಕು.

ಎರಡು ಮಹತ್ವದ ಕ್ಷೇತ್ರಗಳಲ್ಲಿ ಕೇರಳ ಸರ್ಕಾರ ಮಾಡಿದ್ದನ್ನು ಇಡೀ ದೇಶಕ್ಕೆ ಮಾಡಲು ಕೇಂದ್ರ ಸರ್ಕಾರ ಮುಂದಾಗುವುದು ಒಳ್ಳೆಯದು. ಕೇರಳದಲ್ಲಿ ಕೊವಿಡ್ ಸೋಂಕಿತರಲ್ಲಿ 95 ಶೇಕಡದಷ್ಟು ಜನರಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗಿದೆ. ಅಲ್ಲದೆ ಎಲ್‌ಡಿಎಫ್ ಸರ್ಕಾರ, ಮಹಾಸೋಂಕಿನ ಅವಧಿಯುದ್ದಕ್ಕೂ 88 ಲಕ್ಷ ಕುಟುಂಬಗಳಿಗೆ ಉಚಿತ ಆಹಾರದ ಕಿಟ್‌ಗಳನ್ನು ಪೂರೈಸಿದೆ. ಕಿಟ್‌ನಲ್ಲಿ ಆಹಾರ ಧಾನ್ಯ ಮಾತ್ರವಲ್ಲದೆ, ಬೇಳೆ, ಖಾದ್ಯ ತೈಲ ಮತ್ತು ಮಸಾಲೆ ಪದಾರ್ಥಗಳೂ ಇದ್ದವು.

ಮೋದಿ ಸರ್ಕಾರ, ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಗಮನ ಕೇಂದ್ರೀಕರಿಸುವ ಹಾಗೂ ಆರ್ಥಿಕ ಬಿಕ್ಕಟ್ಟಿನಿಂದ ಜನರನ್ನು ರಕ್ಷಿಸಲು ಅಗತ್ಯ ಆರ್ಥಿಕ ಕ್ರಮಗಳನ್ನು ಕೈಗೊಳ್ಳುವ ಬದಲು ಈ ಬಿಕ್ಕಟ್ಟನ್ನು ನವ-ಉದಾರವಾದಿ ನೀತಿಯನ್ನು ಮುಂದೊತ್ತಿ ಕೆಲವೇ ಕಾರ್ಪೊರೇಟ್ ಮತ್ತು ಹಣಕಾಸು ಮಹಾಕುಳಗಳ ಹಿತಗಳನ್ನು ಈಡೇರಿಸುತ್ತಿದೆ. ಕೃಷಿ ಕಾನೂನುಗಳು, ಹೊಸ ಕಾರ್ಮಿಕ ಸಂಹಿತೆಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣದ ಧಾವಂತ, ಅದರ ಜೊತೆ-ಜೊತೆಗೇ ವಿಷಮಯ ಕೋಮುವಾದಿ ರಾಜಕೀಯ ಸಾಗುತ್ತಿದೆ. ದೇಶದ ಹಿತದೃಷ್ಟಿಯಿಂದ ಈ ಮಾರಕ ನಡೆಯನ್ನು ತಡೆಯಲೇ ಬೇಕು. ಮಹಾಸೋಂಕು ಮತ್ತು ಜನರ ಕಲ್ಯಾಣ- ಇವೆರಡಕ್ಕೂ ಸರ್ಕಾರ ಸಂಪೂರ್ಣ ಗಮನ ನೀಡಲೇಬೇಕಾಗಿದೆ.

ಅನು: **ವಿಶ್ವ**







ಪಶ್ಚಿಮ ಬಂಗಾಲದ ಸಂಯುಕ್ತ ಮೋರ್ಚಾ: ಆತ್ಮವಿಶ್ವಾಸದ ವಾತಾವರಣ, ಹೊಸ ಹುರುಪಿನ ಮುನ್ನಡೆ

ಫೆಬ್ರುವರಿ 28ರಂದು ಕಲ್ಕತ್ತೆಯ ಐತಿಹಾಸಿಕ ಬ್ರಿಗೇಡ್ ಮೈದಾನದಲ್ಲಿ ನಡೆದ ಅಭೂತಪೂರ್ವ ರ್‍ಯಾಲಿ, ಅಲ್ಲಿ ರಾಜ್ಯದ ಜನತೆಯ ಮುಂದಿಟ್ಟ ಸಂಯುಕ್ತ ಮೋರ್ಚಾ ಮೈತ್ರಿಕೂಟ ಈ ಬಾರಿಯೂ ಚುನಾವಣಾ ಸಮರ ಬಿಜೆಪಿ ಮತ್ತು ಟಿಎಂಸಿ ನಡುವೆಯೇ ಎಂಬ ಕಥನಗಳನ್ನು ಬದಲಿಸಲಾರಂಭಿಸಿತ್ತು.

ನಂತರ ಅಭ್ಯರ್ಥಿಗಳ ಪಟ್ಟಿಗಳ ಪ್ರಕಟಣೆ, ಅದರಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಯುವಜನರ ಹೆಸರುಗಳು, ರಾಜ್ಯಾದ್ಯಂತ ಶಿಸ್ತಿನ ಪ್ರಚಾರ, ಎಲ್ಲೆಡೆಗಳಲ್ಲಿ ಸಂಯುಕ್ರ ಮೋರ್ಚಾದ ಇಂತಹ ಸಾವಿರಾರು ಸಣ್ಣ–ದೊಡ್ಡ ರ್‍ಯಾಲಿಗಳು, ಮನೆ–ಮನೆ ಪ್ರಚಾರ, ರಸ್ತೆ–ರಸ್ತೆಗಳಲ್ಲಿ ಮೆರವಣಿಗೆಗಳು ಈ ಚುನಾವಣೆಗಳ ಸ್ವರೂಪವನ್ನೇ ಈಗ ಬದಲಿಸಿವೆ.

ಮೂರನೇ ಹಂತದ ಮತದಾನ ಮುಗಿಯುವ ವೇಳೆಗೆ, ಒಂದೆಡೆಯಲ್ಲಿ ಟಿಎಂಸಿ ಮತ್ತು ಬಿಜೆಪಿ ಮುಂಖಮಡರುಗಳು ಪರಸ್ಪರ ಕೆಸರು ಎರಚಾಡುವುದರಲ್ಲಿ, ಪರಸ್ಪರ ಮುಖಂಡರುಗಳನ್ನು ಸೆಳೆಯುವ ಸ್ಪರ್ಧೆಯಲ್ಲಿ ರಾಜ್ಯದ ಜನಸಾಮಾನ್ಯರನ್ನು ಬಾಧಿಸುತ್ತಿರುವ ಗಹನ ಸಮಸ್ಯೆಗಳನ್ನು ಹಿನ್ನೆಲೆಗೆ ತಳ್ಳುತ್ತಿದ್ದರೆ, ಎಡರಂಗದ ಪ್ರಣಾಳಿಕೆ ಮತ್ತು ಸಂಯುಕ್ತ ಮೋರ್ಚಾದ ಜಂಟಿ ಮನವಿ 2021 ಈಗ 2016 ಅಥವ 2019ರಂತಿಲ್ಲ ಎಂದು ಮುಖ್ಯಧಾರೆಯ ಮಾಧ್ಯಮಗಳೂ ಗುರುತಿಸುವಂತಾಗಿದೆ. ಎಡಪಕ್ಷಗಳನ್ನು ಲೆಕ್ಕದಿಂದ ಹೊರಗಿಟ್ಟಿದ್ದ ';ಬುದ್ಧಿಜೀವಿಗಳು' ಕೂಡ ಇದ್ದಕ್ಕಿದ್ದಂತೆ ಕಣ್ಣು ಬಿಟ್ಟು ಗಮನಿಸುವಂತಾಗಿದೆ.

2018ರಲ್ಲಿ ಸುಮಾರು 34ಶೇ. ದಷ್ಟು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ನಾಮಪತ್ರವನ್ನೂ ಸಲ್ಲಿಸಲಾಗದ ಸ್ಥಿತಿಯನ್ನು ನಿರ್ಮಿಸುವಲ್ಲಿ ಆಳುವ ಪಕ್ಷ ಯಶಸ್ವಿಯಾಗಿದ್ದರೆ ಈ ಬಾರಿ ಜನಸಾಮಾನ್ಯರನ್ನು ಆ ರೀತಿ ಬೆದರಿಸಲು ಅವರಿಗೆ ಸಾಧ್ಯವಾಗಿಲ್ಲ. ಸಂಯುಕ್ತ ಮೋರ್ಚಾದ ರಚನೆ ಮತ್ತು ಪ್ರಚಾರ ಜನಗಳಲ್ಲಿ ಹೊಸ ಆತ್ಮವಿಶ್ವಾಸವನ್ನು ಮೂಡಿಸಿರುವುದು ಎದ್ದು ಕಾಣುತ್ತಿದೆ ಎಂದು ಮೋರ್ಚಾದ ಕಹೇಳುತ್ತಿರುವವರು ಮೋರ್ಚದ ಮುಖಂಡರು ಮಾತ್ರವೇ ಅಲ್ಲ.

ಇನ್ನೊಂದು ವಿಶೇಷ ಸಂಗತಿಯೆಂದರೆ, ಸುಮಾರು ಒಂದು ದಶಕದ ನಂತರ ಎಡಪಕ್ಷಗಳಿಗೆ ಪ್ರತಿಯೊಂದು ಮತಗಟ್ಟೆಯಲ್ಲೂ ಪೋಲಿಂಗ್ ಏಜೆಂಟರನ್ನು ನಿಲ್ಲಿಸುವುದು ಸಾಧ್ಯವಾಗಿದೆ. ಹತ್ತು ವರ್ಷಗಳಿಂದ ಆಳ್ವಿಕೆ ನಡೆಸುತ್ತಿರುವ ಟಿಎಂಸಿ ಮತ್ತು ಜಗತ್ತಿನ ಅತಿದೊಡ್ಡ ರಾಜಕೀಯ ಪಕ್ಷ ಎಂದು ಹೇಳಿಕೊಳ್ಳುತ್ತಿರುವ ಬಿಜೆಪಿಗೂ ಎಲ್ಲ ಮತಗಟ್ಟೆಗಳಿಗೂ ಪೋಲಿಂಗ್ ಏಜೆಂಟರನ್ನು ಪಡೆಯುವುದು ಸಾಧ್ಯವಾಗಿಲ್ಲ ಎಂಬುದು ಗಮನಾರ್ಹ.


ಮತದಾರರ ಮನದಲ್ಲಿ ಭದ್ರತೆಯ ಭಾವನೆಯನ್ನು ಉಂಟು ಮಾಡುವುದು ಸಾಧ್ಯವಾಗಿರುವುದು ಸಂಯುಕ್ತ ಮೋರ್ಚಾದ ಮೊದಲ ಯಶಸ್ಸು ಎಂದು ವೀಕ್ಷಕರು ವಿಶ್ಲೇಷಿಸುತ್ತಿದ್ದಾರೆ.

ಎಡರಂಗದ ಚುನಾವಣಾ ಪ್ರಣಾಳಿಕೆ
ಹೊಸ ದಾರಿಗಳನ್ನು ತೆರೆದಿಡುವ ಜನತಾ ಪ್ರಣಾಳಿಕೆ



ಪಶ್ಚಿಮ ಬಂಗಾಲದ ಎಡರಂಗದ ವಿಧಾನಸಭಾ ಚುನಾವಣಾ ಪ್ರಣಾಳಿಕೆಯನ್ನು ಎಲ್ಲ ಎಡರಂಗದ ಪಕ್ಷಗಳ ಮುಖಂಡರ ಸಮ್ಮುಖ ಮಾರ್ಚ್ 21 ರಂದು ಎಡರಂಗದ ಅಧ್ಯಕ್ಷ ಬಿಮನ್ ಬಸುರವರು ಬಿಡುಗಡೆ ಮಾಡಿದರು.

ಇದು ಹೊಸ ದಾರಿಗಳನ್ನು ತೆರೆದು ಕೊಟ್ಟಿರುವ ಒಂದು ಪ್ರಣಾಳಿಕೆ ಎಂದು ಹೇಳಲಾಗಿದೆ.



ಈ ಚುನಾವಣೆಗಳು ಇಡೀ ಮಾನವ ಕುಲ ಒಂದು ಮಹಾಸೋಂಕಿನ ವಿರುದ್ಧ ಗಂಭೀರ ಹೋರಾಟ ನಡೆಸುತ್ತಿರುವ ವರ್ಷದಲ್ಲಿ ನಡೆಯುತ್ತಿದೆ. ಇದು ದೇಶದಲ್ಲಿ ಕೋಟ್ಯಂತರ ಜನಸಾಮಾನ್ಯರ ಜೀವನೋಪಾಯಗಳನ್ನು ಧ್ವಂಸ ಮಾಡಿದ ಕ್ರೂರ ಲಾಕ್‌ಡೌನಿನ ವರ್ಷವೂ ಅಗಿದೆ. ಇಂತಹ ಸನ್ನಿವೇಶದಲ್ಲಿ ಪಶ್ಚಿ ಮ ಬಂಗಾಲದಲ್ಲಿ ಮಾರ್ಚ್ 27ರಿಂದ ಎಪ್ರಿಲ್ 29ರ ವರೆಗೆ ಎಂಟು ಹಂತಗಳಲ್ಲಿ ಮತದಾನ ನಡೆಯುತ್ತಿದೆ.

ಪಶಿಮ ಬಂಗಾಲದ ಮಟ್ಟಿಗೆ ಇದು ಮತ್ತೆ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವ ಮತ್ತು ಕೆಟ್ಟ ಆಳ್ವಿಕೆ ಮತ್ತು ಅರಾಜಕತೆಯ ವಿರುದ್ಧ ಹೋರಾಟವೂ ಆಗಿದೆ. ಟಿಎಂಸಿಯ ಒಂದು ದಶಕದ ಆಳ್ವಿಕೆಯಲ್ಲಿ ಸ್ವಜನ ಪಕ್ಷಪಾತ, ಸುಲಿಗೆ ಮತ್ತು ಸಿಂಡಿಕೇಟ್ ರಾಜ್ಯಭಾರ ಈ ಒಂದು ದಶಕದ ಆಳ್ವಿಕೆಯ ಅಭಿನ್ನ ಅಂಗವಾಗಿ ಬಿಟ್ಟಿದ್ದರೆ, ಕೇಂದ್ರದ ಬಿಜೆಪಿ ಸರಕಾರ ವಿಭಜನಕೋರತೆ ಮತ್ತು ಕಾರ್ಪೊರೇಟ್ ಲೂಟಿಯ ಧೋರಣೆಯನ್ನು ಅನುಸರಿಸುತ್ತಿದೆ. ಅದರ ರೈತ–ವಿರೋಧಿ, ಕಾರ್ಮಿಕ–ವಿರೋಧಿ ಧೋರಣೆಗಳು ಕೋಟ್ಯಂತರ ಜನಗಳ ಬದುಕುಗಳನ್ನು ಬಾಧಿಸುತ್ತಿವೆ.

ಇಂತಹ ಸನ್ನಿವೇಶದಲ್ಲಿ ರಾಜ್ಯದ ಜನಗಳ ಆಶೋತ್ತರಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಪ್ರಣಾಳಿಕೆಯನ್ನು ರೂಪಿಸಿರುವುದಾಗಿ ಎಡರಂಗ ಹೇಳಿದೆ.

ಇದನ್ನು ಅಂತಿಮ ಪಡಿಸುವ ಮೊದಲು ಕರಡು ಪ್ರಣಾಳಿಕೆಯೊಂದನ್ನು ಸಾರ್ವಜನಿಕ ಚರ್ಚೆಗೆ ಇಡಲಾಗಿತ್ತು. ಎಲ್ಲ ಕಡೆಗಳಿಂದಲೂ ಹಲವಾರು ಪ್ರಸ್ತಾವಗಳು, ಶಿಫಾರಸುಗಳು ಹರಿದು ಬಂದವು. ಅವುಗಳಲ್ಲಿ ಪ್ರಸ್ತುತವಾದವುಗಳನ್ನು ಪ್ರಣಾಳಿಕೆಯಲ್ಲಿ ಅಳವಡಿಸಲಾಯಿತು. ಈ ರೀತಿಯಲ್ಲಿ ಇದು ಒಂದು ಜನತೆಯ ಪ್ರಣಾಳಿಕೆಯೇ ಆಗಿಬಿಟ್ಟಿದೆ.

*** ಪ್ರಜಾಪ್ರಭುತ್ವ, ಜಾತ್ಯತೀತತೆ, ಶಾಂತಿ ಮತ್ತು ಸಾಮರಸ್ಯದ ಭರವಸೆ**

ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸುವ ಆಶ್ವಾಸನೆ ಈ ಪ್ರಣಾಳಿಕೆಯ ಬಹುಮಹತ್ವದ ಅಂಶ. ಪ್ರತಿಪಕ್ಷಗಳಿಗೆ ತಮ್ಮ ಅಭಿಪ್ರಾಯಗಳನ್ನು ಮುಂದಿಡುವ ಖಾತ್ರಿಯನ್ನು ಕೊಡಲಾಗುವುದು ಮತ್ತು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತತೆಯನ್ನು ಆಚರಣೆಗೆ ತರಲಾಗುವುದು ಮತ್ತು ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದ ನೆಲೆಸುವಂತೆ ಮಾಡಲಾಗುವುದು ಎಂದು ಪ್ರಣಾಳಿಕೆ ರಾಜ್ಯದ ಮತದಾರರಿಗೆ ಭರವಸೆ ಕೊಟ್ಟಿದೆ.

*** ಉದ್ಯೋಗಾವಕಾಶ ನಿರ್ಮಾಣಕ್ಕೆ ಆದ್ಯತೆಯನ್ನು ಕೊಡಲಾಗುವುದು.**

ಅಧಿಕಾರ ವಹಿಸಿಕೊಂಡ ಮೊದಲ ವರ್ಷದಲ್ಲೇ ಎಲ್ಲ ಸರಕಾರೀ, ಸರಕಾರಿ–ಅನುದಾನಿತ ಮತ್ತು ಸರಕಾರ–ಪ್ರಾಯೋಜಿತ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು. ಸರಕಾರಿ ಸಂಸ್ಥೆಗಳಲ್ಲಿನ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ನೇಮಕಾತಿಯನ್ನು ವ್ಯವಸ್ಥಿತವಾಗಿ ಮತ್ತು ಯೋಗ್ಯತೆಯ ಆಧಾರದಲ್ಲಿಯೇ ನಡೆಸಲಾಗುವುದು ಎಂದು ಪ್ರಣಾಳಿಕೆ ಹೇಳಿದೆ.

*** ದೊಡ್ಡ ಉದ್ದಿಮೆಗಳನ್ನು ನಿರ್ಮಿಸಲು ಪ್ರಯತ್ನಗಳನ್ನು ಮಾಡಲಾಗುವುದು.**

ಇವಕ್ಕೆ ಭೂಸ್ವಾಧೀನವನ್ನು ಸ್ಥಳೀಯರಲ್ಲಿ ಒಮ್ಮತವನ್ನು ರೂಪಿಸಿದ ನಂತರವೇ ಮಾಡಲಾಗುವುದು.

ಈ ನಡುವೆ ಅತಿ ಸಣ್ಣ, ಸಣ್ಣ ಉದ್ದಿಮೆಗಳನ್ನು ಸರಕಾರೀ ಹೂಡಿಕೆಗಳೊಂದಿಗೆ ಮತ್ತು ಉತ್ತೇಜನೆಯೊಂದಿಗೆ ಬಲಪಡಿಸಲಾಗುವುದು. ನಿರುದ್ಯೋಗಿ ಯುವಜನರಿಗೆ ಸ್ವಾವಲಂಬಿಯಾಗಲು ಪ್ರೋತ್ಸಾಹ ಒದಗಿಸಲಾಗುವುದು. ಸ್ವಾವಲಂಬನೆಯನ್ನು ಗಟ್ಟಿಗೊಳಿಸಲು ಯೋಜನೆಗಳನ್ನು ಆರಂಭಿಸಲಾಗುವುದು. ಕೃಷಿ, ಉದ್ದಿಮೆ ಮತ್ತು ಸೇವಾ ವಲಯದಲ್ಲಿ ಉದ್ಯೋಗವಕಾಶಗಳನ್ನು ನಿರ್ಮಿಸಲಾಗುವುದು. ಪಂಚಾಯತುಗಳು ಮತ್ತು ಮುನಿಸಿಪಾಲಿಟಿಗಳು ಕೂಡ ಉದ್ದಿಮೆಗಳನ್ನು ನಿರ್ಮಿಸುತ್ತವೆ.

*** ಸಾಗುವಳಿ ವೆಚ್ಚವನ್ನು ಇಳಿಸುವುದು ಮತ್ತು ಬೆಳೆಗಳಿಗೆ ಬೆಲೆಯನ್ನು ಹೆಚ್ಚಿಸುವುದು. ಸರಕಾರದ ಇನ್ನೊಂದು ಮಹತ್ವದ ಗುರಿ.**

ಬೇಸಾಯವನ್ನು ಲಾಭದಾಯಕಗೊಳಿಸಲು ಸರಕಾರ ರಸಗೊಬ್ಬರಗಳು ಮತ್ತು ನೀರಾವರಿಯನ್ನು

ಪುಟ 10 ನೋಡಿ

ಪಶ್ಚಿಮ ಬಂಗಾಳದ ಉದ್ಯೋಗ ಬಿಕ್ಕಟ್ಟು: ತೃಣಮೂಲದ ಒಂದು ದಶಕದ ಆಡಳಿತ


ಪ.ಬಂಗಾಳದಲ್ಲಿ ನಿರುದ್ಯೋಗದ ವಿರುದ್ಧ ಪ್ರತಿಭಟನೆ

ಪ. ಬಂಗಾಳ ರಾಜ್ಯದಲ್ಲಿ ಉದ್ಯೋಗವು ಸದ್ಯ ಮೂರು ಹಂತದ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಮೊದಲನೆಯದಾಗಿ ಎಲ್ಲಾ ವಲಯಗಳಲ್ಲಿ ನಿದ್ಯೋಗದ ಪ್ರಮಾಣ ಹೆಚ್ಚಿದೆ. ಆದರೆ ಶಿಕ್ಷಿತ ಜನ ವಿಭಾಗದ ಮಧ್ಯೆ ನಿದ್ಯೋಗದ ಪ್ರಮಾಣ ಬಹಳ ಹೆಚ್ಚಿದೆ. ಎರಡನೆಯದಾಗಿ ಸಾರ್ವಜನಕ ವಲಯದಲ್ಲಿ ಉದ್ಯೋಗ, ಅದರಲ್ಲೂ ಸಂಬಳ ಪಡೆಯುವ ನೌಕರರ ಪ್ರಮಾಣ, ಗಣನೀಯವಾಗಿ ಕಡಿಮೆಯಾಗಿದೆ. ಮೂರನೆಯದಾಗಿ, ಪ್ರಭುತ್ವವು ಹರಿಬಿಟ್ಟ ಹಿಂಸೆಯೂ ಒಳಗೊಂಡಂತೆ ಎಲ್ಲ ವಿಧದ ದಾಳಿಗಳನ್ನು ಯಾವುದೇ ವಿಧದ ಸಂಘಟಿತ ಹೋರಾಟದ ಮೇಲೆ ನಡೆಸುತ್ತಿರುವುದು, ದುಡಿಯುವ ವರ್ಗದ ಎಲ್ಲಾ ವಿಧದ ಉದ್ಯೋಗ ಭದ್ರತೆಯನ್ನು ಕೊನೆಗೊಳಿಸಲು ಮುಂದಾಗಿದೆ.

ಸೋಹಮ್ ಭಟ್ಟಾಚಾರ್ಯ, ಮಣಿಕಾಂತ ನಟರಾಜ್
ಅನು: ಶ್ರೀಂ.ಶಾ.ನಾ

ಕೋವಿಡ್–19 ಮಹಾಸೋಂಕು ಮತ್ತು ನಂತರ ಸರಣಿಯಲ್ಲಿ ಬಂದ ಆಗಾಗಿನ ಲಾಕ್‌ಡೌನ್‌ಗಳಲ್ಲಿ ಆದ ಜೀವ ಮತ್ತು ಜೀವನೋಪಾಯಗಳ ನಾಶ, ಪ. ಬಂಗಾಲ ರಾಜ್ಯದ ಆರ್ಥಿಕತೆಯಲ್ಲಿ ಅಡಕವಾಗಿದ್ದ ಬಿಕ್ಕಟ್ಟನ್ನು ಬಯಲಿಗೆಳೆದಿವೆ. ರಾಜ್ಯಕ್ಕೆ ಬೃಹತ್ ಸಂಖ್ಯೆಯಲ್ಲಿ ಮರಳಿ ಬಂದ ಬಡ ವಲಸೆ ಕಾರ್ಮಿಕರು ಅಧಿಕಾರಿಗಳಿಂದ ನೆರವು ಮತ್ತು ಸಹಾಯ ಕೇಳುತ್ತಿರುವುದು ದುರದೃಷ್ಟವಶಾತ್ ಇಂದಿನ ವಾಸ್ತವತೆಯಾಗಿದೆ. ಒಂದು ದಶಕದ ತೃಣಮೂಲ ಕಾಂಗ್ರೆಸ್ ನ ಆಡಳಿತವು ಪ. ಬಂಗಾಳದಲ್ಲಿ ದುಡಿಯುವ ಪರಿಸ್ಥಿತಿ ಮತ್ತು ದುಡಿಯುವ ಅವಕಾಶಗಳನ್ನು ಇನ್ನಷ್ಟು ಹದಗೆಡಿಸಿದೆ.

ಈ ಬಿಕ್ಕಟ್ಟಿನ ಪ್ರಮಾಣವನ್ನು ಅರ್ಥ ಮಾಡಿಕೊಳ್ಳಲು ನಾವು ಎನ್.ಎಸ್.ಎಸ್.ಓ ನ ಉದ್ಯೋಗ ಮತ್ತು ನಿರುದ್ಯೋಗ ಸರ್ವೆ 2011–12 ಮತ್ತು ಸಾಮೂಹಿಕ ಉದ್ಯೋಗಿಗಳ ಸರ್ವೆ 2018–19 ನಡುವಿನ ಉದ್ಯೋಗ ಮತ್ತು ನಿರುದ್ಯೋಗಗಳ ದತ್ತಾಂಶಗಳನ್ನು ಹೋಲಿಕೆ ಮಾಡಿದೆವು. ಈ ದತ್ತಾಂಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ, ಮುಖ್ಯವಾಗಿ ರಾಜ್ಯ ಸರ್ಕಾರದ ಹಠಮಾರಿಯಾದ ನಿಷ್ಕ್ರಿಯತೆಯ ನಲುವು ಮತ್ತು ದುಡಿಯುವ ವರ್ಗವನ್ನು ಹೆಚ್ಚು ಹೆಚ್ಚು ವ್ಯವಸ್ಥಿತವಾಗಿ ಅನೌಪಚಾರಿಕ ಕೆಲಸಗಳಿಗೆ ತಳ್ಳಿರುವುದು, ಈ ಉದ್ಯೋಗ ಬಿಕ್ಕಟ್ಟನ್ನು ಇನ್ನಷ್ಟು ಹದಗೆಡಿಸಿವೆ ಎಂಬುದು ಕಂಡುಬಂದಿದೆ.

ಪ. ಬಂಗಾಳ ರಾಜ್ಯದ ಉದ್ಯೋಗವು ಸದ್ಯ ಮೂರು ಹಂತದ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಮೊದಲನೆಯದಾಗಿ ಎಲ್ಲಾ ವಲಯಗಳಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಿದೆ. ಆದರೆ ಶಿಕ್ಷಿತ ಜನ ವಿಭಾಗದ ಮಧ್ಯೆ ನಿರುದ್ಯೋಗದ ಪ್ರಮಾಣ ಬಹಳ ಹೆಚ್ಚಿದೆ. ಎರಡನೆಯದಾಗಿ ಸಾರ್ವಜನಿಕ ವಲಯದಲ್ಲಿ ಉದ್ಯೋಗ, ಅದರಲ್ಲೂ ಸಂಬಳ ಪಡೆಯುವ ನೌಕರರ ಪ್ರಮಾಣ, ಗಣನೀಯವಾಗಿ ಕಡಿಮೆಯಾಗಿದೆ. ಮೂರನೆಯದಾಗಿ, ಪ್ರಭುತ್ವವು ಹರಿಬಿಟ್ಟ ಹಿಂಸೆಯೂ ಒಳಗೊಂಡಂತೆ ಎಲ್ಲ ವಿಧದ ದಾಳಿಗಳನ್ನು ಯಾವುದೇ ವಿಧದ ಸಂಘಟಿತ ಹೋರಾಟದ ಮೇಲೆ ನಡೆಸುತ್ತಿರುವುದು, ದುಡಿಯುವ ವರ್ಗದ ಎಲ್ಲಾ ವಿಧದ ಉದ್ಯೋಗ ಭದ್ರತೆಯನ್ನು ಕೊನೆಗೊಳಿಸಲು ಮುಂದಾಗಿದೆ. ಈ ಟಿಪ್ಪಣಿಯಲ್ಲಿ ಗಮನಸಿರುವ ಪ್ರಮುಖ ಆತಂಕವೆಂದರೆ, ಕಳೆದ ಒಂದು ದಶಕದಲ್ಲಿ ರಾಜ್ಯದ ದುಡಿಯಬಲ್ಲ ವಯಸ್ಸಿನ ಜನಸಂಖ್ಯೆ ಸುಮಾರು ಶೇ. 5 ರಷ್ಟು ಹೆಚ್ಚಳವಾಗಿದ್ದರೂ, ಇದಕ್ಕೆ ತಕ್ಕಂತೆ ಹೊಸ ಕೆಲಸಗಳು ಮಾತ್ರ ಸೃಷ್ಟಿಯಾಗಿಲ್ಲ ಎನ್ನುವುದು.

ನಿರುದ್ಯೋಗದ ಹೆಚ್ಚಳ: ಉದ್ಯೋಗಿಗಳಿಗೆ ಆಘಾತ

15 ರಿಂದ 59 ವಯಸ್ಸಿನ ಉದ್ಯೋಗಿಗಳ ನಡುವೆ ನರುದ್ಯೋಗದ ಪ್ರಮಾಣ ಶೇ.3 ರಷ್ಟು ಹೆಚ್ಚಿದೆ. ಅಂದರೆ, ಗ್ರಾಮೀಣ ಪ್ರದೇಶಗಳಲ್ಲಿ 8.3 ಲಕ್ಷ ಜನ ಮತ್ತು ನಗರ ಪ್ರದೇಶಗಳಲ್ಲಿ 6.5 ಲಕ್ಷ ಜನ ಉದ್ಯೋಗ ಹುಡುಕುತ್ತಿದ್ದಾರೆ. ಈ ವಿಭಾಗವು 2018–19 ರಲ್ಲಿ ಕನಿಷ್ಠ ಒಂದು ತಿಂಗಳ ಕೆಲಸವನ್ನು ಪಡೆದಿಲ್ಲ ಎನ್ನುವುದು ಗಮನಾರ್ಹ. ರಾಜ್ಯದಲ್ಲಿರುವ ಶಿಕ್ಷಿತ ಉದ್ಯೋಗಿಗಳನ್ನು ಗಣನೆಗೆ ತೆಗೆದುಕೊಂಡರೆ ನಿರುದ್ಯೋಗ ಪ್ರಮಾಣ ಹೆಚ್ಚೂ ಆಘಾತಕಾರಿಯಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಉನ್ನತ ಪ್ರೌಢ ಶಿಕ್ಷಣ ಮುಗಿಸಿರುವ ದುಡಿಯಬಲ್ಲ ವಯಸ್ಸಿನವರು ನೂರಕ್ಕೆ 12 ರಂತೆ ನಿರುದ್ಯೋಗಿಗಳಾಗಿದ್ದಾರೆ. ನಗರ ಪ್ರದೇಶದಲ್ಲಿ ಈ ಪ್ರಮಾಣ 100 ಕ್ಕೆ 10 ರಷ್ಟಿದೆ. 2011–12 ಮತ್ತು 2018–19 ರ ಅವಧಿಯಲ್ಲಿ 18 ರಿಂದ 30 ವಯಸ್ಸಿನ ಜನ ವಿಭಾಗಗಳ ನಡುವೆ ನಿರುದ್ಯೋಗ ಪ್ರಮಾಣವು ಶೇ. 10 ರಿಂದ ಶೇ. 13 ಕ್ಕೆ ಏರಿದೆ. ಮಹಿಳೆಯರ ಸ್ಥಿತಿಯಂತೂ ಬಹಳ ದುಸ್ತರವಾಗಿದೆ. ಕಳೆದೊಂದು ದಶಕದಲ್ಲಿ ಪ. ಬಂಗಾಳದ ಗ್ರಾಮೀಣ ಭಾಗದಲ್ಲಿ ಸುಮಾರು 9.3 ಲಕ್ಷ ಮಹಿಳೆಯರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. 2011 ರಿಂದಲೂ ಶಿಕ್ಷಣದಲ್ಲಿ ನಿರತರಾಗಿರುವ ದುಡಿಯಬಲ್ಲ ವಯಸ್ಸಿನ ಜನರ ಪ್ರಮಾಣ ಶೇ. 22 ಕ್ಕೆ ಸ್ಥಗಿತವಾಗಿರುವುದನ್ನು ಗಣನೆಗೆ ತೆಗೆದುಕೊಂಡಾಗ, ಈ ಉದ್ಯೋಗ ಕಡಿತವು ರಾಜ್ಯದಲ್ಲಿ ಉದ್ಯೋಗಾವಕಾಶಗಳ ತೀವ್ರ ಕೊರತೆ ಇದೆ ಎನ್ನುವುದನ್ನು ಪ್ರತಿಫಲಿಸುತ್ತಿದೆ.

ಸಾರ್ವಜನಿಕ ವಲಯ ಉದ್ಯೋಗದಲ್ಲಿ ವ್ಯವಸ್ಥಿತ ಇಳಿತ

ಪ. ಬಂಗಾಳ ರಾಜ್ಯದ ಕಳೆದೊಂದು ದಶಕದ ಉದ್ಯೋಗ ಪರಿಸ್ಥಿತಿಯಲ್ಲಿನ ಇನ್ನೊಂದು ಗುಣಲಕ್ಷಣವೆಂದರೆ ಸಂಬಳ ಪಡೆಯುತ್ತಿದ್ದ ಮತ್ತು ನಗದಿತ ಕೆಲಸ ಮಾಡುತ್ತಿದ್ದ ದುಡಿಯಬಲ್ಲ ವಯಸ್ಸಿನ ಜನಸಂಖ್ಯೆಯ ನಡುವೆ ಇದ್ದ ಸಾರ್ವಜನಿಕ ವಲಯ ಕೆಲಸಗಳಲ್ಲಿನ ಗಣನೀಯ ಇಳಿತ. 2011–12 ರಲ್ಲಿ ಸಾರ್ವಜನಕ ವಲಯ ಕೆಲಸಗಳಲ್ಲಿನ ಗಣನೀಯ ಇಳಿತ. 2011–12 ರಲ್ಲಿ ರಾಜ್ಯ ಉದ್ದಿಮೆಗಳಲ್ಲಿ ಸಂಬಳ ಹೊಂದಿದ್ದ ಉದ್ಯೋಗಗಳ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಶೇ. 37 ಮತ್ತು ನಗರ ಪ್ರದೇಶದಲ್ಲಿ ಶೇ. 31 ಇತ್ತು. ಆದರೆ 2018–19 ರ ಹೊತ್ತಿಗೆ ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣ ಶೇ.30 ಕ್ಕೆ ಇಳಿದಿದ್ದರೆ ನಗರ ಪ್ರದೇಶದಲ್ಲಿ ಶೇ.23 ಕ್ಕೆ ಇಳಿದಿದೆ. ಈ ಇಳಿತಕ್ಕೊಂದು ನಿದರ್ಶನವೆಂದರೆ, ರಾಜ್ಯ ಸರ್ಕಾರವು "ಸ್ಕೂಲ್ ಸರ್ವಿಸ್ ಕಮಿಶನ್ ಪರೀಕ್ಷೆ" ಗಳ ಮೂಲಕ ನಿಯಮಿತವಾಗಿ ಆಗುತ್ತಿದ್ದ ಉದ್ಯೋಗ ನೇಮಕಾತಿಗಳನ್ನು ನಿಲ್ಲಿಸಿರುವುದು. ಜೊತೆಗೆ ನೇಮಕಾತಿಯಲ್ಲಿ ಅವ್ಯವಹಾರ ಮತ್ತು ಭ್ರಷ್ಟಾಚಾರ ವ್ಯಾಪಕವಾಗಿ ಹೆಚ್ಚಾಯಿತು. ರಾಜ್ಯದ ಕೋಲ್ಕತ್ತ ಮತ್ತಿತರ ಪ್ರದೇಶದಲ್ಲಿ ಎದ್ದಿರುವ ಹೋರಾಟದ ಅಲೆಗಳು ಒಂದು ಸಮನಾದ, ನ್ಯಾಯಯುತವಾದ ಉದ್ಯೋಗ ಬೇಕೆನ್ನುವ ಬೇಡಿಕೆಯನ್ನು ಪ್ರತಿಫಲಿಸುತ್ತಿವೆ. ಉದ್ಯೋಗಾವಕಾಶಗಳು ಒಂದೆಡೆ ಕಡಿಮೆಯಾಗುತ್ತಿರುವುದು ಮತ್ತು ಇನ್ನೊಂದೆಡೆ ಉತ್ತಮ ಸಾರ್ವಜನಿಕ ಕ್ಷೇತ್ರದ ಉದ್ಯೋಗಗಳ ಪ್ರಮಾಣ ಕಡಿಮೆಯಾಗುತ್ತಿರುವುದು, ಕಳೆದ ಒಂದು ದಶಕದಲ್ಲಿ ರಾಜ್ಯ ಸರ್ಕಾರದ ಆಡಳಿತ ವೈಖರಿಯ ಗುಣಲಕ್ಷಣಗಳನ್ನು ಎತ್ತಿ ತೋರಿಸುತ್ತಿದೆ.

ಪುಟ 10 ನೋಡಿ

ಬಿಜೆಪಿಯನ್ನು ತಡೆಗಟ್ಟಲಿಕ್ಕಾಗಿ ತೃಣಮೂಲ ಕಾಂಗ್ರೆಸನ್ನು ಸೋಲಿಸಲು ನಮಗೆ ಸಹಾಯ ಮಾಡಿ"

ಪಶ್ಚಿಮ ಬಂಗಾಲದ ಮತದಾರರಿಗೆ ಸಂಯುಕ್ತ ಮೋರ್ಚಾದ ಮನವಿ

ಪಶ್ಚಿಮ ಬಂಗಾಲದ ವಿಧಾನಸಭೆಯ ಚುನಾವಣೆಗಳಲ್ಲಿ ಎಡರಂಗ, ಕಾಂಗ್ರೆಸ್ ಮತ್ತು ಇಂಡಿಯನ್ ಸೆಕ್ಯುಲರ್ ಫ್ರಂಟ್(ಐಎಸ್‌ಎಫ್) ನ ಸಂಯುಕ್ತ ಮೋರ್ಚಾ ಮೈತ್ರಿಕೂಟ ಮಾರ್ಚ್ 24ರಂದು ಈ ಚುನಾವಣೆಗೆ ಒಂದು ಜಂಟಿ ಮನವಿ ಪ್ರಕಟಿಸಿದ್ದು, ಅದರಲ್ಲಿ ಮುಂಬರುವ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸನ್ನು ಸೋಲಿಸಿ ಬಿಜೆಪಿಯನ್ನು ತಡೆದು ನಿಲ್ಲಿಸಲು ತಮಗೆ ಸಹಾಯ ಮಾಡಬೇಕು ಎಂದು ಮತದಾರರಿಗೆ ಮನವಿ ಮಾಡಿಕೊಂಡಿದೆ.

ಸಿಪಿಐ(ಎಂ) ರಾಜ್ಯ ಸಮಿತಿಯ ಕಚೇರಿಯಲ್ಲಿ ಸಂಯುಕ್ತ ಮೋರ್ಚಾದ ಎಲ್ಲ ಪಕ್ಷಗಳ ಮುಖಂಡರೊಂದಿಗೆ ಎಡರಂಗದ ಅಧ್ಯಕ್ಷ ಬಿಮನ್ ಬಸು ಈ ಮನವಿಯನ್ನು ಮತದಾರರ ಮುಂದಿಡುತ್ತ "ನಾನು ಸಂಯುಕ್ತ ಮೋರ್ಚಾದ ಪರವಾಗಿ ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ನಮ್ಮ ಹೋರಾಟದ ಬಗ್ಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕಾರ್ಮಿಕ ಕಾನೂನುಗಳನ್ನು ಕಾರ್ಪೊರೇಟ್ ಹಿತಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ ಎಂದು ನಾವು ಹೇಳುತ್ತೇವೆ. ದೊಡ್ಡ ಬಂಡವಳಿಗರು ಬೆಳೆಯುತ್ತಿದ್ದಾರೆ. ಕೊರೊನ ವೈರಸ್ ಮಹಾಸೋಂಕಿನ ಅವಧಿಯಲ್ಲಿ 2 ಕೋಟಿ ಮಂದಿ ಕೆಲಸ ಕಳಕೊಂಡಿದ್ದಾರೆ. ಬಿಜೆಪಿ ದೇಶದ ಜಾತ್ಯತೀತತೆಗೆ ದೊಡ್ಡ ಆಘಾತ ಕೊಟ್ಟಿದೆ. ಶಿಕ್ಷಣ, ಕಲೆ ಮತ್ತು ಸಾಹಿತ್ಯದ ಎಲ್ಲ ಆಯಾಮಗಳಲ್ಲಿ ಕೋಮುವಾದಿ ನಿಲುವುಗಳು ಕಾಣಿಸಿಕೊಳ್ಳುತ್ತಿವೆ. ರಾಜ್ಯದ ಖರ್ಚು ಆದಾಯಕ್ಕಿಂತ ಹೆಚ್ಚಿದೆ. ಸರಕಾರೀ ಕೆಲಸಗಳಿಗೆ ನೇಮಕಾತಿಗಳಿಲ್ಲ. ಗದರಿಸುವುದು ಸರಕಾರದ ಒಂದು ಸಾಧನವಾಗಿ ಬಿಟ್ಟಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಟಿಎಂಸಿಯನ್ನು ಸೋಲಿಸಿ ಬಿಜೆಪಿಯನ್ನು ತಡೆದು ನಿಲ್ಲಿಸಬೇಕಾಗಿದೆ" ಎಂದು ಹೇಳಿದರು.

ಐಎಸ್‌ಎಫ್‌ನ್ನು ಸಮರ್ಥಿಸಿಕೊಳ್ಳುತ್ತ ಅವರು "ಇಂಡಿಯನ್ ಸೆಕ್ಯುಲರ್ ಫ್ರಂಟ್ ಒಂದು ಕೋಮುವಾದಿ ಪಕ್ಷ ಅಲ್ಲ. ಎಲ್ಲ ಹಿಂದುಳಿದ ಸಮುದಾಯಗಳ ಜನರು ಇಂಡಿಯನ್ ಸೆಕ್ಯುಲರ್ ಫ್ರಂಟಿನ ಭಾಗವಾಗಿದ್ದಾರೆ" ಎಂದರು.

ಬಿಜೆಪಿ "ಡಬಲ್ ಇಂಜಿನ್ ಸರಕಾರ"ಗಳ ಪ್ರಯೋಜನಗಳ ಬಗ್ಗೆ ಹೇಳುತ್ತದೆ. ಆದರೆ ತ್ರಿಪುರಾದಲ್ಲಿ ಒಂದು ಡಬಲ್ ಇಂಜಿನ್ ಸರಕಾರವಿದೆ. ಅಲ್ಲಿ 10,000 ಶಿಕ್ಷಕರು ತಮ್ಮ ಉದ್ಯೋಗ ಕಳಕೊಂಡಿದ್ದಾರೆ. ಅಸ್ಸಾಂ, ಉತ್ತರಪ್ರದೇಶ, ಹರ್ಯಾಣದಲ್ಲಿಯೂ ಡಬಲ್ ಇಂಜಿನ್ ಸರಕಾರಗಳಿವೆ. ಅಲ್ಲಿಯ ಜನಗಳು ಒಳ್ಳೆಯ ಸ್ಥಿತಿಯಲ್ಲೇನಾದರೂ ಇದ್ದಾರೆಯೇ ಎಂದು ಸಂಯುಕ್ತ ಮೋರ್ಚಾದ ಮನವಿ ಪ್ರಶ್ನಿಸಿದೆ.







ಜನತಾ ಪ್ರಣಾಳಿಕೆಯಾದ ಎಡರಂಗದ ಚುನಾವಣಾ ಪ್ರಣಾಳಿಕೆ

ಪುಟ 8 ರಿಂದ

ಒದಗಿಸುತ್ತದೆ. ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಹಕಾರಿಗಳನ್ನು ಪುನರುಜ್ಜೀವನಗೊಳಿಸಲಾಗುವುದು.

ರೈತರಿಗೆ ಬೆಳೆಗಳ ಉತ್ಪಾದನೆಯ ವೆಚ್ಚದ ಒಂದೂವರೆ ಪಟ್ಟು ಬೆಲೆಗಳ ಖಾತ್ರಿಕೊಡಲಾಗುವುದು ಮತ್ತು ಸರಕಾರವೇ ಬೆಳೆಗಳನ್ನು ಅಗತ್ಯವಿದ್ದಾಗ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಂದ ಬೆಳೆಗಳನ್ನು ಖರೀದಿಸುತ್ತದೆ. ಆಲೂಗಡ್ಡೆಯಂತಹ ಹೊಸ ಬೆಳೆಗಳನ್ನು ಕೂಡ ಎಂಎಸ್‌ಪಿ ಅಡಿಯಲ್ಲಿ ತರಲಾಗುವುದು.

*** ಟಿಎಂಸಿ ಸರಕಾರ ತಂದಿರುವ ಎಪಿಎಂಸಿ ಕಾಯ್ದೆಯನ್ನು ರದ್ದು ಮಾಡಲಾಗುವುದು. ಬಿಜೆಪಿ ಕೇಂದ್ರ ಸರಕಾರ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸುವುದಿಲ್ಲ.**

ಭೂಸುಧಾರಣೆಗಳ ಮೂಲಕ ಜಮೀನು ಪಡೆದು ಕಳೆದ 10 ವರ್ಷಗಳಲ್ಲಿ ' ಒಕ್ಕಲೆಬ್ಬಿಸಲ್ಪಟ್ಟ ಎಲ್ಲರಿಗೂ ಅವರ ಜಮೀನನ್ನು ಕೊಡಲಾಗುವುದು. ಮನರೇಗದ ಅಡಿಯಲ್ಲಿ ಕೆಲಸದ ದಿನಗಳನ್ನು 100ರಿಂದ 150ಕ್ಕೆ ಏರಿಸಲಾಗುವುದು. ಈ ಸ್ಕೀಮನ್ನು ನಗರಗಳಿಗೂ ವಿಸ್ತರಿಸಲಾಗುವುದು.

*** ಮೂರು ಮಜಲುಗಳ ಪಂಚಾಯತು ವ್ಯವಸ್ಥೆಯನ್ನು ಬಲಪಡಿಸಲಾಗುವುದು** ಮತ್ತು ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸಲಾಗುವುದು. ಗ್ರಾಮಸ್ತರ, ಅದರಲ್ಲೂ ಬಡಜನಗಳ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಲಾಗುವುದು.

*** ಕಾಮಿಕರಿಗೆ ರೂ.21,000 ಕನಿಷ್ಟ ಕೂಲಿ ನಿಗದಿ.** ವಲಸೆ ಕಾರ್ಮಿಕರಿಗೆ ಪ್ರತ್ಯೇಕ ಇಲಾಖೆಯನ್ನು ಆರಂಭಿಸಲಾಗುವುದು. ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರಿಗೆ ರೂ.2500 ಮಾಸಿಕ ಭತ್ಯೆ ಮತ್ತು ಸಬ್ಸಿಡಿ ದರಗಳಲ್ಲಿ ರೇಷನ್ ಒದಗಿಸುವುದು. ಮುಚ್ಚಿದ ಸಣಬು ಮಿಲ್ಲುಗಳು, ಚಹಾ ತೋಟಗಳು ಮತ್ತು ಇತರ ಕಾಖಾನೆಗಳ ಕಾರ್ಮಿಕರಿಗೆ ಇದರಿಂದ ಪ್ರಯೋಜನ ಸಿಗುತ್ತದೆ.

ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತಾ ಸ್ಕೀಂಗಳನ್ನು ಆಮೂಲಾಗ್ರವಾಗಿ ಸುಧಾರಿಸಿ ವಿಸ್ತರಿಸಲಾಗುವುದು.

ಆಶಾ, ಐಸಿಡಿಎಸ್, ಮಧ್ಯಾಹ್ನದ ಊಟ ಮತ್ತಿತರ ಪರಿಯೋಜನೆಗಳ ಕಾರ್ಮಿಕರಿಗೆ ಗೌರವಯುತ ಭತ್ಯ ಮತ್ತು ಕೆಲಸದ ಭದ್ರತೆ ಖಾತ್ರಿಪಡಿಸಲಾಗುವುದು.

ಸರಕಾರೀ ಪ್ರಾಜೆಕ್ಟ್ ಗಳಲ್ಲಿನ ತಾತ್ಕಾಲಿಕ ಕಾರ್ಮಿಕರನ್ನು ಒಂದು ನಿರ್ದಿಷ್ಟ ವೇತನ ಶ್ರೇಣಿ ಮತ್ತು ಸಾಮಾಜಿಕ ಭದ್ರತಾ ಸ್ಕೀಂ ಗಳ ಅಡಿಯಲ್ಲಿ ತರಲಾಗುವುದು.

*** ಆಹಾರ ಭದ್ರತೆ ಮತ್ತು ಒಂದು ಗಟ್ಟಿ ಸಾರ್ವಜನಿಕ ವ್ಯವಸ್ಥೆಯನ್ನು ಒದಗಿಸುವ ಪ್ರಸ್ತಾವವನ್ನು ಪ್ರಣಾಳಿಕೆ ಇಟ್ಟಿದೆ.** ಸೌಲಭ್ಯ ವಂಚಿತರಿಗೆ ಪ್ರತಿ ತಿಂಗಳು ಕೆ.ಜಿಗೆ 2ರೂ.ನಂತೆ 35 ಕೆಜಿ ಅಕ್ಕಿ ಅಥವ ಗೋದಿ ಒದಗಿಸಲಾಗುವುದು. ಅಗತ್ಯ ಸರಕುಗಳನ್ನು ಮಾರುಕಟ್ಟೆ ಬೆಲೆಗಳಿಗಿಂತ ಅಗ್ಗ ದರಗಳಲ್ಲಿ ಒದಗಿಸಲಾಗುವುದು.

*** ಆರೋಗ್ಯವಲಯದ ಆಮೂಲಾಗ್ರ ಸುಧಾರಣೆ ಸಂಯುಕ್ತ ಮೋರ್ಚಾ ಸರಕಾರದ ಇನ್ನೊಂದು ಪ್ರಮುಖ ಕೆಲಸವಾಗಿರುತ್ತದೆ ಎಂದು ಪ್ರಣಾಳಿಕೆ ಹೇಳಿದೆ.**

ಸಾರ್ವಜನಿಕ ಆರೋಗ್ಯ ಸರಕಾರದ ಹೊಣೆ. ಸರಕಾರೀ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಎಲ್ಲ ಸೇವೆಗಳು ಉಚಿತವಾಗಿರುತ್ತವೆ. ರೋಗತಡೆಗೆ ಮಹತ್ವ ನೀಡಲಾಗುವುದು. ಔಷಧಿಗಳ ಬೆಲೆಗಳನ್ನು ನಿಯಂತ್ರಣದಲ್ಲಿ ಇಡಲಾಗುವುದು.

*** ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ಬಡಜನರನ್ನು ಗಮನದಲ್ಲಿ ಇಟ್ಟುಕೊಂಡು ಅವರಿಗೆ ಭಾರೀ ಸಬ್ಸಿಡಿ ದರಗಳಲ್ಲಿ ವಿದ್ಯುತ್ ಒದಗಿಸಲಾಗುವುದು.**

*** ಶಿಕ್ಷಣಕ್ಕೆ ಒಟ್ಟು ಬಜೆಟಿನ 20ಶೇ. ಒದಗಿಸಲಾಗುವುದು ಎಂದು ಹೇಳುತ್ತ ಪ್ರಣಾಳಿಕೆ ಶಿಕ್ಷಣಕ್ಕೆ ಕೊಡುವ ಮಹತ್ವನ್ನು ಸಾಕಷ್ಟು ಸ್ಪಷ್ಟಗೊಳಿಸಿದೆ.** ನಿರಕ್ಷರತೆಯ ನಿರ್ಮೂಲನೆ, ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ, ಖಾಸಗೀಕರಣ, ಕಾರ್ಪೊರೇಟೀಕರಣ ಮತ್ತು ಕೇಸರೀಕರಣಕ್ಕೆ ಪ್ರತಿರೋಧಕ್ಕೆ ಅತಿ ಹೆಚ್ಚಿನ ಮಹತ್ವ ಕೊಡಲಾಗುತ್ತದೆ.

ಪ್ರವೇಶ ಪ್ರಕ್ರಿಯೆಯನ್ನು ನಿಯಮಿತ ಗೊಳಿಸಲಾಗುವುದು ಮತ್ತು ಪಾರದರ್ಶಕ ಗೊಳಿಸಲಾಗುವುದು. ಉದ್ಯೋಗೋನ್ಮುಖ ತರಬೇತಿ ಒದಗಿಸಲಾಗುವುದು; ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಮಹತ್ವ.

ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳನ್ನು ನಿಯಮಾನುಸಾರ ತುಂಬಲಾಗುವುದು. ಪ್ರಜಾಪ್ರಭುತ್ವ ಪ್ರಕ್ರಿಯೆಗಳಿಗೆ ಅನುಸಾರವಾಗಿ ವಿದ್ಯಾರ್ಥಿ ಸಂಘಗಳಿಗೆ ನಿಯಮಿತ ಚುನಾವಣೆಗಳನ್ನು ನಡೆಸಲಾಗುವುದು.

ಸಂಸ್ಕೃತಿ, ಸೃಜನಶೀಲತೆ, ನವೀಕರಣ ಮತ್ತು ಶೋಧನೆಗೆ ಪ್ರೋತ್ಸಾಹ ಮತ್ತು ಪೋಷಣೆಗೆ ಮುತುವರ್ಜಿ ವಹಿಸಲಾಗುವುದು ಎಂದೂ ಪ್ರಣಾಳಿಕೆ ಹೇಳಿದೆ. ಕ್ರೀಡೆಗಳಿಗೂ ಪ್ರೋತ್ಸಾಹವಿರುತ್ತದೆ.

*** ರಾಜ್ಯ ಹಣಕಾಸು ಆಯೋಗವನ್ನು ಪುನರುಜ್ಜೀವನ ಗೊಳಿಸಲಾಗುವುದು.**

ವಿಕೇಂದ್ರೀಕರಣ ಮತ್ತು ರಾಜ್ಯಸರಕಾರದ ಸ್ವಂತ ಬ್ಯಾಂಕೊಂದರ ರಚನೆ ಮತ್ತು ಇತರ ಪರಿಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗವುದು ಎಂದು ಪ್ರಣಾಳಿಕೆ ಹೇಳಿದೆ. ಸಹಕಾರಿಗಳ ವಿಸ್ತರಣೆ, ಸಹಕಾರಿ ಉತ್ಪನ್ನಗಳ ಆನ್‌ಲೈನ್ ಮಾರಾಟಕ್ಕೆ ವ್ಯವಸ್ಥೆ , ಸ್ವಸಹಾಯ ಗುಂಪುಗಳ ರಚನೆ ಪ್ರಣಾಳಿಕೆ ಮ್ಮುಂದಿಟ್ಟಿರುವ ಮುನ್ನಡೆಯ ಇತರ ದಾರಿಗಳು.

* ಸಮಾನ ಕೆಲಸಕ್ಕೆ ಸಮಾನ ವೇತನ, ಕೌಟುಂಬಿಕ ಹಿಂಸಾಚಾರ ಸಂತ್ರಸ್ತರಿಗೆ ನೆರವು ಕೇಂದ್ರಗಳು, ತೃತೀಯಲಿಂಗಿ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡ ಧೋರಣೆಗಳು, ವಿಕಲಚೇತನರಿಗೆ ಆರ್‌ಪಿಡಿ ಕಾಯ್ದೆಯ ಅನುಷ್ಠಾನ ಮತ್ತು ವೃತ್ತಿ ತರಬೇತಿ ಮತ್ತು ಮಾಸಿಕ ಭತ್ಯೆಯನ್ನು 1000ರೂ. ನಿಂದ 2000ರೂ.ಗೆ ಏರಿಸುವುದು ಪ್ರಣಾಳಿಕೆಯಲ್ಲಿರುವ ಇತರ ಆಶ್ವಾಸನೆಗಳು.

ಪಶ್ಚಿಮ ಬಂಗಾಳದ ಉದ್ಯೋಗ ಬಿಕ್ಕಟ್ಟು

ಪುಟ 9 ರಿಂದ

ನಿಯಮಿತ ಉದ್ಯೋಗದಲ್ಲಿ ಉದ್ಯೋಗ ಭದ್ರತೆಯ ತೀವ್ರ ಬಿಕ್ಕಟ್ಟು

ಭಾರತದಲ್ಲಿ ಉದ್ಯೋಗದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟು ಒಂದಕ್ಕೊಂದು ಪೂರಕವಾಗಿರುವ ಎರಡು ಗುಣಲಕ್ಷಣಗಳನ್ನು ಹೊಂದಿದೆ. ಒಂದೆಡೆ ಉದ್ಯೋಗಾವಕಾಶಗಳಲ್ಲಿ ಸ್ಪಷ್ಟ ಇಳಿತವಾಗುತ್ತಿದ್ದರೆ, ಇದಕ್ಕೆ ಜೊತೆಯಾಗಿ ಉದ್ಯೋಗದ ಪರಿಸ್ಥಿತಿಗಳು ಹೆಚ್ಚೆಚ್ಚು ಅನೌಪಚಾರಿಕ (ಅಂದರೆ ಯಾವುದೇ ಹಕ್ಕು /ಸವಲತ್ತು/ಭದ್ರತೆಗಳಿಲ್ಲದವು) ಆಗುತ್ತಿವೆ. ಲಾಕ್‌ಡೌನ್ ಅವಧಿಯಲ್ಲಿ ಹಲವು ಬಿಜೆಪಿ ಆಡಳಿತಾರೂಢ ರಾಜ್ಯಗಳು, ಕಾರ್ಮಿಕರು ಹಲವು ಸಮರಧೀರ ಹೋರಾಟಗಳ ಮೂಲಕ ಗಳಿಸಿಕೊಂಡಿದ್ದ ಮತ್ತು ಕಿಂಚಿತ್ತಾದ್ದರೂ ಕಾರ್ಮಿಕರಿಗೆ ತಮ್ಮನ್ನು ರಕ್ಷಿಸಿಕೊಳ್ಳಲು ನೆರವಾಗುತ್ತಿದ್ದ ಹಕ್ಕುಗಳಿಂದ ವಂಚಿತರನ್ನಾಗಿಸಲು, ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸಿವೆ. ಪ.ಬಂಗಾಳದಲ್ಲಿ ಹಿಂಸೆಯ ಮೂಲಕ ಮತ್ತು ಪ್ರಭುತ್ವದ ನಿರಂತರ ಬೆದರಿಕೆಯ ಮೂಲಕ ಒಂದು ಬಲವಾದ ಕಾರ್ಮಿಕ ಸಂಘಟನಾ ಚಳುವಳಿಯನ್ನು ನಾಶಗೊಳಿಸಿರುವುದರಿಂದಾಗಿ, ಅಂತಿಮವಾಗಿ ಸಂಬಳ ಪಡೆಯುವ ಉದ್ಯೋಗಗಳೂ ಒಳಗೊಂಡಂತೆ ಎಲ್ಲೆಡೆ ಉದ್ಯೋಗ ಭದ್ರತೆಯ ಅಭಾವದ ಬಿಕ್ಕಟ್ಟಿನೆಡೆ ಸಾಗಿದೆ. ಅಸಂಘಟಿತ ಕ್ಷೇತ್ರದ ಉದ್ದಿಮೆಗಳ ರಾಷ್ಟ್ರೀಯ ಆಯೋಗ (ಎನ್.ಸಿ.ಇ.ಯು.ಎಸ್) ವು ಒಂದು ಸಂಘಟಿತ/ಔಪಚಾರಿಕ ಉದ್ಯೋಗವನ್ನು ಗುರುತಿಸಲು ಮೂರು ಮಾನದಂಡಗಳನ್ನು ನಗದಿಪಡಿಸಿದೆ; ಲಿಖಿತ ಕೆಲಸದ ಒಪ್ಪಂದ, ವೇತನ ಸಹಿತ ರಜೆಯ ಸೌಲಭ್ಯ ಹಾಗೂ ನಯಮಿತ ಪಾವತಿಯ ವಿಧಾನ, ಮತ್ತು ಕನಷ್ಟ ಒಂದು ಸಾಮಾಜಿಕ ಸುರಕ್ಷಾ ಯೋಜನೆಯ (ಪಿಎಫ್, ಗ್ರಾಚ್ಯುಯಿಟಿ, ಇತ್ಯಾದಿ) ಲಭ್ಯತೆ. ಪ. ಬಂಗಾಳದಲ್ಲಿ ಈ ಮಾನದಂಡಗಳನ್ನು ಇಟ್ಟುಕೊಂಡು ನೋಡಿದಾಗ ನಿಯಮಿತ ಸಂಬಳದ ಉದ್ಯೋಗಗಳಲ್ಲಿ ನಗರ ಪ್ರದೇಶದಲ್ಲಿ 2/3 ಪ್ರಮಾಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸರಿಸುಮಾರು 3/4 ಪ್ರಮಾಣದ ಉದ್ಯೋಗಗಳು ಅನೌಪಚಾರಿಕ ಸ್ವರೂಪ ಹೊಂದಿವೆ.

ಆರ್ಥಿಕ ಚಟುವಟಿಕೆಗಳಲ್ಲಿ ಏರುಪೇರು ತಂದಿರುವ ಕೋವಿಡ್ ಮಹಾಸೋಂಕಿನ ಸಂದರ್ಭದಲ್ಲಿ ಅತ್ಯಂತ ಸುರಕ್ಷಿತವಾಗಿರುವ ಉದ್ಯೋಗವೂ ಸಹ ಗಂಡಾಂತರ ಎದುರಿಸುತ್ತಿದೆ. ಅನೌಪಚಾರಿಕವಾಗಿ ಉದ್ಯೋಗಗಳಲ್ಲಿರುವವರ ಪರಿಸ್ಥಿತಿಯಂತೂ ಇನ್ನಷ್ಟು ಹದಗೆಟ್ಟಿದೆ. ರಾಜ್ಯ ಸರ್ಕಾರವು ಮೂಕ ಪ್ರೇಕ್ಷಕನಾಗಿ ನಡೆದುಕೊಳ್ಳುವ ಮೂಲಕ ಉದ್ಯೋಗಗಳು ಅನೌಪಚಾರಿಕವಾಗುತ್ತಿರುವ ಪ್ರಕ್ರಿಯೆಯನ್ನು ಪೋಷಿಸುತ್ತಿರುವುದು ಮತ್ತು ಬೆಂಬಲಿಸುತ್ತಿರುವುದು ಸ್ಪಷ್ಟವಾಗಿದೆ.


ತೃಣಮೂಲದ 'ಕಲ್ಯಾಣರಾಜ್ಯ'ದ ಮುಸುಕು ಹರಿದಿದೆ

ಬಹುತೇಕ ಧನದಾಹಿ ಮಾಧ್ಯಮಗಳು ಪ. ಬಂಗಾಳ ರಾಜ್ಯದ ಜನತೆಗೆ ಸಂಬಂಧಪಡದ ಕ್ಷುಲ್ಲಕ ವಿಚಾರಗಳಿಗೆ, ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ನಡೆಸುತ್ತಿರುವ ಜಗಳಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿವೆ. ನರುದ್ಯೋಗದ ಸಮಸ್ಯೆ ಕುರಿತಂತೆ ಈ ಎರಡೂ ಪಕ್ಷಗಳು ತಳೆದಿರುವ ಮೌನವು ಇವುಗಳ ಜನ ವಿರೋಧಿ ನೀತಿಗಳನ್ನೂ ಪ್ರತಿಫಲಿಸುತ್ತಿದೆ. ತೃಣಮೂಲ ಕಾಂಗ್ರೆಸ್ ನ ನಡುವಳಿಕೆಯು ಆರ್ಥಿಕ ನೀತಿಗಳ ವಿಷಯದಲ್ಲಿ ಈ ಪಕ್ಷವು ಕೇಂದ್ರದ ನರೇಂದ್ರ ಮೋದಿ ಆಡಳಿತಕ್ಕಿಂತ ಭಿನ್ನವಲ್ಲ ಎಂಬುದನ್ನು ಪ್ರತಿಫಲಿಸುತ್ತಿದೆ. ಜೀವನೋಪಾಯ ಒದಗಿಸಲು ಮತ್ತು ಉತ್ತಮ ಹಾಗೂ ಭದ್ರತೆಯಿರುವ ಉದ್ಯೋಗದ ಹಕ್ಕುಗಳನ್ನು, ಅದರಲ್ಲೂ ಈ ಮಹಾಸೋಂಕಿನ ಸಂದರ್ಭದಲ್ಲೂ ನಿರಾಕರಿಸುತ್ತಿರುವುದು ಮಮತಾ ಬ್ಯಾನರ್ಜಿಯ ಸ್ವಘೋಷಿತ ಕಲ್ಯಾಣರಾಜ್ಯದ ಮುಸುಕನ್ನು ಹರಿದು ಹಾಕಿದೆ.

ಎನ್.ಆರ್.ಬಿ. (ನೇಶನಲ್ ಬೇರೋಜಗಾರಿ ರಿಜಿಸ್ಟರ್) ಮತ್ತು ಬಿ.ಎ.ಎ (ಬೇರೋಜಗಾರಿ ಅಬೊಲಿಶನ್ ಆಕ್ಟ್) ತರಲು ಡಿ.ವೈ.ಎಫ್.ಐ ಚಳುವಳಿ



ದ್ವಿತೀಯ ಮಹಾಯುದ್ಧದ ಸಮಯ 1939-45: ಕಾರ್ಮಿಕ ವರ್ಗದ ಹೋರಾಟಗಳ ವಿಖ್ಯಾತ ಹಾದಿ



ದ್ವಿತೀಯ ಮಹಾಯುದ್ಧ ಕಾಲದಲ್ಲಿ, ಭಾರತದಲ್ಲಿ ಅತ್ಯಂತ ದೊಡ್ಡ ಶ್ರಮಜೀವಿ ಕಾರ್ಯಕ್ರಮವೆಂದರೆ ಯುದ್ಧ ವಿರೋಧಿ ಮುಷ್ಕರ, ಇದು ಮುಂಬೈಯಲ್ಲಿ 2 ಅಕ್ಟೋಬರ್ 1939 ರಂದು ಆಯೋಜಿಸಲ್ಪಟ್ಟಿತು ಮತ್ತು 90,000 ಕಾರ್ಮಿಕರು ಭಾಗವಹಿಸಿದರು. ಮುಂಬೈ ಕಾರ್ಮಿಕರ ಈ ಮುಷ್ಕರವು ವಿಶ್ವ ಕಾರ್ಮಿಕ ವರ್ಗದ ಚಳವಳಿಯ ಮೊದಲ ಯುದ್ಧ–ವಿರೋಧಿ ಮುಷ್ಕರವೆಂದು ವಿಶೇಷ ಮಹತ್ವದ್ದಾಗಿದೆ.
ಈ ಘಟನೆಯು ಇತರ ಹೋರಾಟಗಳೊಂದಿಗೆ, ಈ ಅವಧಿಯಲ್ಲಿ ಭಾರತದ ಕಾರ್ಮಿಕ ವರ್ಗದ ದೃಷ್ಟಿಕೋನವು ಆರ್ಥಿಕ ಬೇಡಿಕೆಗಳ ನಾಲ್ಕು ಗೋಡೆಗಳೊಳಗೆ ಮಾತ್ರ ಸೀಮಿತವಾಗಿ ಇರಲಿಲ್ಲವೆಂದು ಸೂಚಿಸುತ್ತದೆ. ಕಾರ್ಮಿಕ ವರ್ಗವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳೊಂದಿಗೆ ಸಂಪೂರ್ಣವಾಗಿ ಸಮವೇಗದಿಂದ ಸಾಗಿತು, ಮತ್ತು ರಾಜಕೀಯ ಹೋರಾಟಗಳಲ್ಲಿ ಸಕ್ರಿಯ ಪಾತ್ರ ವಹಿಸಿತು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ

ಸೆಪ್ಟೆಂಬರ್ 3, 1939 ರಂದು ಎರಡನೇ ವಿಶ್ವ–ಯುದ್ಧ ಪ್ರಾರಂಭವಾದ ಕೆಲವೇ ಗಂಟೆಗಳಲ್ಲಿ ಭಾರತದ ವೈಸ್‌ರಾಯ್ ಭಾರತದ ಜನರೊಂದಿಗೆ ಸಮಾಲೋಚಿಸದೆ ಭಾರತವನ್ನು ಯುದ್ಧದಲ್ಲಿ ಪಾಲುದಾರ ರಾಷ್ಟ್ರವೆಂದು ಘೋಷಿಸಿದರು. ಭಾರತವನ್ನು ಯುದ್ಧ–ಮಗ್ನವೆಂದು ಘೋಷಿಸುವಾಗ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಏಕಕಾಲದಲ್ಲಿ ಚುನಾಯಿತ ರಾಷ್ಟ್ರೀಯ ಸಂವಿಧಾನ ಸಭೆ ಆಯೋಜಿಸಬೇಕೆಂಬ ಭಾರತದ ಜನರ ಬೇಡಿಕೆಯನ್ನು ತಿರಸ್ಕರಿಸಿದರು ಮತ್ತು 'ಡಿಫೆನ್ಸ್ ಆಫ್ ಇಂಡಿಯಾ' ಸುಗ್ರೀವಾಜ್ಞೆಯನ್ನು ಘೋಷಿಸಿ ಭಾರತ ಸರ್ಕಾರಕ್ಕೆ ಶಾಸನಗಳ ಮೂಲಕ ಆಡಳಿತ ನಡೆಸಲು ಅನುವು ಮಾಡಿಕೊಟ್ಟರು,


ಆದರೆ ಅಷ್ಟರಲ್ಲಿ, ಪೋಲೆಂಡ್. ಬೆಲ್ಜಿಯಂ, ಹಾಲೆಂಡ್, ನಾರ್ವೆ, ಫ್ರಾನ್ಸ್ ಮತ್ತು ಪೂರ್ವ ಯುರೋಪಿನ ಪ್ರಮುಖ ಭಾಗಗಳನ್ನು ವಶಪಡಿಸಿಕೊಂಡು, ಮತ್ತು ಉಭಯ ದೇಶಗಳ ನಡುವಿನ ಆಕ್ರಮಣ ನಡೆಸುವುದಿಲ್ಲ ಒಪ್ಪಂದವನ್ನು ಸಂಪೂರ್ಣವಾಗಿ ಉಲ್ಲಂಘಿಸಿ, ಜೂನ್ 1941 ರಲ್ಲಿ ಜರ್ಮನಿ ಸೋವಿಯತ್ ರಷ್ಯಾದ ಮೇಲೆ ಆಕ್ರಮಣ ನಡೆಸಿತು. ಅದೇ ವರ್ಷದ ಡಿಸೆಂಬರ್‌ನಲ್ಲಿ ಪರ್ಲ್ ಹಾರ್ಬರ್ ಮೇಲೆ ಮಿಂಚಿನ ದಾಳಿಯೊಂದಿಗೆ ಜಪಾನ್ ಯುದ್ಧವನ್ನು ಪ್ರವೇಶಿಸಿತು. 1941 ರ ಅಂತ್ಯದ ವೇಳೆಗೆ ಯುದ್ಧದ ಜ್ವಾಲೆ ಇಡೀ ಜಗತ್ತನ್ನು ಆವರಿಸಿತು. ಸೋವಿಯತ್ ಒಕ್ಕೂಟ ಮತ್ತು ಮೆರಿಕ ಸಂಯುಕ್ತ ಸಂಸ್ಥಾನ ಆಂಗ್ಲೋ–ಫ್ರೆಂಚ್ ಒಕ್ಕೂಟವನ್ನು ಸೇರಿಕೊಂಡು, ಅದನ್ನು ವಿಶ್ವಸಂಸ್ಥೆಯ ಮೈತ್ರಿಯಾಗಿ ಪರಿವರ್ತಿಸಿ ಯುದ್ಧದಲ್ಲಿ ಮುಳುಗಿದವು.

ಯುದ್ಧದ ಈ ಬದಲಾದ ಪರಿಸ್ಥಿತಿಯಲ್ಲಿ. ಭಾರತದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ರಚಿಸುವ ಷರತ್ತಿನ ಮೇಲೆ, ಹೋರಾಡುತ್ತಿರುವ ಬ್ರಿಟನ್‌ನೊಂದಿಗೆ ಸಹಕಾರಕ್ಕಾಗಿ ಒಂದು ಆಧಾರವನ್ನು ಕಂಡುಹಿಡಿಯಲು ಕಾಂಗ್ರೆಸ್ ಪ್ರಯತ್ನಿಸಿತು. ಜಪಾನಿನ ಆಕ್ರಮಣವನ್ನು ವಿರೋಧಿಸುವ ಉದ್ದೇಶದಿಂದ, ಬ್ರಿಟನ್ ಕೂಡ ತನ್ನ ಯುದ್ಧ ಪ್ರಯತ್ನಗಳಲ್ಲಿ ಭಾರತದ ಸಹಕಾರವನ್ನು ಪಡೆಯಲು ತೀವ್ರ ಆಸಕ್ತಿ ಹೊಂದಿತ್ತು. ಡಿಸೆಂಬರ್ 1941 ರಲ್ಲಿ ಪ್ರಮುಖ ಕಾಂಗ್ರೆಸ್ ನಾಯಕರನ್ನು ಸರ್ಕಾರ ಬಿಡುಗಡೆ ಮಾಡಿತು.

ಮಾರ್ಚ್ 8, 1942 ರಂದು ರಂಗೂನ್ ಪತನದ ನಂತರ, ಬ್ರಿಟಿಷ್ ಸರ್ಕಾರ ಕ್ರಿಪ್ಸ್ ಮಿಷನ್ ನೇಮಕವನ್ನು ಘೋಷಿಸಿತು. ಕ್ರಿಪ್ಸ್ ಮಿಷನ್‌ನ ವೈಫಲ್ಯವು ಯುದ್ಧದ ಸಮಯದಲ್ಲಿ ಬ್ರಿಟಿಷ್–ಭಾರತದ ಸಂಬಂಧಗಳ ಬಿಕ್ಕಟ್ಟಿನಲ್ಲಿ ಒಂದು ಮಹತ್ವದ ತಿರುವು ಎಂದು ಸಾಬೀತಾಯಿತು. ಮತ್ತು ಈ ಪರಿಸ್ಥಿತಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗಾಂಧೀಜಿಯವರ ನೇತೃತ್ವದಲ್ಲಿ ಆಗಸ್ಟ್ 8, 1942 ರಂದು ಮುಂಬೈಯಲ್ಲಿ ಸಭೆ ಸೇರಿದಾಗ, ಬ್ರಿಟಿಷರೇ 'ಭಾರತವನ್ನು ತೊರೆಯಿರಿ'(ಕ್ವಿಟ್ ಇಂಡಿಯ) ಎಂದು ಕೇಳುವ ಕರಡು ನಿರ್ಣಯವನ್ನು ಅಂಗೀಕರಿಸಲಾಯಿತು ಮತ್ತು ಕಾರ್ಯಕ್ರಮದ ಕಡೆಯಿಂದ 'ಡು ಆರ್ ಡೈ '(ಮಾಡು ಇಲ್ಲವೆ ಮಡಿ)' ಎಂದು ಜನರನ್ನು ಕೋರುವ 'ರಾಜಕೀಯ ಘೋಷಣೆ'ಯನ್ನು ಎತ್ತಲಾಯಿತು. ಕರಡು ಮರುದಿನ ಅಂದರೆ ಆಗಸ್ಟ್ 9 ರಂದು ಚರ್ಚಿಸಲಾಗುವುದು ಎಂದು ನಿರೀಕ್ಷಿಸಲಾಗಿತ್ತು, ಆದರೆ ಸಭೆ ನಡೆಯಲು ಸಾಧ್ಯವಾಗಲಿಲ್ಲ ಮತ್ತು ಔಪಚಾರಿಕವಾಗಿ ಮಂಜೂರಾದ ಯಾವುದೇ ಕಾರ್ಯಕ್ರಮವನ್ನು ನೀಡಲಾಗಲಿಲ್ಲ. ಆಗಸ್ಟ್ 9 ರಂದು ಮುಂಜಾನೆ ಗಾಂಧೀಜಿ ಮತ್ತು ಮುಂಬೈಯಲ್ಲಿನ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ನಂತರ ಭಾರತದಾದ್ಯಂತ ಬಂಧನಗಳು ನಡೆದವು ಮತ್ತು ಹೆಚ್ಚಿನ ಸಂಖ್ಯೆಯ ಕಾಂಗ್ರೆಸ್ಸಿಗರನ್ನು ಜೈಲಿಗೆ ತಳ್ಳಲಾಯಿತು ಮತ್ತು ಕಾಂಗ್ರೆಸ್ ಸಂಘಟನೆ ಸಂಪೂರ್ಣವಾಗಿ ನಾಯಕತ್ವ ವಿಲ್ಲದಂತಾಯಿತು.

'ಕ್ವಿಟ್ ಇಂಡಿಯಾ' ನಿರ್ಣಯ ಮತ್ತು 'ಡು ಆರ್ ಡೈ' ಘೋಷಣೆಯೊಂದಿಗೆ ನಾಯಕರ ಬಂಧನದ ಸುದ್ದಿ ಭಾರತದಾದ್ಯಂತ ಮಿಂಚಿನ ವೇಗದಲ್ಲಿ ಹರಡಿದಾಗ, ದಂಗೆಯ ಮನೋಭಾವದಿಂದ ಜನಸಾಮಾನ್ಯರು ಪೋಲೀಸರು ಮತ್ತು ಸೈನ್ಯವನ್ನು ಎದುರಿಸಿದರು ಮತ್ತು ರಕ್ತಸಿಕ್ತ ಘರ್ಷಣೆಗಳು ಸಂಭವಿಸಿದವು; ದೂರವಾಣಿ, ಟೆಲಿಗ್ರಾಫ್, ರೈಲ್ವೆ ಮತ್ತು ಇತರ ಸರ್ಕಾರಿ ಸಂಸ್ಥೆಗಳ ಕಟ್ಟಡಗಳನ್ನು ಸುಟ್ಟುಹಾಕಲಾಯಿತು ಅಥವಾ ಕಿತ್ತುಹಾಕಲಾಯಿತು ಮತ್ತು ಕೆಲವು ಸ್ಥಳಗಳಲ್ಲಿನ ರೈತರು ಸಹ ಸಶಸ್ತ್ರ ಪಡೆಗಳೊಂದಿಗೆ ಚಕಮಕಿ ನಡೆಸಿದರು.

ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಕೆಳ ಮಧ್ಯಮ ವರ್ಗದವರು–ಎಲ್ಲಾ ಸ್ತರಗಳಿಂದ ಬಂದ ಶೋಷಿತ ಜನರು ಈ ಪ್ರತಿರೋಧಕ ದಂಗೆಯಲ್ಲಿ ಸೇರಿಕೊಂಡರು. ಆದರೆ ಸರ್ಕಾರವು ನಡೆಸಿದ ಪ್ರತೀಕಾರ ಅನಾಗರಿಕತೆಯ ಎಲ್ಲ ಮಿತಿಗಳನ್ನು ಮೀರಿತು. ಕೆಲವೇ ವಾರಗಳ ವರೆಗೆ ನಡೆದ ದಂಗೆಯ ಸಮಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನರು ಹುತಾತ್ಮರಾದರು.


ಮುಂಬೈಯಲ್ಲಿ ಯುದ್ಧ–ವಿರೋಧಿ ಮುಷ್ಕರ ಅಕ್ಟೋಬರ್ 2, 1939

ಆರ್ಥಿಕ ಆಯಾಮ ಮತ್ತು ಕಾರ್ಮಿಕ ವರ್ಗದ ಪರಿಸ್ಥಿತಿಗಳ ಮೇಲೆ ಯುದ್ಧದ ಪರಿಣಾಮಗಳು

'ಪೂರ್ಣ ಯುದ್ಧ'ದಲ್ಲಿ ವಸಾಹತುಶಾಹಿ ದೇಶದ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿ ಅನೇಕ ವಿನಾಶಕಾರಿ ಪರಿಣಾಮಗಳಿಂದ ತುಂಬಿತ್ತು. ಇದು ಕೈಗಾರಿಕಾ ಉತ್ಪಾದನೆಯ ವೃದ್ಧಿಗೆ ಕಾರಣವಾಯಿತು ಆದರೆ ಕಾರ್ಮಿಕರ ಜೀವನ ಅಥವಾ ಕೆಲಸದ ಪರಿಸ್ಥಿತಿಗಳಲ್ಲಿ ಯಾವುದೇ ಸುಧಾರಣೆಯನ್ನು ತರಲಿಲ್ಲ.

ಉತ್ಪಾದನೆಯುನ್ನು ಹೆಚ್ಚಿಸಲು, ಕೈಗಾರಿಕಾ ಘಟಕಗಳು ಕೆಲಸದ ಬದಲಾವಣೆಗೆ ಎರಡು ಮತ್ತು ಮೂರು ಶಿಫ್ಟ್ ಅನ್ನು ಪರಿಚಯಿಸಲಾಯಿತು. ರಾತ್ರಿ ಪಾಳಿಯು ಬಹುತೇಕ ಸಾರ್ವತ್ರಿಕವಾಯಿತು, ಅನೇಕ ಸಂದರ್ಭಗಳಲ್ಲಿ ದೈನಂದಿನ ಕೆಲಸದ ಸಮಯುವನ್ನು ಸಹ ಹೆಚ್ಚಿಸಲಾಯಿತು ಮತ್ತು ರಜಾ ಸೌಲಭ್ಯಗಳನ್ನು ಮೊಟಕುಗೊಳಿಸಲಾಯಿತು, ಯುದ್ಧದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ವಿವಿಧ ಸಣ್ಣ ಕಾರ್ಖಾನೆಗಳಲ್ಲಿ ಅಸ್ತಿತ್ವದಲ್ಲಿರುವ ಪರಿಸ್ಥಿತಿಗಳು ವಿಶೇಷವಾಗಿ ಶೋಚನೀಯವಾಗಿದ್ದವು. ಅನೇಕ ಕೈಗಾರಿಕಾ ಘಟಕಗಳನ್ನು ಮಿಲಿಟರಿಯ ನಿಯಂತ್ರಣಕ್ಕೆ ಹಸ್ತಾಂತರಿಸಲಾಯಿತು. ಅನೇಕ ಸೆಣಬಿನ ಗಿರಣಿಗಳಲ್ಲಿ ಬಾಲ ಕಾರ್ಮಿಕರ ಉದ್ಯೋಗವನ್ನು ಪುನರಾರಂಭಿಸಲಾಯಿತು. ಗಣಿಗಳಲ್ಲಿ ಭೂಗತ ಕೆಲಸಕ್ಕಾಗಿ ಮಹಿಳಾ ಕಾರ್ಮಿಕರ ಉದ್ಯೋಗದ ಮೇಲಿನ ನಿರ್ಬಂಧಗಳನ್ನು ಸಹ ತೆಗೆದುಹಾಕಲಾಯಿತು.

ಈ ಹೆಚ್ಚಿದ ಕೆಲಸದ ಒತ್ತಡ, ಅಸ್ತಿತ್ವದಲ್ಲಿರುವ ನಿರ್ಬಂಧಗಳಿಗೆ ಒಟ್ಟಾರೆಯಾಗಿ ವಿನಾಯ್ತಿ ನೀಡಿದ್ದು ಕಾರ್ಮಿಕರನ್ನು ಹೆಚ್ಚಿನ ಪ್ರಮಾಣದ ಅಪಘಾತಗಳಿಗೆ ಒಡ್ಡಿತು ಮತ್ತು ವಾಸ್ತವವಾಗಿ ಕೈಗಾರಿಕಾ ಅಪಘಾತಗಳ ಪ್ರಮಾಣವು 1939 ರಿಂದ ಸ್ಪಷ್ಟವಾಗಿ ಹೆಚ್ಚಿತು.

ಇದಲ್ಲದೆ, ಅಗತ್ಯ ಸೇವೆಗಳ ನಿರ್ವಹಣಾ ಸುಗ್ರೀವಾಜ್ಞೆಯ ನಿರಂಕುಶಾಧಿಕಾರಿ ನಿಬಂಧನೆಗಳು ಕೆಲಸಗಾರರನ್ನು ತಮ್ಮ ಮುಕ್ತ ಇಚ್ಛಾಶಕ್ತಿಯಿಂದ ಕೆಲಸ ಬಿಡುವುದರಿಂದ ದೂರವಿಟ್ಟವು. ಈ ನಿಬಂಧನೆಗಳ ಅಡಿಯಲ್ಲಿ, ಕೆಲಸವನ್ನು ಬಿಡುವುದು ಅಥವಾ ಅದರಿಂದ ದೂರವಿರುವುದು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಯಿತು. 1945 ರವರೆಗೆ, ಈ ಸುಗ್ರೀವಾಜ್ಞೆಯ ಅಡಿಯಲ್ಲಿ 3000 ಕಾರ್ಮಿಕರಿಗೆ ಶಿಕ್ಷೆ ವಿಧಿಸಲಾಯಿತು.

ಕಾರ್ಮಿಕರ ಮುಷ್ಕರದ ಹಕ್ಕಿನ ಮೇಲೆ ತೀವ್ರ ದಾಳಿ ನಡೆಸಲಾಯಿತು.

ಯುದ್ಧದ ಸಮಯದಲ್ಲಿ ಭಾರತದ ಒಟ್ಟು ರೈಲ್ವೆ ನೌಕರರ ಸಂಖ್ಯೆ ಸುಮಾರು 900,000 ರಷ್ಟಿತ್ತು, ಅವರಲ್ಲಿ 80 ಪ್ರತಿಶತ ಕಡಿಮೆ ಹಂತದ ಶ್ರೇಣಿಗಳಲ್ಲಿದ್ದರು. ಜಾಗತಿಕ ಹಿಂಜರಿತದ ಸಮಯದಲ್ಲಿ ಅವರ ವೇತನವನ್ನು ಕಡಿತಗೊಳಿಸಲಾಯಿತು. ಆದರೆ ಕಾರ್ಮಿಕರ ನೈಜ ವೇತನದಲ್ಲಿನ ಈ ಕುಸಿತಕ್ಕೆ ನೇರ ವ್ಯತಿರಿಕ್ತವಾಗಿ, ಸೆಣಬಿನ, ಜವಳಿ, ಕಾಗದ, ಉಕ್ಕು, ಕಲ್ಲಿದ್ದಲು, ಸಿಮೆಂಟ್ ಮತ್ತು ಇತರ ಪ್ರಮುಖ ಕೈಗಾರಿಕೆಗಳಲ್ಲಿ ಯುದ್ಧದ ಕಾರಣ ಹೆಚ್ಚಿದ ಬೇಡಿಕೆಗಳಿಂದ, ದೇಶೀಯ ಅಥವಾ ವಿದೇಶಿ ಬಂಡವಾಳಶಾಹಿಗಳು ಹೆಚ್ಚಿನ ದರದಲ್ಲಿ ಅಪಾರ ಲಾಭವನ್ನು ಗಳಿಸಿದರು.

ತುಟ್ಟಿ–ಭತ್ತೆ

ವೇತನ ಹೆಚ್ಚಳಕ್ಕಾಗಿ ಭಾರತದ ಕಾರ್ಮಿಕರ ಹೋರಾಟವು ಯುದ್ಧದ ಸಮಯದಲ್ಲಿ ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿತು. ಎಐಟಿಯುಸಿ ಮತ್ತು ಅದರ ಪ್ರಾಂತೀಯ ಘಟಕಗಳು ಬೆಲೆಗಳ ಭಾರಿ ಏರಿಕೆಯನ್ನು ಸರಿದೂಗಿಸಲು ವೇತನ ಹೆಚ್ಚಳದ ಸಾಮಾನ್ಯ ಬೇಡಿಕೆಯನ್ನು ಎತ್ತಿದವು. ಸರ್ಕಾರಿ ಸಂಸ್ಥೆಗಳು, ರೈಲ್ವೆ, ಬಂದರುಗಳು, ಹಡಗುಕಟ್ಟೆಗಳು, ಪುರಸಭೆಗಳು ಮತ್ತು ಇತರ ಸಂಸ್ಥೆಗಳಲ್ಲಿ ಕಾರ್ಮಿಕರು ಮತ್ತು ನೌಕರರ ಒಕ್ಕೂಟಗಳು ಸಹ ಇದೇ ರೀತಿಯ ಬೇಡಿಕೆ ವ್ಯಕ್ತಪಡಿಸಿದವು. ಮುಂಬೈಯಲ್ಲಿನ ಟಿಯುಸಿ ಬೆಲೆಗಳ ಏರಿಕೆಗೆ ಪರಿಹಾರವಾಗಿ ವೇತನ ಹೆಚ್ಚಳಕ್ಕಾಗಿ ಹೋರಾಡಲು ವಿವಿಧ ಕಾರ್ಮಿಕ ಮುಖಂಡರನ್ನು ಒಳಗೊಂಡ ಕ್ರಿಯಾ ಸಮಿತಿಯನ್ನು ರಚಿಸಿತು. ತುಟ್ಟಿ–ಭತ್ಯೆ ಕೋರಿ ಭಾರತದ ಕಾರ್ಮಿಕರ ಮೊದಲ ಮುಷ್ಕರವನ್ನು ಮುಂಬೈಯಲ್ಲಿ ನಡೆಸಲಾಯಿತು. ಮಾರ್ಚ್ 5, 1940 ರಂದು, ಮುಂಬೈಯ 175,000 ಜವಳಿ ಕಾರ್ಮಿಕರು ಈ ಬೇಡಿಕೆಯ ಮೇರೆಗೆ ಕೆಲಸ ಸ್ಥಗಿತ ಮಾಡಿದರು. ಯುದ್ಧ–ಸಮಯದ ಹಣದುಬ್ಬರ ಸ್ಥಿತಿಯಲ್ಲಿ ವೇತನ ಹೆಚ್ಚಳವು ಸಾರ್ವತ್ರಿಕ ಬೇಡಿಕೆಯಾಯಿತು

ಕಾರ್ಮಿಕರ ಹೋರಾಟಗಳು

ಯುದ್ಧದ ಹಾವಳಿಯಿಂದ ಏಕಾಏಕಿ ಸೃಷ್ಟಿಯಾದ ಕೊರತೆ ಮತ್ತು ಹೆಚ್ಚಿನ ಬೆಲೆಗಳ ಸ್ಥಿತಿಯಲ್ಲಿ, ಭಾರತದ ಕಾರ್ಮಿಕ–ವರ್ಗ ಅವರ ಅಸ್ತಿತ್ವದಲ್ಲಿರುವ ಜೀವನ ಮಟ್ಟವನ್ನು ರಕ್ಷಿಸಲು ಹೋರಾಟಗಳನ್ನು ಮಾಡಬೇಕಾಯಿತು..

ಯುದ್ಧ ಪ್ರಾರಂಭವಾದಾಗಿನಿಂದ, ಭಾರತದಲ್ಲಿ ಅತ್ಯಂತ ದೊಡ್ಡ ಶ್ರಮಜೀವಿ ಕಾರ್ಯಕ್ರಮವೆಂದರೆ ಯುದ್ಧ ವಿರೋಧಿ ಮುಷ್ಕರ, ಇದು ಮುಂಬೈಯಲ್ಲಿ 2 ಅಕ್ಟೋಬರ್ 1939 ರಂದು ಆಯೋಜಿಸಲ್ಪಟ್ಟಿತು ಮತ್ತು 90,000 ಕಾರ್ಮಿಕರು ಭಾಗವಹಿಸಿದರು. ಮುಂಬೈ ಕಾರ್ಮಿಕರ ಈ ಮುಷ್ಕರವು ವಿಶ್ವ ಕಾರ್ಮಿಕ ವರ್ಗದ ಚಳವಳಿಯ ಮೊದಲ ಯುದ್ಧ–ವಿರೋಧಿ ಮುಷ್ಕರವೆಂದು ವಿಶೇಷ ಮಹತ್ವದ್ದಾಗಿದೆ.

ಈ ಘಟನೆಯು ಇತರ ಹೋರಾಟಗಳೊಂದಿಗೆ, ಈ ಅವಧಿಯಲ್ಲಿ ಭಾರತದ ಕಾರ್ಮಿಕ ವರ್ಗದ ದೃಷ್ಟಿಕೋನವು ಆರ್ಥಿಕ ಬೇಡಿಕೆಗಳ ನಾಲ್ಕು ಗೋಡೆಗಳೊಳಗೆ ಮಾತ್ರ ಸೀಮಿತವಾಗಿ ಇರಲಿಲ್ಲವೆಂದು ಸೂಚಿಸುತ್ತದೆ. ಕಾರ್ಮಿಕ ವರ್ಗವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳೊಂದಿಗೆ ಸಂಪೂರ್ಣವಾಗಿ ಸಮವೇಗದಿಂದ ಸಾಗಿತು, ಮತ್ತು ರಾಜಕೀಯ ಹೋರಾಟಗಳಲ್ಲಿ ಸಕ್ರಿಯ ಪಾತ್ರ ವಹಿಸಿತು.

ಮಾರ್ಚ್ 5, 1940 ರಂದು ಪ್ರಾರಂಭವಾದ ಮುಂಬೈಯ 175,000 ಜವಳಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರವು ಭಾರತದ ಕಾರ್ಮಿಕರ ತುಟ್ಟಿಭತ್ಯೆ ಹೋರಾಟದ ಆರಂಭವನ್ನು ಸೂಚಿಸಿತು. ಈ ಮುಷ್ಕರವು ತುಟ್ಟಿ–ಭತ್ಯೆಯ ಬೇಡಿಕೆಗೆ ಒತ್ತು ಕೊಟ್ಟಿತು ಮತ್ತು ದೇಶಾದ್ಯಂತದ ಹೋರಾಟಗಳು ಈ ದಿಕ್ಕಿನಲ್ಲಿ ಸಾಗಿದವು. ಜವಳಿ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ ಎಐಟಿಯುಸಿ ಮುಂಬೈಯಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು ಮತ್ತು ಮಾರ್ಚ್ 10 ರಂದು 300,000 ಕಾರ್ಮಿಕರ ಭಾಗವಹಿಸುವಿಕೆಯೊಂದಿಗೆ ಸಾರ್ವತ್ರಿಕ ಮುಷ್ಕರ ನಡೆಯಿತು. 1940 ರಲ್ಲಿ ಬಂಗಾಳದ ವಿವಿಧ ಸೆಣಬಿನ ಗಿರಣಿಗಳಲ್ಲಿ ಮುಷ್ಕರಗಳು ನಡೆದವು ಮತ್ತು ಕಾರ್ಮಿಕರು ಹತ್ತು ಶೇಕಡಾ ವೇತನ ಹೆಚ್ಚಳವನ್ನು **ಪುಟ 14 ನೋಡಿ**

ರಸಗೊಬ್ಬರ ಬೆಲೆಗಳಲ್ಲಿ ವಿಪರೀತ ಏರಿಕೆ ರೈತರ ಮೇಲೆ ದಾಳಿಗಳನ್ನು ನಿಲ್ಲಿಸಿ-ಎಐಕೆಎಸ್

ಮೋದಿ ಸರಕಾರ ರೈತರ ಆದಾಯಗಳನ್ನು ದ್ವಿಗುಣಗೊಳಸಲು ನೆರವಾಗುವ ಬದಲು ಅವರ ಸಂಕಟಗಳನ್ನೇ ದ್ವಿಗುಣಗೊಳಸುತ್ತಿದೆ

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ರಸಗೊಬ್ಬರ ಕಂಪನಿಗಳಿಗೆ ರಾಸಾಯನಿಕ ಗೊಬ್ಬರಗಳ ಬೆಲೆಗಳಲ್ಲಿ ವಿಪರೀತ ಏರಿಕೆ ಮಾಡಲು ಅವಕಾಶ ನೀಡಲು ನಿರ್ಧರಿಸಿದೆ. ಇದನ್ನು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್)ಬಲವಾಗಿ ಖಂಡಿಸಿದೆ.

ಡಿಎಪಿ(18–46–00) 2020ರಲ್ಲಿ ಮೆಟ್ರಿಕ್ ಟನ್‌ಗೆ 24,000 ರೂ. ಇದ್ದದ್ದು ಈಗ 38,000 ರೂ.ಗೆ ಏರಿದೆ. ಅಂದರೆ ಮೆಟ್ರಿಕ್ ಟನ್‌ಗೆ 14,000ರೂ. ನಂತೆ ಏರಿದೆ. 50 ಕೆಜಿ ಚೀಲಕ್ಕೆ 1200 ರೂ. ತೆರುತ್ತಿದ್ದ ರೈತರು ಈಗ 1900 ರೂ. ತೆರಬೇಕಾಗಿದೆ.

ಎನ್‌ಪಿಕೆ ಕಾಂಪ್ಲೆಕ್ಸ್ ಗೊಬ್ಬರದ ಬೆಲೆಯಲ್ಲೂ ವಿಪರೀತ ಏರಿಕೆಯಾಗಿದೆ. ಎನ್‌ಪಿಕೆ–1 (10–26–26) ಬೆಲೆಗಳು ಮೆಟ್ರಿಕ್ ಟನ್‌ಗೆ 23,500ರೂ.ನಿಂದ 35,500ರೂ.ಗೇರಿದೆ. ಎನ್‌ಪಿಕೆ–2(12–32–16)ರ ಬೇಲೆ 23,700ರೂ.ನಿಂದ 36,000 ರೂ.ಗೇರಿದೆ. ಅಂದರೆ ಮೆಟ್ರಿಕ್ ಟನ್‌ಗೆ 12,3000 ರೂ. ಏರಿಕೆ. ಎನ್‌ಪಿ(20–20–0–13) ಬೆಲೆಯೂ ಮೆಟ್ರಿಕ್ ಟನ್‌ಗೆ 18,500ರೂ.ನಿಂದ 27,000 ರೂ.ಗೆ ಏರಿದೆ. ಈ ಎಲ್ಲ ಬೆಲೆ ಏರಿಕೆಗಳನ್ನು ತಕ್ಷಣವೇ ಹಿಂದಕ್ಕೆ ತಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಬೆಲೆಗಳನ್ನು ಏರಿಸುವುದಿಲ್ಲ, ಏಕೆಂದರೆ ರೈತರಿಗೆ ಕೃಷಿ ಲಾಗುವಾಡುಗಳ ವೆಚ್ಚವನ್ನು ಇಳಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದ ಎರಡೇ ತಿಂಗಳಲ್ಲಿ ಇಫ್ಕೊ ಈ ಮಾಹಿತಿಯನ್ನು ಕೊಟ್ಟಿರುವುದು ಒಂದು ವಿಡಂಬನೆ ಎಂದು ಎಐಕೆಎಸ್ ವರ್ಣಿಸಿದೆ. ರಸಗೊಬ್ಬರ ವಲಯದಲ್ಲಿ ನಿಯಂತ್ರಣಗಳನ್ನು ತೆಗೆಯುವುದನ್ನು ಸರಕಾರ ಉತ್ತೇಜಿಸಿರುವುದರಿಂದ ಇದು ಸಂಭವಿಸಿದೆ. ರಸಗೊಬ್ಬರ ಕಂಪನಿಗಳು ' ರಸಗೊಬ್ಬರ ಸಬ್ಸಿಡಿಗಳನ್ನು ರೈತರಿಗೆ ವರ್ಗಾಯಿಸದೆಯೇ ಬೆಲೆಗಳನ್ನು ನಿಗದಿ ಮಾಡುತ್ತವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಬಿಜೆಪಿ ಸರಕಾರ ರೈತರ ಆದಾಯಗಳನ್ನು ದ್ವಿಗುಣಗೊಳಿಸಲು ನೆರವಾಗುವ ಬದಲು ಅವರ ಸಂಕಟಗಳನ್ನೇ ದ್ವಿಗುಣಗೊಳಿಸುತ್ತಿದ್ದಾರೆ.

ರೈತರು ಈಗಾಗಲೇ ಅಯೋಜಿತ ಲಾಕ್‌ಡೌನ್ ಮತ್ತು ಈಗಾಗಲೇ ಏರುತ್ತಿರುವ ಡೀಸೆಲ್ ಬೆಲೆಗಳು ಮತ್ತು ಇತರ ಕೃಷಿ ಲಾಗುವಾಡುಗಳ ಬೆಲೆ ಹೆಚ್ಚಳಗಳಿಂದ ಆಗುತ್ತಿರುವ ಉತ್ಪಾದನಾ ವೆಚ್ಚಗಳ ಏರಿಕೆಯಿಂದ ಅಪಾರ ನಷ್ಟಗಳನ್ನು ಅನುಭವಿಸುತ್ತಿರುವ ಸಮಯದಲ್ಲಿ ಬಂದಿದೆ. ಅಲ್ಲದೆ ಅಂತರ್ರಾಷ್ಟ್ರೀಯವಾಗಿ ಕಚ್ಚಾತೈಲ ಬೆಲೆಗಳು ಕೆಳಮಟ್ಟದಲ್ಲಿರುವ ಸಮಯದಲ್ಲಿ ಬಂದಿದೆ ಎಂದು ಎಐಕೆಎಸ್ ಹೇಳಿದೆ.

ಈ ಕೆಳಗಿರುವ ಕೋಷ್ಟಕವನ್ನು ನೋಡಿ:

ಅಖಿಲ ಭಾರತ ಕಿಸಾನ್ ಸಭಾ ರಸಗೊಬ್ಬರ ಬೆಲೆಗಳಲ್ಲಿ ಈ ಅನ್ಯಾಯಯುತ ಏರಿಕೆಯ ವಿರುದ್ಧ ಪ್ರತಿಭಟಿಸಿ ಎದ್ದು ನಿಲ್ಲಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಉತ್ಪನ್ನ	ಎಂಆರ್‌ಪಿ 2020ರಲ್ಲಿ		ಹೊಸ ಬೆಲೆಗಳು (2021)	
	ರೂ/ಮೆ.ಟನ್	ರೂ./50 ಕೆಜಿ ಚೀಲ	ರೂ/ಮೆ.ಟನ್	ರೂ./50 ಕೆಜಿ ಚೀಲ
ಡಿಎಪಿ	24,000	1200	38,000	1900
ಎನ್‌ಪಿಕೆ–1	23,500	1175	35,500	1775
ಎನ್‌ಪಿಕೆ–2	23,700	1185	36,000	1800
ಎನ್‌ಪಿ	18,500	925	27,000	1350

ರಫೇಲ್.....ಮತ್ತೆ ಸೋರುತಿಹುದು!

ಭಾರತ–ಫ್ರಾನ್ಸ್ ನಡುವಿನ ರಫೇಲ್ ಯುದ್ಧ ವಿಮಾನ ಒಪ್ಪಂದದ ಕುರಿತು ಮತ್ತೆ ವಿವಾದ ಭುಗಿಲೆದ್ದಿದ್ದು, ರಫೇಲ್ ಯುದ್ಧ ವಿಮಾನ ತಯಾರಿಕಾ ಸಂಸ್ಥೆ ಡಸಾಲ್ಟ್ ಭಾರತೀಯ ಮಧ್ಯವರ್ತಿಗೆ ಒಂದು ಮಿಲಿಯನ್ ಯುರೋ ಲಂಚ ನೀಡಿದೆ ಎಂಬ ಆರೋಪ ಕೇಳಿ ಬಂದಿದೆ.

ಫ್ರೆಂಚ್ ಫೈಟರ್ ಜೆಟ್ ರಫೇಲ್ ತಯಾರಿಕಾ ಸಂಸ್ಥೆ ಡಸಾಲ್ಟ್, 36 ರಫೇಲ್ ಯುದ್ಧ ವಿಮಾನ ಖರೀದಿಗೆ ಭಾರತವನ್ನು ಒಪ್ಪಿಸಲು ಭಾರತದ ಮಧ್ಯವರ್ತಿಯೊಬ್ಬರಿಗೆ ಒಂದು ಮಿಲಿಯನ್ ಯೂರೋ ಪಾವತಿಸಿದೆ ಎಂದು ಫ್ರಾನ್ಸ್‌ನ ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ತನಿಖೆಯನ್ನು ಉಲ್ಲೇಖಿಸಿ ಪ್ಯಾರಿಸ್‌ನಲ್ಲಿರುವ ತನಿಖಾ ಸುದ್ದಿ ವೆಬ್ ಸೈಟ್ 'ಮಿಡಿಯಾಪಾರ್ಟ್' ಆರೋಪಿಸಿದೆ. ಅಲ್ಲದೇ ಈ ಭಾರತೀಯ ಮಧ್ಯವರ್ತಿ ಬೇರೊಂದು ರಕ್ಷಣಾ ಒಪ್ಪಂದ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪ ಎದುರಿಸುತ್ತಿದ್ದಾನೆ ಎಂದು ಮಿಡಿಯಾಪಾರ್ಟ್ ಹೇಳಿದೆ. ಇನ್ನೇನು ರಫೇಲ್ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲಾ ವಿವಾದಗಳು ತಣ್ಣಗಾದವು ಎಂದುಕೊಳ್ಳುತ್ತಿರುವಾಗಲೇ, ಹೊಸದೊಂದು ವಿವಾದ ಹುಟ್ಟಿಕೊಂಡಿರುವುದು ಭಾರೀ ಕುತೂಹಲ ಕೆರಳಿಸಿದೆ.

ಫ್ರಾನ್ಸ್‌ನ ಭ್ರಷ್ಟಾಚಾರ ವಿರೋಧಿ ಸಂಸ್ಥೆ(AFA)ಯ ತನಿಖೆಯ ಅಂಶಗಳನ್ನು ತಾನು ಉಲ್ಲೇಖಿಸಿರುವುದಾಗಿಯೂ ಮಿಡಿಯಾಪಾರ್ಟ್ ಸ್ಪಷ್ಟಪಡಿಸಿದೆ. ಎಂಬ ಫ್ರೆಂಚ್ ಸರಕಾರಕ್ಕೆ ಉತ್ತರದಾಯಿಯಾಗಿರುವ ಸಂಸ್ಥೆ, ಇದನ್ನು ದೊಡ್ಡ ಕಂಪನಿಗಳು ಫ್ರೆಂಚ್ ಕಾಯ್ದೆಯಲ್ಲಿ ನಿರೂಪಿಸಲಾಗಿರುವ ಭ್ರಷ್ಟಾಚಾರ–ವಿರೋಧಿ ವಿಧಾನಗಳ ಅನುಷ್ಠಾನ ನಡೆಯುತ್ತಿದೆಯೇ ಎಂದು ಪರೀಕ್ಷಿಸಲು 2017ರಲ್ಲಿ ರಚಿಸಲಾಯಿತು.

ಇದು ಡಸಾಲ್ಟ್ ಕಂಪನಿಯ 2017ರ ಲೆಕ್ಕ ಪರಿಶೋಧನೆ ನಡೆಸುತ್ತಿದ್ದಾಗ 508,925 ಯುರೋ ಹಣದ ಮಾಹಿತಿ ಬಗ್ಗೆ ತನಿಖೆ ಮಾಡಿದಾಗ, 'ಗ್ರಾಹಕರಿಗೆ ಉಡುಗೊರೆಗಳು' ಎಂಬ ಉಲ್ಲೇಖ ಗಮನ ಸೆಳೆದಿತ್ತು. ಏಕೆದರೆ 'ಉಡುಗೊರೆ'ಯ ಬಾಬ್ತಿನಲ್ಲಿ ಇದು ಭಾರೀ ದೊಡ್ಡ ಮೊತ್ತ. ಈ ಬಗ್ಗೆ ಕೇಳಿದಾಗ ಡಸಾಲ್ಟ್ ಕಂಪನಿ ಮಾರ್ಚ್ 30, 2017 ದಿನಾಂಕದ ಒಂದು 'ಪ್ರೊಫೋರ್ಮ ಇನ್‌ವಾಯ್ಸ್' ತೋರಿಸಿತು. ಇದು ಭಾರತೀಯ ಕಂಪನಿ ಡಿಫ್‌ಸಿಸ್ ಸೊಲ್ಯುಶನ್ಸ್ ನೀಡಿದ್ದ ಇನ್ ವಾಯ್ಸ್, ಇದು ರಫೇಲ್ ಸಿ ಯ ಸಣ್ಣ ಕಾರು ಗಾತ್ರದ 50 ಮಾದರಿಗಳನ್ನು ತಯಾರಿಸಿ ಕೊಡುವುದಕ್ಕಾಗಿ ಕೊಟ್ಟ ಆರ್ಡರ್‌ನ 50% ಹಣ ಎಂದು ಡಸಾಲ್ಟ್ ಕಂಪನಿ ಹೇಳಿತು. ಅಂದರೆ ಇದು 1,017,850 ಯುರೋ ಮೊತ್ತದ ಆರ್ಡರ್. ಆಗ AFA ಇನ್ಸ್ ಪೆಕ್ಟರುಗಳು ತನ್ನದೇ ವಿಮಾನದ ಮಾದರಿಗಳನ್ನು ತಲಾ 20,3357 ಯುರೋದಷ್ಟು ವೆಚ್ಚದಲ್ಲಿ ತಯಾರಿಸಲು ಒಂದು ಭಾರತೀಯ ಕಂಪನಿಗೆ ಹೇಳಿದ್ದೇಕೆ ಮತ್ತು ಇದನ್ನು 'ಗ್ರಾಹಕರಿಗೆ ಉಡುಗೊರೆ' ಎಂದು ಉಲ್ಲೇಖಿಸಿದ್ದೇಕೆ ಎಂದು ಪ್ರಶ್ನಿಸಿತು ಎನ್ನಲಾಗಿದೆ.

ರಫೇಲ್ ಜೆಟ್‌ಗಳ 50 ಮಾದರಿಗಳ ತಯಾರಿಕೆಗಾಗಿ ಈ ಹಣವನ್ನು ಬಳಸಲಾಗಿದೆ, ಇಂತಹ ಮಾದರಿಗಳು ಇವೆ, ಅವನ್ನು ಈ ಭಾರತೀಯ ಕಂಪನಿ ಕಂಪನಿ ತನಗೆ ಪೂರೈಸಿದೆ ಎಂಬ ಬಗ್ಗೆ ಒಂದೇ ಒಂದು ದಸ್ತಾವೇಜನ್ನೂ ಡಸಾಲ್ಟ್ AFA ಗೆ ಒದಗಿಸಿಲ್ಲ ಎಂದು ಮಿಡಿಯಾಪಾರ್ಟ್ ಹೇಳಿದೆ.

ಭಾರತದಲ್ಲಿ ಡಸಾಲ್ಟ್ ಕಂಪನಿಯ ಒಂದು ಸಬ್ ಕಾಂಟ್ರಾಕ್ಟ್ ಕಂಪನಿಯಾಗಿರಬಹುದಾದ ಡಿಫ್‌ಸಿಸ್ ಸೊಲ್ಯುಶನ್ಸ್ ಗುಪ್ತಾ ಕುಟುಂಬದ ಒಡೆತನದ ಕಂಪನಿ. ಈ ಕುಟುಂಬದ ಮೂರು ತಲೆಮಾರುಗಳ ಸದಸ್ಯರು ವೈಮಾನಿಕ ಮತ್ತು ರಕ್ಷಣಾ ಉದ್ದಿಮೆಯಲ್ಲಿ ಮಧ್ಯವರ್ತಿಗಳಾಗಿದ್ದು, ಜನವರಿ 2019ರಲ್ಲಿ ಭಾರತದ ಮಾಧ್ಯಮದ 'ಕೋಬ್ರಾಪೋಸ್ಟ್ ಮತ್ತು ಇಕನಾಮಿಕ್ ಟೈಮ್ಸ್ ಈ ಕುಟುಂಬದ ?ಬ್ಬ ಸದಸ್ಯ ಸುಶೆನ್ ಗುಪ್ತ ಡಸಾಲ್ಟ್‌ನ ಒಬ್ಬ ಏಜೆಂಟನಾಗಿ ರಫೇಲ್ ಕಾಂಟ್ರಾಕ್ಟ್ ಗೆ ಕೆಲಸ ಮಾಡಿದ್ದರು, ಭಾರತದ ರಕ್ಷಣಾ ಮಂತ್ರಾಲಯದಿಂದ ಗುಪ್ತ ದಸ್ತಾವೇಜುಗಳನ್ನು ಪಡೆದಿದ್ದರು ಎಂದು ಪ್ರಕಟಿಸಿದ್ದವು ಎಂಬುದನ್ನೂ ಮಿಡಿಯಪೋಸ್ಟ್ ಉಲ್ಲೇಖಿಸಿದೆ.

ಸಪ್ಟಂಬರ್ 2016ರಲ್ಲಿ ಫ್ರೆಂಚ್ ಮತ್ತು ಭಾರತೀಯ ರಕ್ಷಣಾ ಮಂತ್ರಿಗಳು ರಫೇಲ್ ವ್ಯವಹಾರಕ್ಕೆ ಸಹಿ ಹಾಕಿದ ಆರು ತಿಂಗಳ ನಂತರ 1ಮಿಲಿಯ ಯುರೋಗಳ 'ಇನ್‌ವಾಯ್ಸ್' ಕಳಿಸಿದ್ದು ಈ ವ್ಯಕ್ತಿಯೇ. ಮಾರ್ಚ್ 2019ರಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ.) ಈತನನ್ನು ಅಗಸ್ತ ವೆಸ್ಟ್ ಲ್ಯಾಂಡ್ ಹೆಲಿಕಾಪ್ಟರ್‌ಗಳ ಮಾರಾಟದ 'ಚಾಪರ್ ಗೇಟ್ ಹಗರಣ'ದಲ್ಲಿ ಬಂಧಿಸಿತು. ಕಪ್ಪು ಹಣವನ್ನು ಬಿಳಿ ಮಾಡಿರುವ ಆರೋಪ ಈತನ ಮೇಲಿದ್ದು ಈಗ ಜಾಮೀನಿನ ಮೇಲೆ ಬಿಡುಗಡೆ ಪಡೆದಿದ್ದಾರೆ ಎಂದೂ ಮಿಡಿಯಪೋಸ್ಟ್ ವರದಿ ಹೇಳಿದೆ.

ಆದರೆ, ಅಂತಿಮವಾಗಿ, AFA ಡಸಾಲ್ಟ್ ಕಂಪನಿಯ ಲೆಕ್ಕ ಪರಿಶೋಧನೆ ವರದಿಯನ್ನು ಅಂತಿಮಗೊಳಿಸಿದಾಗ ಅದರ ನಿರ್ದೇಶಕರಾದ ಚಾರ್ಲ್ಸ್ ಡುಕ್ಶೆನ್ ಇದರ ಬಗ್ಗೆ ವಿಚಾರಣೆ ನಡೆಸಬೇಕು ಎಂದೇನೂ ಹೇಳಲಿಲ್ಲ, ಈ ಬಗ್ಗೆ ಉಲ್ಲೇಖವನ್ನು ಕೇವಲ ಎರಡು ಸಣ್ಣ ಪರಿಚ್ಛೇದಗಳಿಗೆ ಇಳಿಸಲಾಗಿದೆಯಂತೆ.

ಮೀಡಿಯಪಾರ್ಟ್ ಈ ಬಗ್ಗೆ ಆತನನ್ನು ಕೇಳಿದಾಗ ಟಿಪ್ಪಣಿ ಮಾಡಲು ಅವರು ನಿರಾಕರಿಸಿದ್ದಾರಂತೆ. ಡಸಾಲ್ಟ್ ಕಂಪನಿಯ ವಕ್ತಾರರು ಕೂಡ ತಮ್ಮ ಕಂಪನಿ ಈ ಬೆಳವಣಿಗೆಯ ಬಗ್ಗೆ ಟಿಪ್ಪಣಿ ಮಾಡುವುದಿಲ್ಲ ಎಂದು ಹೇಳಿದ್ದಾರಂತೆ.

ರಫೇಲ್ ಒಪ್ಪಂದದ ಕುರಿತು ಆರಂಭದಿಂದಲೂ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮೇಲೆ ಭ್ರಷ್ಟಾಚಾರ ಆರೋಪಗಳನ್ನು ವಿರೋಧ ಪಕ್ಷಗಳು ಮಾಡುತ್ತಲೆ ಬಂದಿದ್ದವು.


36 ಯುದ್ಧವಿಮಾನಗಳನ್ನು ಸಿದ್ದ ಸ್ವರೂಪದಲ್ಲಿ ಪಡೆಯುವ ಮೋದಿ ಸರಕಾರದ ಈ ಹೊಸ ರಫೇಲ್ ವ್ಯವಹಾರ, ಅದಕ್ಕೆ ಮೊದಲು ಯುಪಿಎ ಸರಕಾರದ ಅಡಿಯಲ್ಲಿ 126 ಯುದ್ಧವಿಮಾನಗಳ ಬಗ್ಗೆ ನಡೆಯುತ್ತಿದ್ದ ಖರೀದಿ ಪ್ರಕ್ರಿಯೆಯಗಿಂತ ಉತ್ತಮವೇನೂ ಆಗಿಲ್ಲ ಎಂದು ಭಾರತೀಯ ಮಾತುಕತೆ ತಂಡದ ಮೂವರು ಪರಿಣಿತ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದರು ಎಂದು 2019ರಲ್ಲಿ ದಿ ಹಿಂದು ಪತ್ರಿಕೆಯ ಒಂದು ತನಿಖೆಯಲ್ಲಿ ತಿಳಿದುಬಂದಿತ್ತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ರಫೇಲ್ ಹಗರಣ ಹೇಗೆ ನಡೆದಿದೆ ಎನ್ನುವುದು ಬಯಲಾಗುತ್ತಿದೆ. ಪ್ರಧಾನಿ ಕಚೇರಿಯೇ ಇದರಲ್ಲಿ ನೇರವಾಗಿ ಭಾಗಿಯಾಗಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರರು ಪ್ಯಾರಿಸ್‌ನಲ್ಲಿ ಕಾನೂನುಬಾಹಿರವಾಗಿ ಸಂಧಾನ ಮಾಡಿದ್ದಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಆರೋಪಿಸಿದ್ದರು.

ಆದರೆ ಈ ಕುರಿತ ಅರ್ಜಿಗಳವಿಚಾರಣೆ ನಡೆಸಿದ ಸುಪ್ರಿಂ ಕೋರ್ಟ್ ಡಿಸೆಂಬರ್ 2018ರಲ್ಲಿ ಈ ರ್ಜಿಗಳನ್ನೆಲ್ಲ ವಜಾ ಮಾಡಿ ಈ ವ್ಯವಹಾರದ ನಿರ್ಧಾರ ಪ್ರಕ್ರಿಯೆಯನ್ನು ಸಂದೇಹಿಸಬೇಕಾದ ಸಂದರ್ಭವೇನೂ ಇಲ್ಲ ಎಂದಿತು.

ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ಸೀಲ್ ಆದ ಲಕೋಟೆಗಳಲ್ಲಿ ದಸ್ತಾವೇಜುಗಳನ್ನು ಸಲ್ಲಿಸಬೇಕೆಲು ಎಂದು ಸರಕಾರಕ್ಕೆ ತಾಕೀತು ಮಾಡಿದ್ದು ಬಹಳಷ್ಟು ಟೀಕೆ–ಟಿಪ್ಪಣಿಗಳಿಗೆ ಗ್ರಾಸವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೋದಿ ಸರಕಾರದ ಕಾನೂನು ಮಂತ್ರಿಗಳು ನಿರೀಕ್ಷಿಸಿದಂತೆ ಇದು ಸಂಪೂರ್ಣ ಆಧಾರಹೀನ ಆಪಾದನೆ ಎಂದಿದ್ದಾರೆ. ಸಹಜವಾಗಿ ಇದಕ್ಕೆ ಅವರು ಸುಪ್ರಿಂ ಕೋರ್ಟ್ ತೀರ್ಪನ್ನೇ ಅವಲಂಬಿಸಿದ್ದಾರೆ. ಸಿಎಜಿ ಗೆ ಕೂಡ ಇದರಲ್ಲಿ ತಪ್ಪೇನೂ ಕಂಡು ಬಂದಿಲ್ಲ ಎಂಬ ತಮ್ಮ ಹಿಂದಿನ ಸಮರ್ಥನೆಯನ್ನು ಮತ್ತೆ ಕೊಟ್ಟಿದ್ದಾರೆ. ಆದರೆ ಸಿಎಜಿ ವರದಿ ಕಾನೂನುಬಾಹಿರ ಪಾವತಿಗಳ ಪ್ರಶ್ನೆಯನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ ಎಂಬುದು ಸ್ವಯಂವೇದ್ಯ ಎಂಬುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ನೆನಪಿಸಿದೆ.



ಅದು ಸೋರುತ್ತಿರುವುದು ಫ್ರಾನ್ಸಿನಿಂದ...ವ್ಯಂಗ್ಯಚಿತ್ರ: ಅಲೋಕ್ ನಿರಂತರ್




ವ್ಯಂಗ್ಯಚಿತ್ರ: ಪಿ.ಮಹಮದ್, ವಾರ್ತಾಭಾರತಿ



ಭಾರತೀಯ ಅಂಟನ್ನು ಹಚ್ಚಲು ಪ್ರಯತ್ನಿಸಿ, ಲಕೋಟೆಗಳು ಸದಾ ಸೀಲ್ ಆಗಿರುತ್ತವೆ ಫ್ರೆಂಚರಿಗೆ ಭಾರತೀಯ ಸಲಹೆ! – ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್



ಐಎಂಎಫ್‌ನ ಇಬ್ಬಂದಿ ನೀತಿ



ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸುವಂತೆ ಪಟ್ಟು ಹಿಡಿಯುವ ಐಎಂಎಫ್ ಕೊವಿಡ್ ಸಂದರ್ಭದಲ್ಲಿ ರಕ್ಷಣಾ ಮತ್ತು ಚೇತರಿಕೆಯ ಪ್ಯಾಕೇಜ್‌ಗಳನ್ನು ಸಕ್ರಿಯವಾಗಿ ಪ್ರೋತ್ಸಾಹಿಸಿದೆ. ಈ ಸಾಂಕ್ರಾಮಿಕದ ಸಂದರ್ಭದಲ್ಲಿ ತೃತೀಯ ಜಗತ್ತಿನ ದೇಶಗಳು ಕೈಗೊಂಡ ಹೆಚ್ಚು ಹೆಚ್ಚು ಸಾರ್ವಜನಿಕ ವೆಚ್ಚಗಳನ್ನೂ ಸಹ ಬೆಂಬಲಿಸಿದೆ. ಆದರೆ, ತೃತೀಯ ಜಗತ್ತಿನ ದೇಶಗಳಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ, ಅದು ಹಿಂದಿನಂತೆ ಈ ದೇಶಗಳ ಮೇಲೆ ಮಿತವ್ಯಯ-ವಿತ್ತ ನೀತಿಗಳನ್ನು ಮತ್ತೊಮ್ಮೆ ಹೇರಿ ತನ್ನ ನಿಜಬಣ್ಣವನ್ನು ತೋರಿಸಿದೆ. ಮುಂದುವರಿದ ಮತ್ತು ಹಿಂದುಳಿದ ದೇಶಗಳ ಬಗ್ಗೆ ಐಎಂಎಫ್ ಅಳವಡಿಸಿಕೊಂಡ ವಿಭಿನ್ನ ನಿಲುವುಗಳು ಸಾಂಕ್ರಾಮಿಕದ ಆಚೆಗೂ ವಿಸ್ತರಿಸುವ ಸಾಧ್ಯತೆ ಇದೆ. ನವ ಉದಾರವಾದಿ ಬಂಡವಾಳಶಾಹಿಯು ಸೃಷ್ಟಿಸಿರುವ ಆರ್ಥಿಕ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳಲು ಅನುವಾಗುವಂತಹ ಒಂದು ಹೊಸ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಈ ಇಬ್ಬಂದಿ ನೀತಿಯೇ ತಳಹದಿಯಾಗಬಹುದು. ಇದು ಮೂರನೇ ಜಗತ್ತಿನ ಅರ್ಥವ್ಯವಸ್ಥೆಗಳಿಂದ ಮುಂದುವರಿದ ದೇಶಗಳನ್ನು ಒಂದು ಕಾವಲು ಬೇಲಿಯ ರೀತಿಯಲ್ಲಿ ಕಾಯುವ ಕಾರ್ಯತಂತ್ರವೂ ಆಗಬಹುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಮೂರನೇ ಜಗತ್ತಿನ ದೇಶಗಳಿಗೆ ಹೋಲಿಸಿದರೆ, ಕೋವಿಡ್-19ರ ಬಿಕ್ಕಟ್ಟಿಗೆ ಮುಂದುವರಿದ ದೇಶಗಳು ಸ್ಪಂದಿಸಿರುವ ರೀತಿಯು ಬಹಳ ಭಿನ್ನವಾಗಿದೆ. ಜನರ ಆರೋಗ್ಯವನ್ನು ಕಾಪಾಡುವಲ್ಲಿ ಮತ್ತು ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಮುಂದುವರಿದ ದೇಶಗಳು ಗಣನೀಯ ಪ್ರಮಾಣದ ವಿತ್ತೀಯ ಪ್ಯಾಕೇಜ್‌ಗಳನ್ನು ಬಿಡುಗಡೆ ಮಾಡಿರುವ ಸಂದರ್ಭದಲ್ಲಿ, ತೃತೀಯ ಜಗತ್ತಿನ ದೇಶಗಳು ಮಿತವ್ಯಯ-ವಿತ್ತ ನೀತಿಗಳ ಹಿಡಿತಕ್ಕೆ ಸಿಕ್ಕಿ ಬಿದ್ದಿವೆ. ಭಾರತದ ಪರಿಹಾರ ಪ್ಯಾಕೇಜ್ ಅತ್ಯಂತ ನಿಕೃಷ್ಟವಾಗಿದ್ದು, ಗಾತ್ರದಲ್ಲಿ ಜಿಡಿಪಿಯ ಶೇ. ಒಂದಕ್ಕಿಂತ ಬಹುಷಃ ಹೆಚ್ಚಿಗೆ ಇರಲಿಕ್ಕಿಲ್ಲ. ತೃತೀಯ ಜಗತ್ತಿನ ಉಳಿದ ದೇಶಗಳ ಪ್ಯಾಕೇಜ್‌ಗಳೂ ಸಹ ಅಷ್ಟೇನೂ ಉತ್ತಮವಾಗಿಲ್ಲ. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಅಮೆರಿಕಾದ ಟ್ರಂಪ್ ಸರ್ಕಾರವು 2020ರಲ್ಲಿ ಜಿಡಿಪಿಯ ಶೇ.10ರಷ್ಟು ಅಂದರೆ, 1.9 ಟ್ರಿಲಿಯನ್ ಡಾಲರ್ ಮೊತ್ತದ ರಕ್ಷಣಾ ಮತ್ತು ಚೇತರಿಕೆಯ ಪ್ಯಾಕೇಜ್‌ಅನ್ನು ಬಿಡುಗಡೆ ಮಾಡಿತ್ತು. ನಂತರ, ಈ ವರ್ಷದ ಆರಂಭದಲ್ಲಿ ಬಿಡೆನ್ ಸರ್ಕಾರವು 2 ಟ್ರಿಲಿಯನ್ ಡಾಲರ್‌ಗಳಷ್ಟು ಮೊತ್ತದ ಇನ್ನೊಂದು ಪ್ಯಾಕೇಜ್‌ಅನ್ನು ಘೋಷಿಸಿದ್ದು, ಅದರಲ್ಲಿ ಕನಿಷ್ಠ 1 ಟ್ರಿಲಿಯನ್ ಡಾಲರ್‌ಗಳಷ್ಟು ಹಣ ಜನರಿಗೆ ನೇರ ವರ್ಗಾವಣೆಯಾಗುತ್ತದೆ. ಈ ಎರಡು ಪ್ಯಾಕೇಜ್‌ಗಳ ಒಟ್ಟು ಮೊತ್ತವು ಅಮೇರಿಕಾದ ಜಿಡಿಪಿಯ ಸುಮಾರು ಶೇ.20ರಷ್ಟಾಗುತ್ತದೆ. ಯೂರೋಪಿನ ಒಕ್ಕೂಟವೂ ಸಹ ಗಣನೀಯ ಪ್ರಮಾಣದ ಆರ್ಥಿಕ ಪ್ಯಾಕೇಜ್‌ಗಳನ್ನು ಬಿಡುಗಡೆ ಮಾಡಿದೆ.

ಹೇಳುವುದು ಶಾಸ್ತ್ರ, ತಿನ್ನುವುದು ಬದನೆಕಾಯಿ

ಗಮನಾರ್ಹವಾದ ಅಂಶವೆಂದರೆ, ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸುವಂತೆ ಪಟ್ಟು ಹಿಡಿಯುವ ಐಎಂಎಫ್ (ಅಂತಾರಾಷ್ಟ್ರೀಯ ಹಣಕಾಸು ನಿಧಿ), ತನ್ನ ಎಂದಿನ ಹಠಮಾರಿ ಧೋರಣೆಯನ್ನು ಬಿಟ್ಟು, ರಕ್ಷಣಾ ಮತ್ತು ಚೇತರಿಕೆಯ ಪ್ಯಾಕೇಜ್‌ಗಳನ್ನು ಸಕ್ರಿಯವಾಗಿ ಬೆಂಬಲಿಸಿದೆ ಮತ್ತು ಪ್ರೋತ್ಸಾಹಿಸಿದೆ. ಈ ಸಾಂಕ್ರಾಮಿಕದ ಸಂದರ್ಭದಲ್ಲಿ ತೃತೀಯ ಜಗತ್ತಿನ ದೇಶಗಳು ಕೈಗೊಂಡ ಹೆಚ್ಚು ಹೆಚ್ಚು ಸಾರ್ವಜನಿಕ ವೆಚ್ಚಗಳನ್ನೂ ಸಹ ಬೆಂಬಲಿಸಿದೆ. ಆದರೆ, ಆಕ್ಸ್‌ಫಾಮ್ ಎಂಬ ಒಂದು ಸರ್ಕಾರೇತರ ಸಂಸ್ಥೆಯ ವಿಶ್ಲೇಷಣೆಯ ಪ್ರಕಾರ, ಕೋವಿಡ್-19ರ ಕಾಲದಲ್ಲಿ ತೃತೀಯ ಜಗತ್ತಿನ ದೇಶಗಳಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ, ಐಎಂಎಫ್ ತನ್ನ ಬಾಯಿ ಮಾತಿನ ಉಪಚಾರದ ಮಾತುಗಳಿಗೆ ತದ್ವಿರುದ್ಧವಾಗಿ, ಈ ದೇಶಗಳ ಮೇಲೆ ಮಿತವ್ಯಯ-ವಿತ್ತ ನೀತಿಗಳನ್ನು ಮತ್ತೊಮ್ಮೆ ಹೇರಿದೆ!

ಆಕ್ಸ್‌ಫಾಮ್‌ನ ವಿಶ್ಲೇಷಣೆಯ ಪ್ರಕಾರ, ಮಾರ್ಚ್ 2020ರ ನಂತರ 81 ದೇಶಗಳಿಗೆ ಐಎಂಎಫ್ ಮಂಜೂರು ಮಾಡಿರುವ 91 ಸಾಲಗಳ ಪೈಕಿ, 76 ಪ್ರಕರಣಗಳಲ್ಲಿ ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸುವಂತೆ ಹೇಳಿದೆ. ಈ ನೀತಿಗಳ ಪ್ರಕಾರ, ಸರ್ಕಾರವು ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸಬೇಕಾಗುತ್ತದೆ. ಅಂದರೆ, ಸಾರ್ವಜನಿಕ ಆರೋಗ್ಯ ಸೇವೆಯ ವೆಚ್ಚಗಳನ್ನು ಕಡಿತಗೊಳಿಸುವ, ಪಿಂಚಣಿಯ ಮೊತ್ತವನ್ನು ಇಳಿಸುವ, ವೈದ್ಯರು, ದಾದಿಯರು ಮತ್ತು ಇತರರ ಆದಾಯವನ್ನು ವೇತನ ಸ್ಥಗಿತದ ಅಥವಾ ಕಡಿತದ ಮೂಲಕ ಇಳಿಕೆ ಮಾಡುವ ಹಾಗೂ ನಿರುದ್ಯೋಗ ಭತ್ತೆ ಮತ್ತು ಅನಾರೋಗ್ಯ-ವೇತನಗಳನ್ನು ಕಡಿತಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ಆಕ್ಸ್‌ಫಾಮ್ ಈ ಸಂಬಂಧವಾಗಿ ಅನೇಕ ಉದಾಹರಣೆಗಳನ್ನು ಕೊಟ್ಟಿದೆ. ಇತ್ತೀಚೆಗೆ, ಈಕ್ವೆಡಾರ್ ದೇಶಕ್ಕೆ 6.5 ಬಿಲಿಯನ್ (ಶತಕೋಟಿ) ಡಾಲರ್ ಸಾಲ ಕೊಡಲು ಐಎಂಎಫ್ ಸಮ್ಮತಿಸಿತ್ತು, ಆದರೆ, ಅದರಲ್ಲಿದ್ದ ಮೋಸವೆಂದರೆ, ಬಡ ಜನರು ಹೆಚ್ಚಾಗಿ ಬಳಸುವ ಇಂಧನ ಸಬ್ಸಿಡಿಗಳನ್ನು ಕಡಿತಗೊಳಿಸುವ, ನಿರುದ್ಯೋಗಿಗಳಿಗೆ ನಗದು ವರ್ಗಾವಣೆಯನ್ನು ನಿಲ್ಲಿಸುವ ಮತ್ತು ಆರೋಗ್ಯ ರಕ್ಷಣೆಯ ಮೇಲಿನ ವೆಚ್ಚಗಳನ್ನು ಕಡಿತಗೊಳಿಸುವ "ಸಲಹೆ"ಯನ್ನು ಈಕ್ವೆಡಾರ್‌ಗೆ ಕೊಡಲಾಗಿತ್ತು. ಅಂಗೋಲ ಮತ್ತು ನೈಜೀರಿಯಾ ಸೇರಿದಂತೆ ಒಂಭತ್ತು ದೇಶಗಳಿಗೆ, ಬಡವರು ಕೊಳ್ಳುವ ಆಹಾರ ಪದಾರ್ಥಗಳು, ಬಟ್ಟೆ ಬರೆ ಮುಂತಾದದ ಗೃಹೋಪಯೋಗಿ ವಸ್ತುಗಳ ಮೇಲಿನ ಮೌಲ್ಯವರ್ಧಿತ ತೆರಿಗೆಗಳನ್ನು ಹೆಚ್ಚಿಸುವಂತೆ ಐಎಂಎಫ್ ಹೇಳಿದೆ. ಬಾರ್ಬಡೋಸ್, ಎಲ್ ಸಾಲ್ವಡಾರ್, ಲೆಸೊಥೋ ಮತ್ತು ಟ್ಯುನೀಷಿಯಾ ಸೇರಿದಂತೆ ಹದಿನಾಲ್ಕು ದೇಶಗಳಲ್ಲಿ ಸಾರ್ವಜನಿಕ ವಲಯದ ವೇತನ ಮತ್ತು ಉದ್ಯೋಗಗಳನ್ನು ಕಡಿತಗೊಳಿಸುವ ಅಥವಾ ಸ್ಥಗಿತಗೊಳಿಸುವ ಸಾಧ್ಯತೆಯಿದೆ. ಪರಿಣಾಮವಾಗಿ, ಸರ್ಕಾರಿ ವೈದ್ಯರು, ದಾದಿಯರು ಮತ್ತು ಆರೋಗ್ಯ-ಆರೈಕೆಯ ಇತರ ಕೆಲಸಗಾರರ ಸಂಖ್ಯೆ ಇಳಿಯುತ್ತದೆ. ಜನಸಂಖ್ಯೆಯ ತಲಾವಾರು ಲೆಕ್ಕದಲ್ಲಿ ಈಗಾಗಲೇ ಅತ್ಯಂತ ಕಡಿಮೆ ಸಂಖ್ಯೆಯ ಇಂತಹ ಸಿಬ್ಬಂದಿಗಳನ್ನು ಹೊಂದಿರುವ ದೇಶಗಳಲ್ಲಿ ಇದು ಹೆಚ್ಚು ಸಾವು-ನೋವುಗಳಿಗೆ ಕಾರಣವಾಗುತ್ತದೆ.

ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

ಈ ಕಠಿಣ ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸಲೇಬೇಕೆಂಬ ಐಎಂಎಫ್‌ನ ಒತ್ತಾಯದ ಧೋರಣೆಯು ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತದೆ: ಮೊದಲನೆಯದಾಗಿ, ಶ್ರೀಮಂತ ಮತ್ತು ಬಡ ದೇಶಗಳ ನಡುವೆ ಐಎಂಎಫ್ ತಾರತಮ್ಯ ಮಾಡುತ್ತದೆ. ಶ್ರೀಮಂತ ದೇಶಗಳು ಈ ಕಠಿಣ ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸದಿರುವ ಕ್ರಮವನ್ನು ಅದು ಸಹಿಸಿಕೊಳ್ಳುತ್ತದೆ, ಆದರೆ, ಹಿಂದುಳಿದ ದೇಶಗಳಿಗೆ ಅದೇ ರಿಯಾಯ್ತಿ ತೋರಿಸಲು ಐಎಂಎಫ್ ತಯಾರಿಲ್ಲ. ಎರಡನೆಯದಾಗಿ, ಐಎಂಎಫ್ ಬೋಧಿಸುವ ನೀತಿಗಳು ಅಪರೂಪಕ್ಕೊಮ್ಮೆ ನ್ಯಾಯಸಮ್ಮತವಾಗಿ ಕಂಡರೂ ಸಹ, ತನ್ನ ಕಠಿಣ ಮಿತವ್ಯಯ-ವಿತ್ತ ನೀತಿಗಳ ಮತ್ತು ಖಾಸಗೀಕರಣದ ಅಜೆಂಡಾವನ್ನು ಐಎಂಎಫ್ ಮೂರನೇ ಜಗತ್ತಿನ ದೇಶಗಳ ಮೇಲೆ ಅನಿವಾರ್ಯವಾಗಿ ಹೇರುತ್ತದೆ. ತನ್ನ ಮಾಮೂಲು ಷರತ್ತುಗಳಿಗೆ ವ್ಯತಿರಿಕ್ತವಾಗಿ ಕಾಣುವ ಕೆಲವು ಸಾಂದರ್ಭಿಕ "ವಿವೇಕಯುತ" ಹೇಳಿಕೆಗಳ ಮೂಲಕ ಐಎಂಎಫ್ ಮಾನವೀಯವಾಗಿ ಬದಲಾಗುತ್ತಿದೆ ಎಂಬ ನಂಬಿಕೆಯನ್ನು ಕೆಲವು ಪ್ರಗತಿಪರ ಅರ್ಥಶಾಸ್ತ್ರಜ್ಞರಲ್ಲಿ ಮೂಡಿಸಲು ಪ್ರಯತ್ನಿಸುತ್ತದೆ ಮತ್ತು ಇಂತಹ "ವಿವೇಕಯುತ" ಹೇಳಿಕೆಗಳು ಐಎಂಎಫ್‌ನ ಅಧಿಕಾರಿಗಳ ಸಂಶೋಧನಾ ಲೇಖನಗಳ ರೂಪದಲ್ಲಿ ಐಎಂಎಫ್‌ನ ನಿಯತಕಾಲಿಕದಲ್ಲಿ ಪ್ರಕಟಗೊಳ್ಳುತ್ತವೆ. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವ ಹಾಗೆ ಅದೊಂದು ದೂರದ ನೋಟವಷ್ಟೇ. ಒಳ ಹೊಕ್ಕು ನೋಡಿದರೆ ಅದು ತನ್ನ ಕಸುಬು ಮಾಡುತ್ತಲೇ ಇರುತ್ತದೆ.


ಐಎಂಎಫ್‌ನ ಇಬ್ಬಂದಿ ನೀತಿಗೆ ಇನ್ನೊಂದು ಉದಾಹರಣೆಯೆಂದರೆ, ತೃತೀಯ ಜಗತ್ತಿನ ದೇಶಗಳು ಬಂಡವಾಳದ ಹರಿವಿನ ಮೇಲೆ ನಿಯಂತ್ರಣಗಳನ್ನು ಹೇರುವ ಅಗತ್ಯದ ಬಗ್ಗೆ ಅದು ವ್ಯಕ್ತಪಡಿಸಿದ ಮೆಚ್ಚುಗೆಯು ಅನೇಕ ಪ್ರಗತಿಪರ ಅರ್ಥಶಾಸ್ತ್ರಜ್ಞರಲ್ಲಿ ಐಎಂಎಫ್ ಬದಲಾಗುತ್ತಿದೆ ಎಂಬ ಭಾವನೆಯನ್ನು ಮೂಡಿಸಿತ್ತು. ಆದರೆ, ವ್ಯವಹಾರದ ಪ್ರಶ್ನೆ ಬಂದಾಗ ಎಳ್ಳಷ್ಟೂ ಸೋಲುವುದಿಲ್ಲ. ಹಣಕಾಸು ಬಂಡವಾಳವೂ ಸೇರಿದಂತೆ ಬಂಡವಾಳದ ಮುಕ್ತ ಹರಿವಿಗೆ ಎಲ್ಲ ದೇಶಗಳೂ ಅವಕಾಶ ಕಲ್ಪಿಸಿಕೊಡಬೇಕು ಎಂಬ ತನ್ನ ನಿಲುವಿನಿಂದ ಅದು ಸ್ವಲ್ಪವೂ ವಿಚಲಿತವಾಗಿಲ್ಲ. ಅದು ವಿಧಿಸುವ ಷರತ್ತುಗಳ ಬಗ್ಗೆ ವ್ಯಕ್ತಪಡಿಸುವ ವಿರುದ್ಧ ಅಭಿಪ್ರಾಯಗಳ ಬಗ್ಗೆ ಅದರ ತೋರಿಕೆಯ ಸಹಮತವು, ಪ್ರಗತಿಪರ ಅರ್ಥಶಾಸ್ತ್ರಜ್ಞರಿಂದ ವಿಶ್ವಾಸಾರ್ಹತೆಯನ್ನು ಪಡೆಯುವ ಉದ್ದೇಶದಿಂದ ಕೂಡಿದ ಚಮತ್ಕಾರದ ಮಾತುಗಳಷ್ಟೇ ಅಲ್ಲದೆ ಬೇರೆ ಏನೂ ಅಲ್ಲ.

ಇಲ್ಲೊಂದು ಆತಂಕವೂ ಕಾಡುತ್ತದೆ. ಕೊರೊನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ, ಮುಂದುವರಿದ ಮತ್ತು ಹಿಂದುಳಿದ ದೇಶಗಳ ಬಗ್ಗೆ ಐಎಂಎಫ್ ಅಳವಡಿಸಿಕೊಂಡ ವಿಭಿನ್ನ ನಿಲುವುಗಳು ಸಾಂಕ್ರಾಮಿಕದ ಆಚೆಗೂ ವಿಸ್ತರಿಸುವ ಸಾಧ್ಯತೆ ಇದೆ. ನವ ಉದಾರವಾದಿ ಬಂಡವಾಳಶಾಹಿಯು ಸೃಷ್ಟಿಸಿರುವ ಆರ್ಥಿಕ ಬಿಕ್ಕಟ್ಟಿನಿಂದ ಚೇತರಿಸಿ ಕೊಳ್ಳಲು ಅನುವಾಗುವಂತಹ ಒಂದು ಹೊಸ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಈ ಇಬ್ಬಂದಿ ನೀತಿಯೇ ತಳಹದಿಯಾಗಬಹುದು. ಈ ಆಳ್ವಿಕೆಯಲ್ಲಿ, ಮುಂದುವರಿದ ದೇಶಗಳು ತಮ್ಮ ಅರ್ಥವ್ಯವಸ್ಥೆಗಳ ಚೇತರಿಕೆಗಾಗಿ ಕೈಗೊಳ್ಳುವ ವಿತ್ತೀಯ ಉತ್ತೇಜನದ ಕ್ರಮಗಳಿಗೆ ಅಡ್ಡಿ ಇರದು. ಆದರೆ, ತೃತೀಯ ಜಗತ್ತಿನ ದೇಶಗಳು ಕಠಿಣ ಮಿತವ್ಯಯ-ವಿತ್ತ ನೀತಿಗಳನ್ನು ಪಾಲಿಸಲೇಬೇಕಾಗುತ್ತದೆ. ಹಾಗಾಗಿ, ತೃತೀಯ ಜಗತ್ತಿನ ದೇಶಗಳು ಬೃಹತ್ ಪ್ರಮಾಣದ ನಿರುದ್ಯೋಗ ಮತ್ತು ಆದಾಯಗಳ ಕುಗ್ಗುವಿಕೆಯ ಕಾರಣಗಳಿಂದ ನಿರಂತರವಾಗಿ ಬಿಕ್ಕಟ್ಟಿಗೆ ಒಳಗಾಗುವುದರಿಂದ, ಮುಂದುವರಿದ ದೇಶಗಳಲ್ಲಿ ಹಣದುಬ್ಬರವು ಅವುಗಳ ಚೇತರಿಕೆಗೆ ಅನುಕೂಲಕರವೇ ಆಗುತ್ತದೆ.

ಈ ಅಂಶವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಐಎಂಎಫ್‌ನ ಈ ಕಾರ್ಯತಂತ್ರವು ಮೂರನೇ ಜಗತ್ತಿನ ಅರ್ಥವ್ಯವಸ್ಥೆಗಳಿಂದ ಮುಂದುವರಿದ ದೇಶಗಳನ್ನು ಒಂದು ಕಾವಲು ಬೇಲಿಯ ರೀತಿಯಲ್ಲಿ ಕಾಯುತ್ತದೆ. ಅಮೆರಿಕದಲ್ಲಿ ಟ್ರಂಪ್ ಚಾಲ್ತಿಗೆ ತಂದ ರಕ್ಷಣಾತ್ಮಕ ಕ್ರಮಗಳನ್ನು ಮುಂದುವರಿದ ಬಂಡವಾಳಶಾಹಿ ಜಗತ್ತಿಗೆ ಸಾಮಾನ್ಯಗೊಳಿಸುವ ಮೂಲಕ ಈ ಕಾರ್ಯವನ್ನು ಸಾಧಿಸಲಾಗುತ್ತದೆ. ಅದರ ಜೊತೆಗೆ, ತಮ್ಮ ತಮ್ಮ ಅರ್ಥವ್ಯವಸ್ಥೆಗಳಿಗೆ ಆರ್ಥಿಕ ಉತ್ತೇಜನ ಒದಗಿಸುವ ಅವಕಾಶವನ್ನು ಮುಂದುವರಿದ ದೇಶಗಳಿಗೆ ಒದಗಿಸಲಾಗುವುದು. ಹಾಗಾಗಿ, ಈ ದೇಶಗಳಲ್ಲಿ ವರಮಾನಗಳು ಹೆಚ್ಚುತ್ತವೆ ಮತ್ತು ಅದೇ ಸಮಯದಲ್ಲಿ, ಮಿತವ್ಯಯ-ವಿತ್ತ ನೀತಿಗಳನ್ನು ಅನುಸರಿಸುವುದರಿಂದಾಗಿ ಹಾಗೂ ರಫ್ತು ಅವಕಾಶಗಳ ಕೊರತೆಯಿಂದಾಗಿ ಮೂರನೇ ಜಗತ್ತಿನ ದೇಶಗಳ ವರಮಾನಗಳು ಕುಗ್ಗುತ್ತವೆ. ಈ ದೇಶಗಳಲ್ಲಿ ಉತ್ಪಾದನೆಯಾಗುವ ಎಲ್ಲಾ ಪ್ರಾಥಮಿಕ ಸರಕುಗಳ ಬೆಲೆಗಳೂ ಅಲ್ಲಿನ ಜನರ ಆದಾಯಕ್ಕೆ ಸಂಬಂಧಿಸಿರುವುದರಿಂದ ಮತ್ತು ಈ ಸರಕುಗಳಿಗೆ ಉಂಟಾಗುವ ಸ್ಥಳೀಯ ಬೇಡಿಕೆಯನ್ನು ಅಲ್ಲಿನ ಜನರ ಆದಾಯಗಳು ನಿರ್ಧರಿಸುವುದರಿಂದ ಮತ್ತು ಆದಾಯಗಳ ಕುಗ್ಗುವಿಕೆಯಿಂದಾಗಿ ಅಲ್ಲಿನ ಬೇಡಿಕೆಯೂ ಕುಗ್ಗುವುದರಿಂದ ಈ ದೇಶಗಳಲ್ಲಿ ಉತ್ಪಾದನೆಯಾದ ಪ್ರಾಥಮಿಕ ಸರಕುಗಳನ್ನು ಮುಂದುವರಿದ ದೇಶಗಳು ಕೇಳಿದಷ್ಟು ಬೆಲೆಗೆ ರಫ್ತು ಮಾಡುವುದು ಅನಿವಾರ್ಯವಾಗುತ್ತದೆ.

ನವ ಉದಾರವಾದಿ ಬಂಡವಾಳಶಾಹಿಯು ಅಡಿಯಲ್ಲಿ ಮುಂದುವರಿದ ದೇಶಗಳ ಉತ್ಪಾದನೆ-

ಪುಟ 14 ನೋಡಿ



ಹಳೆ ಜಗತ್ತಿನಿಂದ ಹಹೊಸ ಜಗತ್ತಿನತ್ತ-ಐಎಂಎಫ್-ವಿಶ್ವ ಬ್ಯಾಂಕ್ ದಾರಿ
-ಚಿತ್ರಕೃಪೆ: ಬ್ರೆಟ್ಟನ್‌ವುಡ್ಸ್ ಅಬ್ಸರ್ವರ್

ಬಡ ದೇಶಗಳು ಚೇತರಿಸಿಕೊಳ್ಳಲು ಮತ್ತು ಸಮೃದ್ಧಿಯತ್ತ ಸಾಗಲು ಶ್ರೀಮಂತ ದೇಶಗಳು ಸಹಾಯ ಮಾಡುತ್ತವೆ ಎಂಬ ಒಂದು ಸಾಮರಸ್ಯದ ಕನಸನ್ನು ಅನೇಕ ಪ್ರಗತಿಪರ ಅರ್ಥಶಾಸ್ತ್ರಜ್ಞರು ಕಂಡಿದ್ದರು. ಈ ಕನಸು ಉದಾತ್ತವಾದದ್ದು, ನಿಜ. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದು ನನಸಾಗಲು ಶಕ್ಯವಿಲ್ಲ. ಕೊರೊನಾದ ಸಂದರ್ಭದಲ್ಲಿ ಐಎಂಎಫ್ ಅನುಸರಿಸಿದ ಇಬ್ಬಂದಿ ನೀತಿಯು ಈ ಕನಸು ನನಸಾಗಲು ಬಿಡುವುದಿಲ್ಲ ಎಂಬ ಅಂಶವನ್ನು ಒತ್ತಿ ಹೇಳುತ್ತದೆ.



ಐಎಂಎಫ್‌ನ ಇಬ್ಬಂದಿ ನೀತಿ

ಪುಟ 13 ರಿಂದ

ತಯಾರಿಕೆ ಮತ್ತು ಸೇವೆಗಳಿಗೆ ಸಂಬಂಧಿಸಿದ ನಾನಾ ರೀತಿಯ ಕೆಲಸ–ಕಾರ್ಯಗಳನ್ನು ಮೂರನೇ ಜಗತ್ತಿನ ದೇಶಗಳಿಗೆ, ಅದರಲ್ಲೂ ವಿಶೇಷವಾಗಿ ಏಷ್ಯಾದ ದೇಶಗಳಿಗೆ ಸಾಗಿಸಿ ಹಂಚಲಾಗಿತ್ತು. ಅವುಗಳನ್ನು ತುಂಡು ತುಂಡು ಮಾಡಿ ಒಂದೊಂದನ್ನೂ ಬೇರೆ ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಲಾಗುತ್ತಿತ್ತು. ಆದರೆ, ಈಗ ಐಎಂಎಫ್ ಅನುಸರಿಸುತ್ತಿರುವ ರೀತಿ–ನೀತಿಗಳನ್ನು ಗಮನಿಸಿದರೆ, ಈ ತುಂಡು ತುಂಡು ಚಟುವಟಿಕೆ/ಕೆಲಸಗಳ ಮರು–ಜೋಡಣೆಯ ಕಾರ್ಯತಂತ್ರದ ಮುನ್ಸೂಚನೆಯು ಆತಂಕಕಾರಿಯಾಗಿದೆ. ಒಂದು ಕಡೆಯಲ್ಲಿ ಮುಂದುವರಿದ ದೇಶಗಳ ಕಾರ್ಪೋರೇಟ್–ಹಣಕಾಸು ಕುಳಗಳು ತಮ್ಮ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ನಿರುದ್ಯೋಗವನ್ನು ಮತ್ತು ಕೆಲಸಗಾರರ ಸಂಕಷ್ಟಗಳನ್ನು ಪರಿಹರಿಸುವ ಮೂಲಕ ತಮಗೆ ತಟ್ಟಬಹುದಾದ ಹಾನಿಯನ್ನು ತಡೆಯಲು ಹವಣಿಸುತ್ತಿವೆ. ಇನ್ನೊಂದು ಕಡೆಯಲ್ಲಿ. ದೀರ್ಘ ಕಾಲದಿಂದಲೂ ಸ್ಥಗಿತತೆ ಮತ್ತು ಹಿಂಜರಿತಗಳಿಗೆ ಒಳಗಾಗಿರುವ ಮೂರನೇ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಗಳೊಂದಿಗೆ ಅಲ್ಲಿನ ದುಡಿಯುವ ಜನರು ಏಗುತ್ತಿದ್ದಾರೆ. ಆದರೆ, ಈ ದೇಶಗಳ ದೊಡ್ಡ ದೊಡ್ಡ ಬಂಡವಾಳಗಾರರು, ಬೆಂಕಿ ಹತ್ತಿದ ಮನೆಯಿಂದ ಹಿರಿದದ್ದೇ ಲಾಭ ಎನ್ನುವ ರೀತಿಯಲ್ಲಿ, ಮುಂದುವರಿದ ದೇಶಗಳಲ್ಲಿ ಬಂಡವಾಳ ಹೂಡಿ ತಮ್ಮ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳುವಲ್ಲಿ ತೊಡಗಿದ್ದಾರೆ.

ಈ ಸನ್ನಿವೇಶವನ್ನು ವಸಾಹತುಶಾಹಿಯ ಮರುಕಳಿಕೆಯೇ ಎನ್ನಲಡ್ಡಿಯಿಲ್ಲ. ನವ ಉದಾರವಾದಿ ಬಂಡವಾಳವಾದವು ಈ ವರೆಗೆ ಅನುಸರಿಸಿದ ರೀತಿ–ನೀತಿಗಳ ಅಡಿಯಲ್ಲಿ ಮೂರನೇ ಜಗತ್ತಿನ ದುಡಿಯುವ ಜನರು ಪೌಷ್ಟಿಕ ಬಡತನಕ್ಕೆ ಒಳಗಾಗಿದ್ದರೂ ಸಹ, ಕನಿಷ್ಠ ಪಕ್ಷ, ಮುಂದುವರಿದ ದೇಶಗಳ ಚಟುವಟಿಕೆ/ಕೆಲಸಗಳು ಮೂರನೇ ಜಗತ್ತಿನ ದೇಶಗಳಿಗೆ ಸ್ಥಳಾಂತರಗೊಂಡಿದ್ದವು. ಇಂತಹ ಸ್ಥಳಾಂತರಗೊಳ್ಳುವ ಯುಗ ಕೊನೆಗೊಳ್ಳಲಿದೆ. ಚೀನಾ ಮತ್ತು ಅಮೆರಿಕ ದೇಶಗಳ ನಡುವಿನ ದ್ವೇಷವು, ಕೆಲಸಗಳ ಸ್ಥಳಾಂತರವನ್ನು ನಿರುತ್ತೇಜಿಸುವಲ್ಲಿ ಒಂದು ತೆರೆಯನ್ನು ಒದಗಿಸಲಿದೆ. ಪಶ್ಚಿಮ ದೇಶಗಳ ಪ್ರಗತಿಪರ ಅರ್ಥಶಾಸ್ತ್ರಜ್ಞರು ಇಂತಹ ಲಜ್ಜೆಗೆಟ್ಟ ತಾರತಮ್ಯವನ್ನು ಬಯಲಿಗೆಳೆಯುತ್ತಾರೆ ಮತ್ತು ಅದರ ವಿರುದ್ಧ ದನಿ ಎತ್ತುತ್ತಾರೆ. ಅಷ್ಟಾಗಿಯೂ ಈ ತಾರತಮ್ಯವು ಮುಂದುವರಿದದ್ದೇ ಆದರೆ, ಮೂರನೇ ಜಗತ್ತಿನ ದೇಶಗಳು ಇಂತಹ ನಾಚಿಕೆಗೆಟ್ಟ ತಾರತಮ್ಯದ ಜಾಗತಿಕ ವ್ಯವಸ್ಥೆಯಿಂದ ಕಳಚಿಕೊಂಡು ತಮ್ಮ ಬೆಳವಣಿಗೆಯ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ.

ಜಾಗತಿಕ ವ್ಯವಸ್ಥೆಯು ಯಾವತ್ತೂ ಮೂರನೇ ಜಗತ್ತಿನ ದೇಶಗಳ ದುಡಿಯುವ ಜನರನ್ನು ತಾತ್ಸಾರ–ತಾರತಮ್ಯಗಳಿಂದ ಕಂಡಿದೆ, ಆದರೆ ಮುಂದುವರಿದ ದೇಶಗಳ ಚಟುವಟಿಕೆಗಳು ಮೂರನೇ ಜಗತ್ತಿನ ದೇಶಗಳಿಗೆ ಸ್ಥಳಾಂತರಗೊಂಡಿದ್ದರಿಂದಾಗಿ ಎತ್ತರಕ್ಕೆ ಬೆಳೆಯುತ್ತಿದ್ದ ಜಿಡಿಪಿಯ ಹೆಸರಿನಲ್ಲಿ ದುಡಿಯುವ ಜನರ ಕಣ್ಣಿಗೆ ಮಣ್ಣೆರೆಚುವುದು ಸಾಧ್ಯವಾಗಿತ್ತು. ಆದರೆ, ಒಂದು ವೇಳೆ ಉದ್ಯೋಗಗಳ ಸ್ಥಳಾಂತರಗಳಿಗೆ ತಡೆಯುಂಟಾದರೆ, ಅನಿವಾರ್ಯವಾಗಿ ಮೂರನೇ ಜಗತ್ತಿನ ದೇಶಗಳಲ್ಲಿ ಪ್ರತಿರೋಧದ ಅಲೆಗಳು ಏಳುತ್ತವೆ. ಬಡ ದೇಶಗಳು ಚೇತರಿಸಿಕೊಳ್ಳಲು ಮತ್ತು ಸಮೃದ್ಧಿಯತ್ತ ಸಾಗಲು ಶ್ರೀಮಂತ ದೇಶಗಳು ಸಹಾಯ ಮಾಡುತ್ತವೆ ಎಂಬ ಒಂದು ಸಾಮರಸ್ಯದ ಕನಸನ್ನು ಅನೇಕ ಪ್ರಗತಿಪರ ಅರ್ಥಶಾಸ್ತ್ರಜ್ಞರು ಕಂಡಿದ್ದರು. ಈ ಕನಸು ಉದಾತ್ತವಾದದ್ದು, ನಿಜ. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದು ನನಸಾಗಲು ಶಕ್ಯವಿಲ್ಲ. ಕೊರೊನಾದ ಸಂದರ್ಭದಲ್ಲಿ ಐಎಂಎಫ್ ಅನುಸರಿಸಿದ ಇಬ್ಬಂದಿ ನೀತಿಯು ಈ ಕನಸು ನನಸಾಗಲು ಬಿಡುವುದಿಲ್ಲ ಎಂಬ ಅಂಶವನ್ನು ಒತ್ತಿ ಹೇಳುತ್ತದೆ.



ಈಗ ಕಾರ್ಮಿಕ ಸಂಹಿತೆಗಳ ಜಾರಿಯೂ ಮುಂದಕ್ಕೆ?


ಪುಟ 2 ರಿಂದ

10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಎಪ್ರಿಲ್ 1 ರಂದು ದೇಶಾದ್ಯಂತ ಕರಾಳ ಕಾರ್ಮಿಕ ಸಂಹಿತೆಗಳ ಪ್ರತಿಗಳನ್ನು ಸುಟ್ಟು ಪ್ರತಿಭಟನೆ ನಡೆಸಬೇಕು ಎಂದು ಕರೆ ನೀಡಿದ್ದವು.

ಫೆಬ್ರುವರಿ 3, 2021ರಿಂದ ಇಂತಹ ಒಂದು ಸಂಹಿತೆಯ ಕರಡು ನಿಯಮಾವಳಿಗಳ ಬಗ್ಗೆ ತ್ರಿಪಕ್ಷೀಯ ಚರ್ಚೆಗೆಂದು ಸರಕಾರ ಸಭೆ ಕರೆದಿತ್ತು. ಆದರೆ ಸಂಘ ಪರಿವಾರದ ಬಿಎಂಎಸ್ ಬಿಟ್ಟು ಇತರ ಎಲ್ಲ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಅಖಿಲ ಭಾರತ ನೌಕರ/ಕಾರ್ಮಿಕ ಸಂಘಗಳು ಮತ್ತು ಒಕ್ಕೂಟಗಳು ಈ ಸಭೆಯನ್ನು ಬಹಿಷ್ಕರಿಸಿದವು. ಇದು ಸಮಾಲೋಚನೆಯ ಹುಸಿ ಭಾವನೆಯನ್ನುಂಟು ಮಾಡುವ ಒಂದು ನಾಟಕ, ಎಲ್ಲ ನಾಲ್ಕು ಸಂಹಿತೆಗಳಲ್ಲಿ ಪ್ರತಿಯೊಂದನ್ನು ಕುರಿತಂತೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚೆ ನಡೆಸುವ ವರೆಗೆ ಇವೆಲ್ಲವನ್ನೂ ತಡೆ ಹಿಡಿಯಬೇಕು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಆಗ್ರಹಿಸುತ್ತ ಬಂದಿವೆ.

ಸೆಪ್ಟಂಬರ್ 2020ರಲ್ಲಿ ಮೂರು ಕೃಷಿ ಕಾಯ್ದೆಗಳು ಮತ್ತು ಮೂರು ಕಾರ್ಮಿಕ ಸಂಹಿತೆಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಅತ್ಯಂತ ತರಾತುರಿಯಿಂದ ಪಾಸು ಮಾಡಿಸಿಕೊಳ್ಳಲಾಯಿತು ಮತ್ತು ಹತ್ತೇ ದಿನಗಳಲ್ಲಿ ಅವಕ್ಕೆ ರಾಷ್ಟ್ರಪತಿಗಳ ಅಂಕಿತವನ್ನೂ ಪಡೆಯಲಾಯಿತು. ಆದರೆ ರೈತರು ಮತ್ತು ಕಾರ್ಮಿಕರು ಈ ಆರೂ ಕಾಯ್ದೆಗಳ ವಿರುದ್ಧ ಸ್ವತಂತ್ರವಾಗಿ ಮತ್ತು ಜಂಟಿ ಯಾಗಿ ಹೋರಾಟಗಳನ್ನು ನಡೆಸುತ್ತಿದ್ದಾರೆ.

ಇದರಿಂದಾಗಿ, ಭಾರೀ ತರಾತುರಿಯಲ್ಲಿದ್ದ ಮೋದಿ ಸರಕಾರ ಆರು ತಿಂಗಳೊಳಗೆ ಕೃಷಿ ಕಾಯ್ದೆಗಳ ಜಾರಿಯನ್ನು ಮುಂದೂಡಬೇಕಾಗಿ ಬಂತು, ಈಗ ಕಾರ್ಮಿಕ ಸಂಹಿತೆಗಳ ಜಾರಿಯನ್ನೂ ಮುಂದೂಡಿದೆ ಎಂದು ಕಾರ್ಮಿಕ ಮುಖಂಡರು ಹರ್ಷ ವ್ಯಕ್ತಪಡಿಸಿದ್ದಾರೆ.



ದ್ವಿತೀಯ ಮಹಾಯುದ್ಧದ ಸಮಯ 1939-45: ಕಾರ್ಮಿಕ ವರ್ಗದ ಹೋರಾಟಗಳ ಹಾದಿ

ಪುಟ 11 ರಿಂದ

ಸಾಧಿಸುವಲ್ಲಿ ಯಶಸ್ವಿಯಾದರು. ಅದೇ ವರ್ಷದ ಮೇ ತಿಂಗಳಲ್ಲಿ, ಕಲ್ಕತ್ತಾ ಕಾರ್ಪೊರೇಶನ್‌ನ 20,000 ಕಾರ್ಮಿಕರು ತುಟ್ಟಿಭತ್ಯೆಯ ಬೇಡಿಕೆಯ ಮೇರೆಗೆ ಕೆಲಸ ಸ್ಥಗಿತ ಮಾಡಿದರು. 1940 ರಿಂದ 1943 ರವರೆಗೆ ಬಂಗಾಳದ ಸೆಣಬಿನ ಕಾರ್ಮಿಕರು ಮತ್ತೆ ತುಟ್ಟಿ–ಭತ್ಯೆ, ಯುದ್ಧ ಭತ್ಯೆ ಮತ್ತು ಇತರ ರೀತಿಯ ಬೇಡಿಕೆಗಳ ಮೇಲೆ ಹಲವಾರು ಮುಷ್ಕರಗಳಲ್ಲಿ ಭಾಗವಹಿಸಿದರು. ಕಾರ್ಮಿಕರು ತಮ್ಮ ವೇತನ–ಪಾವತಿಮಾಡುವಾಗ ಯುದ್ಧ ನಿಧಿಗೆ ನೀಡುವ ಕೊಡುಗೆಗಳನ್ನು ಬಲವಂತವಾಗಿ ಕಡಿತಗೊಳಿಸುವುದರ ವಿರುದ್ಧವೂ ಹೋರಾಡಿದರು. ಸೆಣಬಿನ ಕಾರ್ಮಿಕರ ಮುಷ್ಕರಗಳಲ್ಲಿ, ಅತ್ಯಂತ ಗಮನಾರ್ಹವಾದವುಗಳೆಂದರೆ: ಮೇ 1941 ರಲ್ಲಿ ಬಾರಾನಗರ್ ಸೆಣಬಿನ ಗಿರಣಿಯ 9,000 ಕಾರ್ಮಿಕರ ಮುಷ್ಕರ, ಅದೇ ವರ್ಷದ ಜುಲೈನಲ್ಲಿ ಆಂಗ್ಲೋ–ಇಂಡಿಯನ್ ಸೆಣಬಿನ ಗಿರಣಿಯಲ್ಲಿ 12,000 ಕಾರ್ಮಿಕರ ಮುಷ್ಕರ, ಹೇಸ್ಟಿಂಗ್ಸ್ ಸೆಣಬಿನ ಗಿರಣಿಯಲ್ಲಿ 1942 ರಲ್ಲಿ 4,500 ಕಾರ್ಮಿಕರ ಮುಷ್ಕರ, ಮತ್ತು ಆಂಡ್ರ್ಯೂ ಯೂಲ್ ಮಿಲ್ಸ್‌ನಲ್ಲಿ 15,000 ಕಾರ್ಮಿಕರ ಮುಷ್ಕರ ಮತ್ತು ಅದೇ ಅವಧಿಯಲ್ಲಿ ಲಾರೆನ್ಸ್, ಹುಕುಮ್‌ಚಂದ್ ಮತ್ತು ಇತರ ಎರಡು ಗಿರಣಿಗಳಲ್ಲಿ 20,000 ಕಾರ್ಮಿಕರ ಮುಷ್ಕರ.

1939–40ರ ಅವಧಿಯಲ್ಲಿ ಡಾಕ್ಕಾ ಜಿಲ್ಲೆಯ ನಾರಾಯಣಗಂಜ್ ಹತ್ತಿ ಗಿರಣಿಗಳಲ್ಲಿ ನಡೆದ ಮುಷ್ಕರಗಳು ವಿಶೇಷವಾಗಿ ಗಮನಾರ್ಹವಾದವು. 1941 ರಲ್ಲಿ ಶೂ ತಯಾರಿಕೆ ಕೈಗಾರಿಕೆಯಲ್ಲಿ 2000 ಕಾರ್ಮಿಕರ ಮುಷ್ಕರ, ಅದೇ ವರ್ಷದಲ್ಲಿ ಬೋನಸ್ ಬೇಡಿಕೆಯ ಮೇರೆಗೆ ಭಾರ್ತಿಯಾ ಎಲೆಕ್ಟ್ರಿಕ್ ಸ್ಟೀಲ್ ವರ್ಕ್ಸ್‌ನ 1,600 ಕಾರ್ಮಿಕರ ಮುಷ್ಕರ, 1942 ರಲ್ಲಿ ಕಲ್ಕತ್ತಾ ಟ್ರಾಮ್‌ವೇಸ್‌ನಲ್ಲಿ, 25 ಪ್ರತಿಶತದಷ್ಟು ತುಟ್ಟಿ–ಭತ್ಯೆ ಮತ್ತು ವಜಾಗೊಳಿಸಿದ ಸಹೋದ್ಯೋಗಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಬೇಡಿಕೆಗಳ ಮೇಲೆ ನಡೆದ 2,000 ಕಾರ್ಮಿಕರ ಮುಷ್ಕರ ಮತ್ತು ಅದೇ ವರ್ಷದಲ್ಲಿ ಕಲ್ಕತ್ತಾ ಕಾರ್ಪೊರೇಶನ್‌ನ 8,000 ಕಾರ್ಮಿಕರ ತುಟ್ಟಿ–ಭತ್ಯೆ ಬೇಡಿಕೆಯ ಮೇರೆಗೆ ನಡೆದ ಮುಷ್ಕರ, ಮತ್ತು ತುಟ್ಟಿ–ಭತ್ಯೆ ಮತ್ತು ನ್ಯಾಯಯುತ ಬೆಲೆಯಲ್ಲಿ ಆಹಾರ ಧಾನ್ಯಗಳ ಪೂರೈಕೆಗೆ ಆಗ್ರಹಿಸಿ ನಡೆದ 2,000 ಬಂದರು ಕಾರ್ಮಿಕರ ಮುಷ್ಕರಗಳು ಗಮನಾರ್ಹವಾಗಿವೆ.

1941 ರಲ್ಲಿ ಬೆಂಗಳೂರಿನ ಜವಳಿ ಕಾರ್ಮಿಕರು ಬೋನಸ್ ಮತ್ತು ವಜಾಗೊಳಿಸಿದ ಸಹೋದ್ಯೋಗಿಗಳನ್ನು ಪುನಃ ನೇಮಿಸಿಕೊಳ್ಳುವ ಬೇಡಿಕೆಗಳ ಮೇಲೆ ಮುಷ್ಕರದಲ್ಲಿ ಪಾಲ್ಗೊಂಡರು, ಮುಷ್ಕರ 75 ದಿನಗಳ ಕಾಲ ನಡೆದು ಯಶಸ್ವಿಯಾಯಿತು. 1942 ರಲ್ಲಿ, ಬೆಂಗಳೂರಿನ ಕಾರ್ಮಿಕರು 'ಕ್ವಿಟ್ ಇಂಡಿಯಾ' ಆಂದೋಲನವನ್ನು ಬೆಂಬಲಿಸುವ ಮುಷ್ಕರಕ್ಕೆ ಸೇರಿದರು.

1942 ರಲ್ಲಿ ಮದ್ರಾಸ್‌ನ ಕರ್ನಾಟಿಕ್ ಗಿರಣಿಗಳ ಕಾರ್ಮಿಕರು ಮುಷ್ಕರವನ್ನು ಆಚರಿಸಿದರು. ಇಂದೋರ್‌ನ 7 ಗಿರಣಿಗಳ ಕಾರ್ಮಿಕರು ಸಹ 13 ದಿನಗಳ ಕಾಲ ನಡೆದ ಮುಷ್ಕರಕ್ಕೆ ಸೇರಿದರು.

ಅಕ್ಟೋಬರ್ 1939 ರಲ್ಲಿ, ಕಾನ್ಪುರದ 30,000 ಕಾರ್ಮಿಕರು ಮುಷ್ಕರ ಮಾಡಿದರು. ತುಟ್ಟಿ ಭತ್ಯೆಯ ಬೇಡಿಕೆಯ ಮೇರೆಗೆ 1940 ರಲ್ಲಿ ಕಾನ್ಪುರದಲ್ಲಿ ಮತ್ತೊಂದು ಮುಷ್ಕರ ಸಂಭವಿಸಿತು.

1939ರಲ್ಲಿ, ದಿಗ್ಬೋಯ್‌ನಲ್ಲಿದ್ದ ಅಸ್ಸಾಂ ಆಯಿಲ್ ಕಂಪನಿಯ ಕಾರ್ಮಿಕರು 8 ತಿಂಗಳ ಕಾಲ ನಡೆದ ಗಮನಾರ್ಹ ಮುಷ್ಕರದಲ್ಲಿ ಸೇರಿಕೊಂಡರು. ಆ ಸಮಯದಲ್ಲಿ ಅಸ್ಸಾಂನಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸಮ್ಮಿಶ್ರ ಮಂತ್ರಿಮಂಡಲವು ವಿವಾದವನ್ನು ಕುರಿತು ವಿಚಾರಣಾ ನ್ಯಾಯಾಲಯವನ್ನು ನೇಮಿಸಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಮುಷ್ಕರವನ್ನು ಬೆಂಬಲಿಸುವ ನಿರ್ಣಯವನ್ನು ಅಂಗೀಕರಿಸಿತು. 1940 ರಲ್ಲಿ ಸಂಭವಿಸಿದ ಟಾಟಾನಗರದಲ್ಲಿನ ಕಾರ್ಮಿಕರ ಮುಷ್ಕರವೂ ಗಮನಾರ್ಹವಾಗಿತ್ತು.

ನವೆಂಬರ್ 1941 ರಂದು ಪ್ರಾರಂಭವಾದ ಜಿ.ಐ.ಪಿ ರೇಲ್ವೆಯ ಪರೇಲ್ ಕಾರ್ಯಾಗಾರದ 6,000 ಕಾರ್ಮಿಕರ ಸ್ಟೇ–ಇನ್–ಮುಷ್ಕರ ವಿಶೇಷವಾಗಿ ಉಲ್ಲೇಖಿಸಬೇಕಾದ ಸಂಗತಿಯಾಗಿದೆ. 1942–43ರ ಅವಧಿಯಲ್ಲಿ ಅದೇ ಪರೇಲ್ ಕಾರ್ಯಾಗಾರದಲ್ಲಿ ಮತ್ತು ಬಿ.ಬಿ. ಮತ್ತು ಸಿ.ಐ. ರೈಲ್ವೆಯ. ಲೋವರ್ ಪರೇಲ್ ಕಾರ್ಯಾಗಾರದಲ್ಲಿ ನ್ಯಾಯಯುತ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಪೂರೈಸುವ ಬೇಡಿಕೆಯ ಮೇಲೆ ಮುಷ್ಕರಗಳು ಸಂಭವಿಸಿದವು.

ಸಾಮ್ರಾಜ್ಯಶಾಹಿ ಯುದ್ಧ ಜನರ ಯುದ್ಧವಾಗಿ ಪರಿವರ್ತನೆಯಾಗುವುದರೊಂದಿಗೆ, ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ ವರ್ಗದ ಮುಂದುವರಿದ ವಿಭಾಗವು ಕೈಗಾರಿಕಾ ಮುಷ್ಕರಗಳ ಹಾದಿಗೆ ಹೋಗುವ ಬದಲು, ಫ್ಯಾಸಿಸ್ಟ್ ಆಕ್ರಮಣಶೀಲತೆಯ ವಿರುದ್ಧ ರಾಷ್ಟ್ರೀಯ ರಕ್ಷಣೆಯ ಕಾರ್ಯಕ್ಕೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವು. ಅದೇ ಸಮಯದಲ್ಲಿ, ಬಂಡವಾಳಶಾಹಿ ಶೋಷಣೆಯ ವಿರುದ್ಧ ಕಾರ್ಮಿಕರ ರಕ್ಷಣೆಗಾಗಿ ಕಮ್ಯುನಿಸ್ಟರು ಹಲವಾರು ಆಂಶಿಕ ಬೇಡಿಕೆಗಳ ಮೇಲೆ ಹಲವಾರು ಕಾರ್ಮಿಕ ವರ್ಗದ ಹೋರಾಟಗಳನ್ನು ಆಯೋಜಿಸಿದರು.

ಯುದ್ಧವು ಅಂತ್ಯಗೊಳ್ಳುತಿದ್ದಾಗ, ಫೆಬ್ರವರಿ 1945 ರಲ್ಲಿ ಶಾಂತಿ–ಒಪ್ಪಂದಗಳ ಬಗ್ಗೆ ಕಾರ್ಮಿಕ ಸಂಘಗಳ ನಿಲುವು, ಶಾಂತಿ ಸಮಾವೇಶದಲ್ಲಿ ಕಾರ್ಮಿಕ ಸಂಘಗಳ ಪ್ರಾತಿನಿಧ್ಯ, ಯುದ್ಧಾನಂತರದ ಪುನರ್ನಿರ್ಮಾಣಕ್ಕಾಗಿ ಕಾರ್ಮಿಕ ವರ್ಗದ ತಕ್ಷಣದ ಬೇಡಿಕೆಗಳು ಮತ್ತು ವರ್ಲ್ಡ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ರಚಿಸುವ ಕುರಿತು ಚರ್ಚಿಸಲು, ವಿಶ್ವ ಟ್ರೇಡ್ ಯೂನಿಯನ್ ಅಧಿವೇಶನವನ್ನು ಲಂಡನ್‌ನಲ್ಲಿ ಸೇರಿಸಲಾಯಿತು. ಎಐಟಿಯುಸಿ ಪರವಾಗಿ ವಿಶ್ವ ಸಮ್ಮೇಳನದಲ್ಲಿ ಎಸ್.ಎ. ಡಾಂಗೆ ಮತ್ತು ಇತರರನ್ನು ಒಳಗೊಂಡ ನಿಯೋಗ ಭಾಗವಹಿಸಿತು. ತರುವಾಯ ಅದೇ ವರ್ಷದ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ವಿಶ್ವ ಟ್ರೇಡ್ ಯೂನಿಯನ್ ಅಧಿವೇಶನ ಪ್ಯಾರಿಸ್‌ನಲ್ಲಿ ನಡೆಯಿತು, ಇದರಲ್ಲಿ ವರ್ಲ್ಡ್ ಫೇಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ಜನನವಾಯಿತು.

ಸಂಘಟನಾತ್ಮಕ ಮುನ್ನಡೆ

ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಈ ಅವಧಿಯಲ್ಲಿ ಗಮನಾರ್ಹ ಸಂಘಟನಾತ್ಮಕ ಪ್ರಗತಿಯನ್ನು ಸಾಧಿಸಿತು. ಭಾರತದ ಟ್ರೇಡ್ ಯೂನಿಯನ್ ಕಾಯ್ದೆ 1926 ರಲ್ಲಿ ನೊಂದಾಯಿತ ಸಂಘಗಳ ಸಂಖ್ಯೆ 1938–39ರ ಅವಧಿಯಲ್ಲಿ 568 ಆಗಿದ್ದರೆ, 1945–46ರ ಅವಧಿಯ 1087 ರಷ್ಟಿತ್ತು. ಸಲ್ಲಿಸಿದ ಮಾಹಿತಿ–ಪತ್ರಗಳ (ರಿರ್ಟನ್ಸ್) ಪ್ರಕಾರ ಸದಸ್ಯತ್ವವು ಆ ಅವಧಿಯಲ್ಲಿ 399,159 ರಿಂದ 864,031 ಕ್ಕೆ ಏರಿಕೆಯಾಯಿತು.

ಅಂತಿಮವಾಗಿ ಎರಡನೆಯ ಮಹಾಯುದ್ಧದ ಅಂತ್ಯದ ಸಮಯದಲ್ಲಿ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ 700,000 ಸದಸ್ಯರ ಸಂಘಟಿತ ಬಲವನ್ನು ಹೊಂದಿದ್ದ ಭಾರತದ ಕಾರ್ಮಿಕ ವರ್ಗದ ಐಕ್ಯಕ ಅಣಿನೆರೆಯುವಿಕೆಯ ಕೇಂದ್ರವಾಗಿ ಹೊಮ್ಮಿತು.

ಇದು ವ್ಯಾಕ್ಸೀನ್ ರಾಷ್ಟ್ರವಾದವಲ್ಲ, ವ್ಯಾಕ್ಸೀನ್ ವರ್ಣಬೇಧ!!



ಜಗತ್ತಿನ ಶೇ. 16 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಶ್ರೀಮಂತ ದೇಶ/ಪ್ರದೇಶಗಳು (ಯು.ಎಸ್, ಕೆನಡಾ, ಯುಕೆ, ಯುರೋ ಕೂಟ) ಜಾಗತಿಕ ವ್ಯಾಕ್ಸೀನ್ ಪೂರೈಕೆಯ ಅರ್ಧದಷ್ಟನ್ನು ಬಾಚಿಕೊಂಡಿವೆ. ಯು.ಎಸ್ ಒಂದೇ ಪಡೆದ ವ್ಯಾಕ್ಸೀನ್, ಅದರ ನಾಲ್ಕರಷ್ಟು ಜನ ಸಂಖ್ಯೆ ಹೊಂದಿರುವ ಇಡೀ ಆಫ್ರಿಕಾ ಖಂಡದ 14 ಪಟ್ಟು! ಎಲ್ಲ ವ್ಯಾಕ್ಸೀನ್ ಉತ್ಪಾದನೆಯನ್ನು ಬಾಚಿಕೊಳ್ಳುತ್ತಿರುವ ಈ ಶ್ರೀಮಂತ ದೇಶ/ಪ್ರದೇಶಗಳು ಉತ್ಪಾದಿತ ವ್ಯಾಕ್ಸೀನಿನ ರಫ್ತು ಮೇಲೆ ಕಟ್ಟುನಿಟ್ಟಿನ ನಿಷೇಧ ಹೇರಿವೆ. ಮಾತ್ರವಲ್ಲ ಇತರೆಡೆ ವ್ಯಾಕ್ಸೀನ್ ಉತ್ಪಾದನೆಗೆ ಬೇಕಾದ ಮಧ್ಯಂತರ ಉತ್ಪನ್ನಗಳ ಮತ್ತು ಕಚ್ಚಾ ವಸ್ತುಗಳ ರಫ್ತಿನ ಮೇಲೂ ನಿಷೇಧ ಹೇರಿವೆ. ಇದನ್ನು ತೆರವು ಮಾಡದಿದ್ದರೆ, ವ್ಯಾಕ್ಸೀನ್ ನ ಜಾಗತಿಕ ಉತ್ಪಾದನಾ ಸರಣಿಯ ಕುರಿತು ಶ್ರೀಮಂತ ದೇಶಗಳು ತಮ್ಮ ಸ್ವಾರ್ಥಿ ದೃಷ್ಟಿಕೋಣ ಬಿಟ್ಟು ಸಮಗ್ರ ದೃಷ್ಟಿಕೋಣ ಹೊಂದದಿದ್ದರೆ, ಕೊವಿದ್ ನ್ನು ಸೋಲಿಸುವುದು ಆಗದ ಮಾತು. ಜಗತ್ತಿನ ಎಲ್ಲ ದೇಶಗಳಲ್ಲಿ ವ್ಯಾಕ್ಸೀನ್ ಲಭ್ಯತೆ ಮೂಲಕ ಕೊವಿದ್ ಮೂಲೋತ್ಪಾಟನೆ ಆಗದಿದ್ದರೆ (ಶ್ರೀಮಂತ ದೇಶಗಳ ಜನರಿಗೆ ಸೇರಿದಂತೆ) ಇಡೀ ಮನುಕುಲಕ್ಕೇ ಅಪಾಯ ಎನ್ನುವ ಪ್ರಾಥಮಿಕ ಪ್ರಜ್ಞೆ ಸಹ ಇವುಗಳಿಗೆ ಇದ್ದಂತಿಲ್ಲ. ಈ ಶ್ರೀಮಂತ ದೇಶಗಳ ಸರಕಾರಗಳು ಮತ್ತು ಆಳುವವರಿಗೆ ಕೆಲವು ದೈತ್ಯ ಔಷಧಿ ಕಂಪನಿಗಳ ಶತಕೋಟ್ಯಾಂತರ ಡಾಲರುಗಳ ಲಾಭವೇ ಆದ್ಯತೆ. ನೂರಾರೂ ಕೋಟಿ ಜನರ ಜೀವ ರಕ್ಷಣೆಯಲ್ಲ. ಇದು 'ವ್ಯಾಕ್ಸೀನ್ ರಾಷ್ಟ್ರವಾದ' ವಲ್ಲ, 'ವ್ಯಾಕ್ಸೀನ್ ವರ್ಣಬೇಧ'!!



ವಸಂತರಾಜ ಎನ್.ಕೆ.

ಇತ್ತೀಚೆಗೆ ಕೋವಿದ್–19 ವ್ಯಾಕ್ಸೀನ್ ಅಭಿವೃದ್ಧಿಪಡಿಸಿ ಉತ್ಪಾದಿಸಬಲ್ಲ ದೈತ್ಯ ಔಷಧಿ ಕಂಪನಿಗಳು ಮತ್ತು ಅವುಗಳ ಬೆನ್ನಿಗೆ ನಿಂತಿರುವ ಆಯಾ ಅಭಿವೃದ್ಧ ದೇಶಗಳ ಸರಕಾರಗಳ ನಡುವೆ ನಡೆದ ಘರ್ಷಣೆಗಳನ್ನು 'ವ್ಯಾಕ್ಸೀನ್ ರಾಷ್ಟ್ರವಾದ' ಎಂದು ಕರೆಯಲಾಗುತ್ತಿತ್ತು. ಆದರೆ ಈಗಿನ ವಿವಿಧ ದೇಶಗಳ ಅಗತ್ಯಗಳು ಮತ್ತು ಜಾಗತಿಕ ವ್ಯಾಕ್ಸೀನ್ ಹಂಚಿಕೆಯ ಪ್ರಮಾಣಗಳ ಅಂಕೆಸಂಖ್ಯೆಗಳನ್ನು ನೋಡಿದರೆ, ಅದನ್ನು ಬೇರೆ ರೀತಿಯಲ್ಲಿ ವರ್ಣಿಸುವ ಅಗತ್ಯ ಕಂಡು ಬರುತ್ತಿದೆ. ಕೋಷ್ಟಕ 1 ರಲ್ಲಿ ಕಳೆದ ತಿಂಗಳ (ಮಾರ್ಚ್) ಕೊನೆವರೆಗಿನ ಜಾಗತಿಕ ಕೊವಿದ್–19 ವ್ಯಾಕ್ಸೀನ್ ಹಂಚಿಕೆಯ ಅಂಕೆಸಂಖ್ಯೆಗಳಿವೆ. ಅದರ ಪ್ರಕಾರ ಜಗತ್ತಿನ ಶೇ. 16 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಶ್ರೀಮಂತ ದೇಶ/ಪ್ರದೇಶಗಳು (ಯು.ಎಸ್, ಕೆನಡಾ, ಯುಕೆ, ಯುರೋ ಕೂಟ) ಜಾಗತಿಕ ವ್ಯಾಕ್ಸೀನ್ ಪೂರೈಕೆಯ ಅರ್ಧದಷ್ಟನ್ನು ಬಾಚಿಕೊಂಡಿವೆ. ಯು.ಎಸ್ ಒಂದೇ ಪಡೆದ ವ್ಯಾಕ್ಸೀನ್, ಅದರ ನಾಲ್ಕರಷ್ಟು ಜನ ಸಂಖ್ಯೆ ಹೊಂದಿರುವ ಇಡೀ ಆಫ್ರಿಕಾ ಖಂಡದ 14 ಪಟ್ಟು! ಆಫ್ರಿಕಾದ ಮುಖ್ಯ ಅಥವಾ ಪ್ರಾತಿನಿಧಿಕ ಭಾಗವಲ್ಲದ ಮೊರೊಕ್ಕೊ ವನ್ನು ಬಿಟ್ಟರೆ, ಯು.ಎಸ್ ಆಫ್ರಿಕಾದ 60 ಪಟ್ಟಷ್ಟು ವ್ಯಾಕ್ಸೀನನ್ನು ಬಾಚಿಕೊಂಡಿದೆ. ಜಗತ್ತಿನ ಕೇವಲ ಶೇ. 4 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಯು.ಎಸ್, ಜಾಗತಿಕ ವ್ಯಾಕ್ಸೀನಿನ ಶೇ. 30ನ್ನು ಕಬಳಿಸಿದೆ. ಇಂತಹ ಹಂಚಿಕೆಯನ್ನೇ ಡಬ್ಲ್ಯೂ.ಎಚ್.ಓ ಡೈರೆಕ್ಟರ್ ಜನರಲ್ ಗೆಬ್ರೆಯೆಸಸ್ 'ವಿಕೃತ' ಎಂದು ಕರೆದದ್ದು. ಅಭಾವ ಇರುವ ಅಗತ್ಯ ಔಷಧಿ ಪೂರೈಕೆಯ ಬಹುಭಾಗವನ್ನು ಮಾಜಿ ವಸಾಹತು ಮತ್ತು ಹಾಲಿ ಶ್ರೀಮಂತ ದೇಶಗಳು ಕಾದಿರಿಸಿಕೊಳ್ಳುವುದನ್ನು 'ವ್ಯಾಕ್ಸೀನ್ ರಾಷ್ಟ್ರವಾದ' ವಲ್ಲ, 'ವ್ಯಾಕ್ಸೀನ್ ವರ್ಣಬೇಧ' ಎಂದು ಕರೆಯಬೇಕು!

ಇನ್ನು ಕೋಷ್ಟಕ 2 ರಲ್ಲಿ ಕಳೆದ ತಿಂಗಳ (ಮಾರ್ಚ್) ಕೊನೆವರೆಗೆ ಈ ಶ್ರೀಮಂತ ದೇಶಗಳ ಯಾವ ದೈತ್ಯ ಔಷಧಿ ಕಂಪನಿ ಎಷ್ಟು ಕೋವಿದ್–19 ವ್ಯಾಕ್ಸೀನ್ ಉತ್ಪಾದಿಸಿದೆ ಎಂದು ನೋಡಬಹುದು. ಕೋಷ್ಟಕ 1 ಮತ್ತು 2ನ್ನು ಒಟ್ಟಾಗಿ ನೋಡಿದರೆ ಇವುಗಳಲ್ಲಿ ಶೇ.90 ಪೂರೈಕೆ ಇವೇ ಶ್ರೀಮಂತ ದೇಶಗಳಿಗೆ ಹೋಗಿದೆ. ಈ ಶ್ರೀಮಂತ ದೇಶಗಳೊಳಗೆ ಈ ಪೂರೈಕೆ ಹಂಚಿಕೊಳ್ಳುವುದು ಹೇಗೆ (ಉದಾ: ಆಸ್ಟ್ರಾಜೆನೆಕಾ ಹಂಚಿಕೆ ಬಗ್ಗೆ ಯುಕೆ ಮತ್ತು ಯುರೋ ಕೂಟದ ನಡುವೆ ವಿವಾದ) ಎಂಬುದರ ಕುರಿತು ಕೋಳಿಜಗಳ ಆಗಿದೆ. ಹಾಗಾದರೆ ಉಳಿದ ಬಹುಸಂಖ್ಯಾತ ಜನರಿರುವ ಮತ್ತು ಸ್ವಂತ ಉತ್ಪಾದನಾ ಸಾಮರ್ಥ್ಯ ಇಲ್ಲದ ಲ್ಯಾಟೀನ್ ಅಮೆರಿಕ, ಆಫ್ರಿಕಾ, ಪೂ.ಯುರೋಪ್, ಏಶ್ಯಾದ ದೇಶಗಳಿಗೆ ವ್ಯಾಕ್ಸೀನ್ ಪೂರೈಕೆ ಮಾಡುವುದು ಯಾರು ಎಂಬ ಪ್ರಶ್ನೆ ಎದುರಾಗಿದೆ. ಸದ್ಯಕ್ಕೆ ಚೀನಾ, ಭಾರತ ಮತ್ತು ಸ್ವಲ್ಪ ಮಟ್ಟಿಗೆ ರಶ್ಯಾ ತಮ್ಮ ಅಗತ್ಯಗಳ ಜೊತೆಗೆ ಬಡದೇಶಗಳಿಗೂ ಪೂರೈಕೆ ಮಾಡುತ್ತಿವೆ. ಚೀನಾ ತನ್ನ ಸಿನೊವಾಕ್ ಮತ್ತು ಸಿನೊಫಾರ್ಮ್ ಉತ್ಪಾದನೆಯ ಶೇ.50ನ್ನು (23 ಕೋಟಿ ಡೋಸುಗಳಲ್ಲಿ 11.5 ಕೋಟಿ), ಭಾರತ ತನ್ನ ಉತ್ಪಾದನೆಯ ಸುಮಾರು ಶೇ. 43 ರಷ್ಟನ್ನು (15 ಕೋಟಿ ಡೋಸುಗಳಲ್ಲಿ 6.5 ಕೋಟಿ) ಈ ದೇಶಗಳಿಗೆ ಪೂರೈಕೆ ಮಾಡುತ್ತಿವೆ. ಆದರೆ ಇದು ಏನೇನೂ ಸಾಲದು ಎಂಬುದು ಸ್ಪಷ್ಟ.

ರಶ್ಯಾದ ಸ್ಪುಟ್ನಿಕ್ ವಿ ಪರೀಕ್ಷಣೆಯ ಹಂತ ದಾಟುತ್ತಿದ್ದು ಸಾಮೂಹಿಕ ಉತ್ಪಾದನೆಗೆ ತಯಾರಾಗುತ್ತಿದೆ. ಭಾರತ ಮತ್ತು ದ.ಕೊರಿಯಾದ ಹಲವು ಕಂಪನಿಗಳ ಜೊತೆ ಸಹಯೋಗದಲ್ಲಿ 85 ಕೋಟಿ ಡೋಸುಗಳ ಉತ್ಪಾದನೆಗೆ ಯೋಜಿಸುತ್ತಿದೆ. ಭಾರತ ರಫ್ತನ್ನು ಇನ್ನೂ ನಿಲ್ಲಿಸಿಲ್ಲವಾದರೂ ಎರಡನೆಯ ಅಲೆಯ ಗಂಭೀರ ಸವಾಲಿನಿಂದಾಗಿ ದೇಶೀಯವಾಗಿ ವ್ಯಾಕ್ಸೀನು ಪೂರೈಕೆ ಹೆಚ್ಚಿಸಲು ಆದ್ಯತೆ ಕೊಡುವ ಸಾಧ್ಯತೆಯಿದೆ. ಆದ್ದರಿಂದ ಭಾರತದ ರಫ್ತು ಮಂದಗತಿಯಲ್ಲಿ ಮುಂದುವರೆಯಬಹುದು. ಜಗತ್ತಿನ ಅತಿ ದೊಡ್ಡ ವ್ಯಾಕ್ಸೀನ್ ಉತ್ಪಾದಕ ಸ್ಥಾವರ ಹೊಂದಿರುವ ಭಾರತದ ಸೇರಂ ಇನ್ಸ್ಟಿಟ್ಯೂಟ್ ತಿಂಗಳಿಗೆ 10 ಕೋಟಿ ಡೋಸುಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಸಾಮರ್ಥ್ಯವನ್ನು ಅದು

ದೇಶ/ಪ್ರದೇಶ	ಜನಸಂಖ್ಯೆ (ದಶಲಕ್ಷ)	ವ್ಯಾಕ್ಸೀನ್ ಡೋಸುಗಳು (ದಶಲಕ್ಷ)	ವ್ಯಾಕ್ಸೀನಾದ ಜನಸಂಖ್ಯೆಯ ಪ್ರಮಾಣ (ಶೇಕಡಾ)
ಯು.ಎಸ್/ಕೆನಡಾ	368.7	153.1	41.5
ಯು.ಕೆ	68	34.5	50.8
ಯುರೋಪ್ ಕೂಟ	445	72.2	16.2
ಇತರ ಯುರೋಪ್	237	16.6	7.0
ಲ್ಯಾಟಿನ್ ಅಮೆರಿಕ	654.1	45.7	7.0
ಚೀನಾ	1140	115	8.0
ಭಾರತ	1380	63.1	4.6
ಇತರ ಏಶ್ಯಾ (ಚೀನಾ, ಭಾರತ ಬಿಟ್ಟು)	1820	66.8	3.7
ಆಫ್ರಿಕಾ	1340	10.3	0.8
ಒಟ್ಟು	**4592.8**	**500.2**	**10.9**

ಕೋಷ್ಟಕ–1 (ಮೂಲ: **OurWorldinData https://ourworldindata.org/covid-vaccinations** ಮಾರ್ಚ್ 30, 2021 ವರೆಗೆ)

20 ಕೋಟಿ ಡೋಸಿಗೆ ದುಪ್ಪಟ್ಟು ಮಾಡಬಲ್ಲದು. ಅದು ಯಾಕೆ ಅದನ್ನು ಮಾಡಲಾಗುತ್ತಿಲ್ಲ? ಅದೇ ರೀತಿ ಜಾನ್ಸನ್ ಅಂಡ್ ಜಾನ್ಸನ್ ಜೊತೆಗೆ 60 ಕೋಟಿ ಡೋಸುಗಳ ಉತ್ಪಾದನಾ ಸಹಯೋಗ ಒಪ್ಪಂದ ಮಾಡಿಕೊಂಡಿರುವ ಮತ್ತು ಅದಕ್ಕೆ ಬೇಕಾದ ಅನುಮತಿ ಪಡೆದಿರುವ ಭಾರತದ 'ಬಯೋಲಾಜಿಕ್ ಇ' ಇನ್ನೂ ಯಾಕೆ ಉತ್ಪಾದನೆ ಆರಂಭಿಸಿಲ್ಲ?

ಇದಕ್ಕೆ ಕಾರಣವೇನು ಎಂದು ಜಗತ್ತಿನ ಜನರಿಗೆ ಗೊತ್ತಾಗದಂತೆ ಶ್ರೀಮಂತ ದೇಶದ ಸರಕಾರಗಳು ಮಾತ್ರವಲ್ಲ, ಪಾಶ್ಚಿಮಾತ್ಯ ದೈತ್ಯ ಮಾಧ್ಯಮಗಳ ಅಧಿಪತ್ಯದಲ್ಲಿರುವ (ಭಾರತದ ಮಾಧ್ಯಮಗಳು ಸೇರಿದಂತೆ) ಜಾಗತಿಕ ಮಾಧ್ಯಮಗಳು ಸಹ ಮುಚ್ಚಿಡುತ್ತಿವೆ. ಎಲ್ಲ ವ್ಯಾಕ್ಸೀನ್ ಉತ್ಪಾದನೆಯನ್ನು ಬಾಚಿಕೊಳ್ಳುತ್ತಿರುವ ಮೇಲೆ ಹೇಳಿದ ಶ್ರೀಮಂತ ದೇಶ/ಪ್ರದೇಶಗಳು (ಯು.ಎಸ್, ಕೆನಡಾ, ಯುಕೆ, ಯುರೋ ಕೂಟ) ಉತ್ಪಾದಿತ ವ್ಯಾಕ್ಸೀನಿನ ರಫ್ತು ಮೇಲೆ ಕಟ್ಟುನಿಟ್ಟಿನ ನಿಷೇಧ ಹೇರಿವೆ. ಮಾತ್ರವಲ್ಲ ಇತರೆಡೆ ವ್ಯಾಕ್ಸೀನ್ ಉತ್ಪಾದನೆಗೆ ಬೇಕಾದ ಮಧ್ಯಂತರ ಉತ್ಪನ್ನಗಳ ಮತ್ತು ಕಚ್ಚಾ ವಸ್ತುಗಳ ರಫ್ತಿನ ಮೇಲೂ ನಿಷೇಧ ಹೇರಿವೆ.

ಅಮೆರಿಕ ಈ ನಿಷೇಧವನ್ನು 1950ರ ಕೊರಿಯಾ ಯುದ್ಧದ ಕಾಲದಲ್ಲಿ ತರಲಾದ ರಕ್ಷಣಾ ಉತ್ಪಾದನಾ ಕಾಯಿದೆಯನ್ನು ಬಳಸಿ ಕೊವಿದ್ ವ್ಯಾಕ್ಸೀನು, ಅದರ ಉತ್ಪಾದನೆಗೆ ಬೇಕಾದ ಮಧ್ಯಂತರ ಉತ್ಪನ್ನಗಳು, ಕಚ್ಚಾ ವಸ್ತುಗಳು ಮತ್ತು ಇತರ ಲಾಗುವಾಡುಗಳ ರಫ್ತನ್ನು ನಿಷೇಧಿಸಿದೆ! ವ್ಹಾ ವ್ಹಾ! ಜಗತ್ತಿನ ಜನರಿಗಾಗಿ

ಕಂಪನಿ	ಡೋಸುಗಳು (ದಶಲಕ್ಷಗಳಲ್ಲಿ)	ಜಾಗತಿಕ ಉತ್ಪಾದನೆಯ ಪ್ರಮಾಣ (ಶೇಕಡಾ)
ಫೈಝರ್	192.3	26.8%
ಆಸ್ಟ್ರಾಜೆನೆಕಾ	187.3	26.1
ಸಿನೊವ್ಯಾಕ್	57.1	21.9
ಮೋಡರ್ನಾ	85.0	11.8
ಸಿನೊಫಾರ್ಮ್	71.4	10.0
ಸ್ಪುಟ್ನಿಕ್	14.7	2.0%
ಭಾರತ್ ಬಯೋಟೆಕ್	5.6	0.8%
ಜಾನ್ಸನ್ ಅಂಡ್ ಜಾನ್ಸನ್	2.0	0.3%
ಕ್ಯಾನ್ಸಿನೊ	2.0	0.3%
ಒಟ್ಟು	**717.4**	**100.0%**

ಕೋಷ್ಟಕ–2 (ಮೂಲ : **https://www.airfinity.com/data-studio** ಮಾರ್ಚ್ 29, 2021 ವರೆಗೆ)

ವ್ಯಾಕ್ಸೀನ್ ಉತ್ಪಾದನೆಯು ಯು.ಎಸ್ ರಕ್ಷಣೆಗೆ ಮಾರಕವಾಗಿದೆ!! ಪುಣೆಯ ಸೇರಂ ಇನ್ಸ್ಟಿಟ್ಯೂಟ್ ತಿಂಗಳಿಗೆ 10–20 ಕೋಟಿ ಡೋಸುಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದ್ದು ಈಗ ಬರಿಯ 6 ಕೋಟಿ ಡೋಸಿಗೆ ಯಾಕೆ ಸೀಮಿತವಾಗಿದೆ. ಈ ಸಂಸ್ಥೆಯ ಪ್ರಕಾಶ ಕುಮಾರ್ ಸಿಂಗ್ ಮತ್ತು ಮುಖ್ಯಸ್ಥ ಅದರ್ ಪೂನಾವಾಲಾ, ಅಮೆರಿಕದ ಈ ನಿಷೇಧ ಕೊವಿದ್–ಶೀಲ್ಡ್ ಉತಾದನೆ ಹೆಚ್ಚಿಸಲು ಮಾತ್ರವಲ್ಲ, ಅದು ಉತ್ಪಾದಿಸಬೇಕೆಂದಿರುವ 100 ಕೋಟಿ ನೊವಿವ್ಯಾಕ್ಸ್ ಡೋಸುಗಳ ಉತ್ಪಾದನೆಗೆ ತೀವ್ರ ತೊಡಕುಗಳನ್ನು ಉಂಟು ಮಾಡುತ್ತದೆ, ಎಂದು ಭಾರತ ಸರಕಾರಕ್ಕೆ ಈ ಮಾರ್ಚ್‌ನಲ್ಲಿ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಈ ಕುರಿತು ಕ್ರಮ ಕೈಗೊಳ್ಳದೆ 'ಎಲ್ಲರಿಗೂ ಮುಕ್ತವಾದ ಜಾಗತಿಕ ವ್ಯಾಕ್ಸೀನ್' ಬಗ್ಗೆ ಮಾತು ಅರ್ಥಹೀನವಾಗುತ್ತದೆ ಎಂದಿದ್ದಾರೆ.

ಅದೇ ರೀತಿ ಜಾನ್ಸನ್ ಅಂಡ್ ಜಾನ್ಸನ್ ನ ಸಹಯೋಗದಲ್ಲಿ 60 ಕೋಟಿ ಡೋಸುಗಳ ಒಂದೇ ಡೋಸಿನ ವ್ಯಾಕ್ಸೀನ್ ಉತ್ಪಾದನೆಯ ಯೋಜನೆ ಹಾಕಿಕೊಂಡಿರುವ 'ಬಯೊಲಾಜಿಕಲ್ ಇ'ಯ ಮಹಿಮಾ ದಾತ್ಲಾ ಸಹ ಅಮೆರಿಕದ ಈ ನಿಷೇಧ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಕೊವಿದ್ ವ್ಯಾಕ್ಸೀನಿನ ಉತ್ಪಾದನೆಗೆ ಬೇಕಾದ ಹಲವು ಉತ್ಪನ್ನಗಳು, ವಸ್ತುಗಳ ಉತ್ಪಾದನೆ ಮಾಡಬಲ್ಲ ಕಂಪನಿಗಳು ಬೆರಳೆಣಿಕೆಯಲ್ಲಿದ್ದು ಇವೆಲ್ಲ ಅಮೆರಿಕದ ಈ ನಿಷೇಧಕ್ಕೆ ಒಳಗಾಗಿವೆ. ಇದನ್ನು ತೆರವು ಮಾಡದಿದ್ದರೆ, ವ್ಯಾಕ್ಸೀನ್ ನ ಜಾಗತಿಕ ಉತ್ಪಾದನಾ ಸರಣಿಯ ಕುರಿತು ಶ್ರೀಮಂತ ದೇಶಗಳು ತಮ್ಮ ಸ್ವಾರ್ಥಿ ದೃಷ್ಟಿಕೋಣ ಬಿಟ್ಟು ಸಮಗ್ರ ದೃಷ್ಟಿಕೋಣ ಹೊಂದದಿದ್ದರೆ, ಕೊವಿದ್ ನ್ನು ಭಾರತದಲ್ಲಿ ಅಥವಾ ಜಗತ್ತಿನಲ್ಲಿ ಸೋಲಿಸುವುದು ಆಗದ ಮಾತು ಎಂದು ದಾತ್ಲಾ ಫೈನಾನ್ಶಿಯಲ್ ಟೈಮ್ಸ್ ಗೆ ಕೊಟ್ಟ ಸಂದರ್ಶನದಲ್ಲಿ ಹೇಳಿದ್ದಾರೆ.

ಭಾರತ ಸರಕಾರ ಇತ್ತೀಚಿನ 'ಕ್ವಾಡ್' (ಯು.ಎಸ್, ಜಪಾನ್, ಆಸ್ಟ್ರೇಲಿಯಾ, ಭಾರತ 4 ದೇಶಗಳ) ಕೂಟದ ಶೃಂಗಸಭೆಯಲ್ಲಿ ತಾನು ಈ ಕೂಟದ ಕೊವಿದ್ ವ್ಯಾಕ್ಸೀನ್ ಪೂರೈಕೆದಾರ ಆಗುವ ಕುರಿತು ಹೆಮ್ಮೆಯಲ್ಲಿ 'ಸ್ಪಿರಿಟ್ ಆಫ್ ಕ್ವಾಡ್' ದಸ್ತಾವೇಜಿನಲ್ಲಿ ಹೇಳಿಕೊಂಡಿತ್ತು. ಆದರೆ ಅದಕ್ಕೆ ತೊಡಕಾಗಬಹುದಾದ ಯು.ಎಸ್ ನೀತಿಯ ಕುರಿತು ಚಕಾರವೆತ್ತದೆ ಸುಮ್ಮನಿದೆ. ಹಾಗಾದರೆ ಕೊವಿದ್ ವ್ಯಾಕ್ಸೀನ್ ಪೂರೈಕೆದಾರ ಎಂಬ ಹೇಳಿಕೆ ಸಾಂದರ್ಭಿಕ ದಸ್ತಾವೇಜಿಗೆ ಸೀಮಿತವಾದದ್ದೇ. ಅದರ ನಂತರ ಭಾರತದ ವ್ಯಾಕ್ಸೀನ್ ರಫ್ತು ಹೆಚ್ಚುವ ಬದಲು ಯು.ಎಸ್ ನ ತೊಡಕಿನಿಂದಾಗಿ ಇನ್ನಷ್ಟು ಮಂದಗತಿಗೆ ಹೋಗುವ ಸಾಧ್ಯತೆಯಿದೆ.

ಇದು ಸಾಲದೆಂಬಂತೆ ಒಂದು ಕಡೆ ಶ್ರೀಮಂತ ದೇಶಗಳ ಸರಕಾರಗಳು, ಕಂಪನಿಗಳು ಮತ್ತು ಮಾಧ್ಯಮಗಳು, (ತಮ್ಮ ದೇಶಗಳಿಗಾಗಿ ಹೊರತಾಗಿ) ಇತರ ದೇಶಗಳಿಗೆ (ಭಾರತದಲ್ಲಿ ಸೇರಿದಂತೆ) ಜಾಗತಿಕ ವ್ಯಾಕ್ಸೀನ್ ಉತ್ಪಾದನೆಗೆ ತೊಡಕು ಮಾಡುತ್ತಿವೆ. ಇನ್ನೊಂದು ಕಡೆ ಈ ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸುತ್ತಿರುವವರ – ಪ್ರಧಾನವಾಗಿ ಚೀನಾ ಮತ್ತು ರಶ್ಯಾ ಗಳ – ವ್ಯಾಕ್ಸೀನ್ ವಿರುದ್ಧ ಅಪಪ್ರಚಾರ ಹರಿಯಬಿಟ್ಟಿವೆ. ಆ ಮೂಲಕ ಇಡೀ ಜಗತ್ತಿಗೆ ವ್ಯಾಕ್ಸೀನ್ ಸಿಗದಂತೆ ಎಲ್ಲಿಲ್ಲದ ಪ್ರಯತ್ನ ಮಾಡುತ್ತಿವೆ. ಕೊವಿದ್ ವಿರುದ್ಧ ಜಾಗತಿಕ ಹೋರಾಟ ನಡೆಸಿ ಅದರ ಮೂಲೋತ್ಪಾಟನೆ ಮಾಡುವ ಪ್ರಯತ್ನಕ್ಕೆ ಅಡ್ಡಿಯಾಗುತ್ತಿವೆ. ಜಗತ್ತಿನ ಎಲ್ಲ ದೇಶಗಳಲ್ಲಿ ವ್ಯಾಕ್ಸೀನ್ ಲಭ್ಯತೆ ಮೂಲಕ ಕೊವಿದ್ ಮೂಲೋತ್ಪಾಟನೆ ಆಗದಿದ್ದರೆ (ಶ್ರೀಮಂತ ದೇಶಗಳ ಜನರಿಗೆ ಸೇರಿದಂತೆ) ಇಡೀ ಮನುಕುಲಕ್ಕೇ ಅಪಾಯ ಎನ್ನುವ ಪ್ರಾಥಮಿಕ ಪ್ರಜ್ಞೆ ಸಹ ಇವುಗಳಿಗೆ ಇದ್ದಂತಿಲ್ಲ.

ಜಗತ್ತಿನ ಬಡದೇಶಗಳಿಗೆ ಕೊವಿದ್ ವ್ಯಾಕ್ಸೀನ್ ಪೂರೈಕೆಯ ಉದ್ದೇಶವಿರುವ ಡಬ್ಲ್ಯೂ.ಎಚ್.ಓ ದ ಕೊವ್ಯಾಕ್ಸ್ ವೇದಿಕೆ ಈಗ ಕೊವಿಶೀಲ್ಡ್, ನೊವಾವ್ಯಾಕ್ಸ್ ಮತ್ತು ಜಾನ್ಸನ್ ಅಂಡ್ ಜಾನ್ಸನ್ ವ್ಯಾಕ್ಸೀನ್ ಮೇಲೆ ಅವಲಂಬಿಸಿದೆ. ಇವು ಈಗ ಬಡಜಗತ್ತಿನ ಆಶಾಕಿರಣಗಳಾಗಿವೆ. ಈ ವೇದಿಕೆಯನ್ನು ಜಿ.ಎ.ವಿ.ಐ ಮತ್ತು ಸಿ.ಇ.ಪಿ.ಐ ನಿರ್ವಹಿಸುತ್ತಿವೆ. ಇವು ಇನ್ನೂ ಚೀನಾ ಮತ್ತು ರಶ್ಯಾದ ವ್ಯಾಕ್ಸೀನುಗಳಿಗೆ ಅನುಮತಿ ನೀಡಿಲ್ಲ. ಕೊವಿದ್ ಕಾರ್ಯಕ್ರಮ ನಿರ್ವಹಿಸುತ್ತಿರುವ ಡಬ್ಲ್ಯೂ.ಎಚ್.ಓ, ಜಿ.ಎ.ವಿ.ಐ ಮತ್ತು ಸಿ.ಇ.ಪಿ.ಐ ಚೀನಾದ ಪ್ರಭಾವದಲ್ಲಿ ಕೆಲಸ ಮಾಡುತ್ತಿವೆ ಎಂದು ಮಾಜಿ ಯು.ಎಸ್ ಅಧ್ಯಕ್ಷ ಟ್ರಂಪ್ ಆಪಾದಿಸಿದ್ದರು. ಆದರೆ ಅವು ನಿಜವಾಗಿಯೂ ಬಿಲ್ ಮತ್ತು ಮೆಲಿಂದಾ ಗೇಟ್ಸ್ ಫೌಂಡೇಶನ್ ನ ಪ್ರಭಾವದಲ್ಲಿವೆ. ಯುರೋ ಕೂಟ ಸಹ ರಶ್ಯಾ, ಚೀನಾ ದ ವ್ಯಾಕ್ಸೀನುಗಳಿಗೆ ಇನ್ನೂ ಅನುಮತಿ ನೀಡುವ ಮನಸ್ಸು ಮಾಡಿಲ್ಲ. ರಶ್ಯಾ ಮತ್ತು ಚೀನಾ ದ ವ್ಯಾಕ್ಸೀನುಗಳಿಗೆ ಅನುಮತಿ ನೀಡದಿದ್ದರೆ ಬಡ ದೇಶಗಳಿಗೆ ಕೊವಿದ್ ವ್ಯಾಕ್ಸೀನ್ ಆಕಾಶಕುಸುಮ ಆಗಬಹುದು.

ಈ ನಡುವೆ ಡಬ್ಲ್ಯೂ.ಟಿ.ಓ ಒಪ್ಪಂದದ (ಪೇಟೆಂಟ್ ಇತ್ಯಾದಿ) ಬೌದ್ಧಿಕ ಹಕ್ಕುಗಳನ್ನು ಕೊವಿದ್ ವ್ಯಾಕ್ಸೀನಿಗೆ ಅಮಾನತಿನಲ್ಲಿಡುವ ಡಬ್ಲ್ಯೂ.ಎಚ್.ಓ ದ ಪ್ರಸ್ತಾವಕ್ಕೆ ಇವೇ ಶ್ರೀಮಂತ ದೇಶಗಳ ಸರಕಾರಗಳು ಪ್ರತಿರೋಧ ಒಡ್ಡಿದ್ದವು. ಈ ಶ್ರೀಮಂತ ದೇಶಗಳ ಸರಕಾರಗಳು ಮತ್ತು ಆಳುವವರಿಗೆ ಕೆಲವು ದೈತ್ಯ ಔಷಧಿ ಕಂಪನಿಗಳ ಶತಕೋಟ್ಯಾಂತರ ಡಾಲರುಗಳ ಲಾಭವೇ ಆದ್ಯತೆ. ನೂರಾರೂ ಕೋಟಿ ಜನರ ಜೀವ ರಕ್ಷಣೆಯಲ್ಲ. ಇದು ಹಿಂದೆ ಏಡ್ಸ್ ವ್ಯಾಕ್ಸೀನ್ ನಲ್ಲೂ ಕಂಡುಬಂದಿತ್ತು. ಇಂತಹ ಮಹಾಸೋಂಕಿನ ಸಂದರ್ಭದಲ್ಲೂ ಯಾವುದೇ ಬದಲಾವಣೆಯಾದ ಲಕ್ಷಣವಿಲ್ಲ. ■



ಬದುಕಿನ ದಾರಿ ತೋರಿಸದ ಜೀತ ವಿಮುಕ್ತಿ ಪ್ರಕರಣ, ಭೂಮಿ ಮತ್ತು ಪುನರ್ವಸತಿಗಾಗಿ

ಹೋರಾಟಕ್ಕಿಳಿದ ಗಂಗೂರು ಜೀತ ವಿಮುಕ್ತರು

ಹೆಚ್.ಆರ್. ನವೀನ್ ಕುಮಾರ್, ಹಾಸನ

ಆ ಕಣ್ಣುಗಳಲ್ಲಿ ಅಘಾದವಾದ ನಿರೀಕ್ಷೆಗಳು ಮಾತ್ರವಲ್ಲ ತಮ್ಮ ಬದುಕನ್ನ ಬೀದಿಪಾಲು ಮಾಡಿದ ಆಳುವ ವರ್ಗದ ವಿರುದ್ಧ ಆಕ್ರೋಶ ಮತ್ತೊಂದೆಡೆ ನಮ್ಮ ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇನೋ ಎಂಬ ಹತಾಶ ಭಾವನೆ ಇವೆಲ್ಲವು ಅವರ ಮುಖಭಾವದಲ್ಲಿ ಎದ್ದು ಕಾಣುತ್ತಿದ್ದವು. ಕಿತ್ತುತಿನ್ನುವ ಬಡತನ, ಬಡಕಲು ದೇಹಗಳು, ಮುರುಕಲು ಮನೆಗಳು ಇವೇ ಅವರ ಆಭರಣ. ನಾನು ಮಾತನಾಡಲು ಹೊರಟಿರುವುದು ಮತ್ತಾರ ಬಗ್ಗೆಯೂ ಅಲ್ಲ 20–30 ವರ್ಷಗಳ ಕಾಲ ಜೀತ ಮಾಡಿ ನಂತರ ಜೀತ ವಿಮುಕ್ತರಾದರೂ ಜೀತ ಮಾಡುತ್ತಿದ್ದಾಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಯಾವುದೇ ವ್ಯತ್ಯಾಸವಿಲ್ಲದಂತೆ ಬದುಕುತ್ತಿರುವ ಗಂಗೂರು ಜೀತವಿಮುಕ್ತರ ಬಗ್ಗೆ ಮಾತನಾಡುತ್ತಿದ್ದೇನೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಹೋಬಳಿಯ ಗಂಗೂರು ಗ್ರಾಮದಲ್ಲಿ 1974 ರಿಂದ 91 ಜನ ಆದಿದ್ರಾವಿಡ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರು ಮೇಲ್ಜಾತಿಯವರ ಮನೆಗಳಲ್ಲಿ ಜೀತಮಾಡುತ್ತಿದ್ದರು. 1994 ರಲ್ಲಿ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಜಿಲ್ಲಾಡಳಿತ ಇವರನ್ನು ಪಟ್ಟಿ ಮಾಡಿ ಜೀತದಿಂದ ವಿಮುಕ್ತಿಗೊಳಿಸಿ ಇವರನ್ನು 'ಜೀತವಿಮುಕ್ತರು" ಎಂದು ಘೋಷಿಸಿತು. ಈ ಪ್ರಕರಣ ಗಂಗೂರು ಜೀತ ವಿಮುಕ್ತರ ಪ್ರಕರಣವೆಂದೆ ರಾಜ್ಯದಲ್ಲಿ ದೊಡ್ಡ ಸುದ್ದಿಯನ್ನು ಮಾಡಿತ್ತು. 1994 ರಲ್ಲಿ ರಾಜ್ಯದ ಪ್ರಮುಖ ದಲಿತ ಹೋರಾಟಗಾರರಾಗಿದ್ದ ಹಾಸನದವರೇ ಆದ ಬಿ.ವಿ.ಚಂದ್ರಪ್ರಸಾದ್ ತ್ಯಾಗಿಯವ ನೇತೃತ್ವದಲ್ಲಿ ದಲಿತ ಸಂಘಟನೆಯಿಂದ ನಡೆದ ಚಳುವಳಿಯ ಭಾಗವಾಗಿ ಇವರನ್ನು ಜೀತದಿಂದ ಮುಕ್ತಿಗೊಳಿಸಲು ಸಾಧ್ಯವಾಯಿತು.

ಹೀಗೆ ಜೀವನಕ್ಕೆ ಯಾವುದೇ ಆಸರೆಯಿಲ್ಲದೆ ಬದುಕಿಗಾಗಿ ಮೇಲ್ಜಾತಿಯವರ ಮನೆಗಳಲ್ಲಿ ಸಾಲಮಾಡಿ ಅದರ ಬಡ್ಡಿ ಕಟ್ಟುವ ಸಲುವಾಗಿ ಮತ್ತು ಜೀವನ ನಡೆಸುವ ಸಲುವಾಗಿ ಹತ್ತಾರು ವರ್ಷಗಳು ಜೀತ ಮಾಡುತ್ತಿದ್ದರೂ ಇದು ಜೀತ ಪದ್ಧತಿ ಇದನ್ನು ಮಾಡುವುದು, ಮಾಡಿಸುವುದು ಎರಡೂ ಕಾನೂನಿನ ಪ್ರಕಾರ ಅಪರಾಧ ಎಂಬ ಹರಿವೇ ಇಲ್ಲದೆ ಬಿಟ್ಟಿ ದುಡಿಯುತ್ತಿದ್ದರು. ಸರ್ಕಾರ ಇವರನ್ನು ಜೀತದಿಂದ ಮುಕ್ತಿಗೊಳಿಸಿತು. ಆದರೆ ಇವರು ಬದುಕು ಕಟ್ಟಿಕೊಳ್ಳಲು ಬೇಕಾದ ಅಗತ್ಯ ವ್ಯವಸ್ಥೆಗಳನ್ನು ನಿರ್ಮಾಣ ಮಾಡಲಿಲ್ಲ. ಮಾತ್ರವಲ್ಲದೆ ಇವರನ್ನು ಜೀತದಿಂದ ಬಿಡಿಸುವುದು ಮಾತ್ರ ನನ್ನ ಕರ್ತವ್ಯ ಉಳಿದದ್ದಕ್ಕೂ ನಮಗೂ ಯಾವ ಸಂಭಂದವೂ ಇಲ್ಲ ಎಂಬಂತೆ ಅಧಿಕಾರಿಗಳು ಇದುವರೆಗು ನಡೆದುಕೊಂಡಿದ್ದಾರೆ. ಜೀತ ವಿಮುಕ್ತರೆಂದು ಘೋಷಣೆಯಾಗಿ 27 ವರ್ಷಗಳು ಕಳೆದಿದ್ದರೂ ಇವರ ಬದುಕು ಮಾತ್ರ ಹಸನಾಗಿಲ್ಲ. ಮಾತ್ರವಲ್ಲದೆ ಇವರು ಆಡುವ ಮಾತುಗಳು ಅತ್ಯಂತ ಗಾಬರಿ ಹುಟ್ಟಿಸುತ್ತವೆ. ಗೋವಿಂದಯ್ಯ ಎಂಬ 65 ವರ್ಷದ ಹಿರಿಯರೊಬ್ಬರು ಹೇಳುತ್ತಾರೆ "ನಾವು ಜೀತ ಮಾಡುತ್ತಿದ್ದಾಗ ಕನಿಷ್ಟ ನಮಗೆ ಮಾಡಲು ಕೆಲಸವಾದರೂ ಇತ್ತು. ಇದರಿಂದ ನಾವು ಹೊಟ್ಟೆಗೆ ಹಿಟ್ಟು ತಿಂದು ಜೀವನವನ್ನಾದರೂ ಮಾಡುತ್ತಿದ್ದೆವು, ಆದರೆ ಸರ್ಕಾರ ನಮ್ಮನ್ನ ಜೀತದಿಂದ ಬಿಡಿಸಿತು. ಈಗ ಮಾಡಲು ಕೆಲಸವಿಲ್ಲ, ಮೇಲ್ ಜಾತಿಯ ಜನ ಭಯದಿಂದ ನಮಗೆ ಕೆಲಸವನ್ನೂ ನೀಡುತ್ತಿಲ್ಲ, ಗೊತ್ತಿರುವುದು ವ್ಯವಸಾಯದ ಕೆಲಸ ಅದನ್ನು ಮಾಡಲು ಭೂಮಿಯಿಲ್ಲ, ಸರ್ಕಾರವೂ ಯಾವುದೇ ಕೆಲಸವನ್ನೂ ಕೊಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಹೇಗೆ ಜೀವನ ಮಾಡಬೇಕು" ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಗಳು ಸರಿಯಾಗಿಯೇ ಇದ್ದವು ಆದರೆ ಈ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಆಳುವ ವರ್ಗ ಮೌನವಾಗಿರುವುದು ಅಥವ ಇವರನ್ನು ನಿರ್ಲಕ್ಷಿಸಿರುವುದು ದುರಂತೇ ಸರಿ.

ಆದರೆ ಸರ್ಕಾರಿ ಕಡತದಲ್ಲಿ ಮಾತ್ರ ಜೀತ ವಿಮುಕ್ತರ ಬದುಕನ್ನ ಹಸನು ಮಾಡಲು ಬೇಕಾದ



ಎಲ್ಲ ರೀತಿಯ ಶಿಫಾರಸ್ಸುಗಳನ್ನು ಸರ್ಕಾರ ಮಾಡಿದೆ ಆದರೆ ವಾಸ್ತವದಲ್ಲಿ ಇವುಗಳಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. 2003 ರಲ್ಲಿ ಜೀತ ಪದ್ಧತಿ ಕುರಿತು ನಡೆದ ಎರಡು ದಿನಗಳ ಸರ್ಕಾರಿ ಕಾರ್ಯಾಗಾರದಲ್ಲಿ ಕೆಲವು ಶಿಫಾರಸ್ಸುಗಳನ್ನು ಸರ್ಕಾರ ಸೂಚಿಸಿದೆ.

1. ಜೀತ ವಿಮುಕ್ತರಿಗೆ ಕೃಷಿಯಲ್ಲಿ ಆಸಕ್ತಿ ಇದ್ದಲ್ಲಿ, ವ್ಯವಸಾಯ ಯೋಗ್ಯ ಸರ್ಕಾರಿ ಜಮೀನುಗಳನ್ನು ಗುರುತಿಸಿ ಮಂಜೂರು ಮಾಡುವುದು ಹಾಗೂ ಕೃಷಿ ಸಲಕರಣೆಗಳನ್ನು ಒದಗಿಸಿವುದು. ಬಿಡುಗಡೆ ಹೊಂದಿದ ಜೀತ ವಿಮುಕ್ತರಿಗೆ ಜೀವನೋಪಾಯಕ್ಕಾಗಿ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯಡಿಯಲ್ಲಿ ಕೂಲಿ ಕೆಲಸ ಒದಗಿಸಿ, ಅಕ್ಕಿ ಹಾಗು ಕೂಲಿಯನ್ನು ಒದಗಿಸುವುದು.
2. ಜೀತ ವಿಮುಕ್ತರಿಗೆ ಕೃಷಿಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದಲ್ಲಿ, ಅಂತಹ ಚಟುವಟಿಕೆಗಳ ವೃತ್ತಿಪರ ಬೆಳವಣಿಗೆಗೆ ಸ್ಥಳೀಯ ಬ್ಯಾಂಕುಗಳ ಮುಖಾಂತರ ಕನಿಷ್ಠ ಬಡ್ಡಿದರದಲ್ಲಿ ಅಗತ್ಯ ಸಾಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಹಾಲಿ ಅನುಷ್ಠಾನಗೊಳಿಸುತ್ತಿರುವ ಎಸ್‌ಜಿಎಸ್‌ವೈ ಯೋಜನೆಯಲ್ಲಿ ಅವರನ್ನು ಆಯ್ದುಕೊಳ್ಳುವುದು.
3. ಸರ್ಕಾರದ ಎಲ್ಲಾ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವಾಗ ಪ್ರಥಮ ಆಧ್ಯತೆಯನ್ನು ಜೀತ ವಿಮುಕ್ತರಿಗೂ ಹಾಗೂ ಬಾಲಜೀತ ಕಾರ್ಮಿಕರ ಕುಟುಂಬದ ಒಬ್ಬ ಹಿರಿಯ ಸದಸ್ಯರಿಗೂ ನೀಡುವ ಮುಖಾಂತರ ಸಂಪೂರ್ಣ ಪುನರ್ವಸತಿಯನ್ನು ಕಲ್ಪಿಸುವುದು.

ಆದರೆ ಈ ಮೇಲಿನ ಶಿಫಾರಸ್ಸುಗಳಲ್ಲಿ ಯಾವ ಶಿಫಾರಸ್ಸು ಕಳೆದ 27 ವರ್ಷಗಳಿಂದ ಗಂಗೂರಿನಲ್ಲಿ ಜಾರಿಯಾಗಿಲ್ಲ. ಮಾತ್ರವಲ್ಲದೆ ಜೀತ ಮಾಡುತ್ತಿರುವಾಗಲೇ ಕೆಲವರು ಊರಿನ ಅಕ್ಕಪಕ್ಕದಲ್ಲಿರುವ ಪಾಳುಬಿದ್ದಿದ್ದ ಸರ್ಕಾರಿ ಅರಣ್ಯ ಜಾಗವನ್ನು ಉಳುಮೆ ಮಾಡಿ 1983ರಲ್ಲಿ ಸಕ್ರಮೀಕರಣಕ್ಕಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ ಹಾಗೂ ಜೀತದಿಂದ ಮುಕ್ತಿಯಾದ ಮೇಲೂ ಅದೇ ಸರ್ಕಾರಿ ಜಾಗವನ್ನ ಊರಿನವರೆಲ್ಲ ಸೇರಿ ಉಳುಮೆ ಮಾಡಲು ಪ್ರಾರಂಬಿಸಿದ್ದಾರೆ. ಈ ಜಾಗ ಅರಣ್ಯ ಇಲಾಖೆಗೆ ಸಂಬಂದಿಸಿದ್ದೆಂದು ಉಳುಮೆ ಮಾಡುತ್ತಿದ್ದ ಜೀತ ವಿಮುಕ್ತರ ಮೇಲೆ ಅರಣ್ಯ ಇಲಾಖೆ ಪ್ರಕರಣಗಳನ್ನು ಧಾಖಲಿಸಿದೆ. ಆದ್ದಾಗ್ಯೂ ಜೀವನಕ್ಕೆ ಬೇರೆ ದಾರಿ ಇಲ್ಲದೆ ಅದೇ ಸರ್ಕಾರಿ ಭೂಮಿಯನ್ನು ಉಳುಮೆ ಮಾಡಲು ತೀರ್ಮಾನಿಸಿ ಪಾಳು ಭೂಮಿಯನ್ನು ಹಸನು ಮಾಡಿ ಅದರಲ್ಲಿ ರಾಗಿ, ಜೋಳ, ಹುರುಳಿಯನ್ನು ಬೆಳೆಯಲು ಪ್ರಾರಂಬಿಸಿದ್ದರು. ಇತ್ತೀಚೆಗೆ ಅಂದರೆ 1 ಏಪ್ರಿಲ್ 2021 ರಂದು ಅರಣ್ಯ ಇಲಾಖೆಯವರು ಉಳುಮೆ ಮಾಡುತ್ತಿದ್ದ ಜಾಗವನ್ನು ಮೀಸಲು ಅರಣ್ಯವೆಂದು ಖುಲ್ಲಾ ಮಾಡಿಸಲು ಜೆಸಿಬಿಗಳ ಮೂಲಕ ಸುತ್ತಲೂ ಸರಹದ್ದನ್ನು ಗುರುತಿಸಿ ಗುಂಡಿಗಳನ್ನು ನಿರ್ಮಾಣ ಮಾಡಿದ್ದಾರೆ. ಆ ಜಾಗದಲ್ಲಿ ಗಿಡಗಳನ್ನು ನೆಡಲು ಬೇಕಾದ ಗುಂಡಿಗಳನ್ನು ತೆಗೆಯುತ್ತಿದ್ದಾರೆ. ಈ ಜಾಗದ ಪಕ್ಕದಲ್ಲೇ ನೀಲಗಿರಿ ಕಾಡು ಇದೆ. ನೀಲಗಿರಿ ಅಂತರ್ಜಲವನ್ನು ಸಂಪೂರ್ಣ ಹೀರುತ್ತದೆ ಹಾಗಾಗಿ ನೀಲಗಿರಿ ಅರಣ್ಣೀಕರಣವನ್ನು ನಿಷೇಧಿಸಿದ್ದರೂ ಅರಣ್ಯ ಇಲಾಖೆಯವರು ಮತ್ತೆ ಮತ್ತೆ ಇದೇ ನೀಲಗಿರಿಗಳನ್ನು ನೆಟ್ಟು ರೈತರಿಗೆ ಮತ್ತು ಅಂತರ್ಜಲಕ್ಕೆ ಮರಣ ಶಾಸನ ಬರೆಯುತ್ತಿದ್ದಾರೆ.

ಈ ವಿಷಯ ತಿಳಿದು ಮಧ್ಯಪ್ರವೇಶ ಮಾಡಿದ ದಲಿತ ಹಕ್ಕುಗಳ ಸಮಿತಿ (ಡಿಹೆಚ್‌ಎಸ್) ತೆರವು ಕಾರ್ಯಾಚರಣೆಯನ್ನು ತಡೆಯಲು ಪ್ರಯತ್ನಿಸಿ ಸ್ಥಳದಲ್ಲೇ ಪ್ರತಿಭಟನೆ ನಡೆಸಲಾಗಿದೆ. ಸ್ಥಳಕ್ಕೆ ಆಗಮಿಸಿದ ತಹಸಿಲ್ದಾರರ ಭರವಸೆಯ ಮೇಲೆ ಕೂಡಲೇ ಸಭೆ ಕರೆದು ಸಮಸ್ಯೆಯನ್ನು ಬಗೆಹರಿಸುವ ಆಶ್ವಾಸನೆಯೊಂದಿಗೆ ಪ್ರತಿಭಟನೆಯನ್ನು ನಿಲ್ಲಿಸಲಾಗಿದೆ. ನಂತರ ಈ ಕುರಿತು ತಾಲ್ಲೂಕು ಆಡಳಿತದಿಂದ ಯಾವುದೇ ಪ್ರತಿಕ್ರಿಯೆ ಸಿಗದ ಕಾರಣಕ್ಕೆ ಗಂಗೂರಿನ ಎಲ್ಲಾ ಜೀತ ವಿಮುಕ್ತರು 3 ಏಪ್ರಿಲ್ 2021 ರಂದು ಹಾಸನ ಜಿಲ್ಲಾಧಿಕಾರಿ ಕಛೇರಿ ಎದುರು ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಿ ಜಿಲ್ಲಾಡಳಿತಕ್ಕೆ ಮನವಿಯನ್ನು ಸಲ್ಲಿಸಲಾಗಿದೆ.

ಈ ಪ್ರತಿಭಟನೆಯಲ್ಲಿ ಡಿಎಚ್‌ಎಸ್ ಜಿಲ್ಲಾ ಸಂಚಾಲಕರಾದ ಎಂ.ಜಿ.ಪೃಥ್ವಿ ಮುಖಂಡರಾದ ಬಿ.ಎಸ್.ಲಿಂಗರಾಜು, ಡಾ.ಮಧುಸೂಧನ, ರಾಜು ಸಿಗರನಹಳ್ಳಿ ಮತ್ತು ಹಿರಿಯ ದಲಿತ ಮುಖಂಡರಾದ ಹೆಚ್.ಕೆ.ಸಂದೇಶ್, ಕೃಷ್ಣದಾಸ್, ರಾಜಶೇಖರ್, ವಿಜಯ್‌ಕುಮಾರ್ ದಂಡೋರ ಮುಂತಾದವರು ಭಾಗವಹಿಸಿದ್ದರು.

ಜೀತ ವಿಮುಕ್ತರಿಗೆ ಪುನರ್ವಸತಿ ಕಲ್ಪಿಸಿ ಅವರಿಗೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಹೋರಾಟವನ್ನು ಮುಂದುವರೆಸಲು ಗಂಗೂರು ಜೀತ ವಿಮುಕ್ತರು ಒಕ್ಕೊರಲಿನಿಂದ ನಿರ್ಧರಿಸಿದ್ದು ಗಂಗೂರು ಜೀತ ವಿಮುಕ್ತರು ಮತ್ತು ಭೂರಹಿತರ ಹೋರಾಟ ಸಮಿತಿಯನ್ನು ರಚಿಸಿಕೊಂಡಿದ್ದಾರೆ.

ಒಂದೆಡೆ ಸಾವಿರಾರು ಎಕ್ಕರೆ ಸರ್ಕಾರಿ/ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಲೂಟಿ ಮಾಡಿ, ಲಾಭ ಮಾಡುತ್ತಿರುವವರನ್ನು ಮಾತನಾಡಿಸಲೂ ಸಾಧ್ಯವಾಗದ ಅರಣ್ಯ ಇಲಾಖೆ ಮತ್ತು ಸರ್ಕಾರ ಜೀವನೋಪಾಯಕ್ಕಾಗಿ 1–2 ಎಕ್ಕರೆ ಪಾಳು ಭೂಮಿಯನ್ನು ಬಡವರು, ಜೀತ ವಿಮುಕ್ತರು ಉಳುಮೆ ಮಾಡುತ್ತಿದ್ದರೆ ಅವರನ್ನು ತೆರವುಗೊಳಿಸಲು ತುದಿಗಾಲ ಮೇಲೆ ನಿಂದಿದೆ. ಇದು ಸರ್ಕಾರದ ಬಡಜನ ವಿರೊಧಿ ದೋರಣೆಯನ್ನು ಸ್ಪಷ್ಟಪಡಿಸುತ್ತಿದೆ. ಭೂಮಿಗಾಗಿ ಹೋರಾಟವೆಂಬ ಏಕೈಕ ಅಸ್ತ್ರವನ್ನು ಮುಂದಿಟ್ಟುಕೊಂಡು ಗಂಗೂರು ಜೀತ ವಿಮುಕ್ತರು ಬೀದಿಗಿಳಿದಿದ್ದಾರೆ. ಇವರ ಬೇಡಿಕೆಗಳು ಈಡೇರಲು, ಸರ್ಕಾರದ ಮೇಲೆ ಒತ್ತಡ ತರಲು ಪ್ರಜ್ಞಾವಂತ ನಾಗರೀಕರು ಇವರ ಚಳುವಳಿಗೆ ಕೈಜೋಡಿಸಬೇಕಿದೆ.







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**